# ಪ್ರಸ್ತಾವನೆ

ಘಟ್ಟು ಪ್ರಭಾಕರ ರಾಯರು ನನ್ನ ಆತ್ಮೀಯ ಗೆಳೆಯರಲ್ಲೊಬ್ಬರು. ಸುಮಾರು ಎರಡು ದಶಕಗಳಿಗೂ ಮೀರಿದ ಈ ನಮ್ಮ ಗೆಳೆತನ ಇಂದಿಗೂ ಹೊಚ್ಚ ಹೊಸದಾಗಿಯೇ ಉಳಿದಿದೆ. ಪ್ರಾಯದಲ್ಲಿ ನಾನು ಅವರಿಗಿಂತಲೂ ಹಿರಿಯನಾದರೂ ಅವರ ಬಗ್ಗೆ ನನಗೆ ಅಪಾರ ಗೌರವವಿದೆ. ಅವರ ಕ್ರಿಯಾಶೀಲತೆ, ಸಂಪ್ರದಾಯಬದ್ಧತೆ, ಪ್ರಾಚೀನ ಶಾಸ್ತ್ರಗಳು (ಅದರಲ್ಲೂ ಯಾಜ್ಞವಲ್ಕೀಯ ಸೂತ್ರಗಳು) ಮತ್ತು ಮಧ್ವ ಮತ ಸಿದ್ಧಾಂತಗಳಲ್ಲಿನ ಅಪಾರ ಶ್ರದ್ಧೆ ಮುಂತಾದವು ನನ್ನನ್ನು ಅವರ ಬಳಿಗೆ ಸೆಳೆದು ಈಗ ನಾನು ಅವರ ಬಂಧುವರ್ಗದವರಲ್ಲಿಯೇ ಒಬ್ಬನಾಗುವ ಅರ್ಹತೆಯನ್ನು ಪಡೆದಿದ್ದೇನೆ.

ಶ್ರೀ ರಾಯರು ಈಗ ಎಪ್ಪತ್ತು ವಸಂತಗಳನ್ನು ಕಂಡ ಪುಣ್ಯಶಾಲಿಗಳಾಗಿದ್ದಾರೆ. ಅವರ ಕುಟುಂಬ ತುಂಬಾ ಸುಸಂಸ್ಕೃತವಾದದ್ದು. ಇತ್ತೀಚೆಗೆ ದೈವಾಧೀನರಾದ ಅವರ ತಾಯಿ ನಾಲ್ಕು ತಲೆಮಾರುಗಳನ್ನು ಕಂಡ ಹಿರಿಯ ಜೀವ. ರಾಯರು ಈಗ ತಮ್ಮ ಪತ್ನಿ ಮತ್ತು ಮಕ್ಕಳು ಮೊಮ್ಮಕ್ಕಳ ಜೊತೆಯಲ್ಲಿ ಸಮೃದ್ಧ ಮತ್ತು ಸಂತೃಪ್ತ ಬದುಕನ್ನು ನಡೆಸುತ್ತಿದ್ದಾರೆ. ವಿವಿಧ ಸಮಾಜ–ಮುಖಿ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವ ಅವರು ಬೆಂಗಳೂರಿನ ಯಲಹಂಕ ಉಪನಗರದ ಶ್ರೀ ಗುರುರಾಜ ಸೇವಾ ಸಮಿತಿಯ ಅಧ್ಯಕ್ಷರಾಗಿರುವರಲ್ಲದೆ ಆ ಸಂಸ್ಥೆಯ ಸಂಸ್ಥಾಪಕ ಕಾರ್ಯಕರ್ತರಾಗಿ ಸುಮಾರು ಇಪ್ಪತ್ತೈದು ವರ್ಷಗಳಿಂದಲೂ ಅವಿರತವಾಗಿ ದುಡಿದು ಅದರ ಏಳಿಗೆಗಾಗಿ ಶ್ರಮಿಸಿದ್ದಾರೆ. ಇವರ ಧರ್ಮ ಪತ್ನಿಯವರಾದ ಶ್ರೀಮತಿ ಶಾಂತಾಮಣಿಯವರೂ ಸಹ ಅನೇಕ ಸಾಮಾಜಿಕ ಚಟುವಟಿಕೆಗಳಲ್ಲಿ ತೊಡಗಿಕೊಂಡಿದ್ದು ಮಹಿಳಾ ಸಹಕಾರಿ ಚಳುವಳಿಯ ಮುಂಚೂಣಿಯಲ್ಲಿ ಸಕ್ರಿಯವಾಗಿ ಶ್ರಮಿಸುತ್ತಿದ್ದಾರೆ. ಇವರಿಬ್ಬರ ದಾಂಪತ್ಯ ನಿಜವಾಗಿಯೂ ಅನುಕರಣೀಯವಾದದ್ದು. ಎಪ್ಪತ್ತರ ಈ ಭೀಮರಥಿ ಸಂದರ್ಭದಲ್ಲಿ ಈ ದಂಪತಿಗಳನ್ನು ಹಾರ್ದಿಕವಾಗಿ ಅಭಿನಂದಿಸುತ್ತ ಇವರು ದೈಹಿಕವಾಗಿ ಹಾಗೂ ಬೌದ್ಧಿಕವಾಗಿ ಭೀಮಕಾಯರಾಗಿ ಬೆಳೆಯುವಂತೆ ಭಗವಂತನು ಅನುಗ್ರಹಿಸಲೆಂದು ಪ್ರಾರ್ಥಿಸುತ್ತೇನೆ.

ಈ ಶುಭ ಸಂದರ್ಭದ ಸಂಸ್ಮರಣೆಗಾಗಿ ಪ್ರಕಟಿಸಲಾಗುತ್ತಿರುವ "ಸ್ತೋತ್ರ ಸಂಗಮ" ಸಂಚಿಕೆಯಲ್ಲಿ ನಾನು ಕನ್ನಡಕ್ಕೆ ಅನುವಾದಿಸಿರುವ "ಶ್ರೀ ಹರಿವಾಯುಸ್ತುತಿ" ಮತ್ತು "ದ್ವಾದಶ ಸ್ತೋತ್ರ" ಗಳನ್ನು ಮುದ್ರಿಸಲು ಅವಕಾಶ ಮಾಡಿಕೊಟ್ಟಿರುವ ಶ್ರೀ ರಾಯರು ಮತ್ತು ಅವರ ಕುಟುಂಬ ವರ್ಗಕ್ಕೆ ನಾನು ಋಣಿಯಾಗಿದ್ದೇನೆ.

ಶ್ರೀ ನಾರಾಯಣ ಪಂಡಿತಾಚಾರ್ಯ ವಿರಚಿತ "ಶ್ರೀ ಸುಮಧ್ವ ವಿಜಯ", ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯ ವಿರಚಿತ "ಶ್ರೀ ನರಸಿಂಹ ನಖ ಸ್ತುತಿ" ಮತ್ತು "ದ್ವಾದಶ ಸ್ತೋತ್ರಗಳು" ಮತ್ತು ಶ್ರೀ ತ್ರಿವಿಕ್ರಮ ಪಂಡಿತಾಚಾರ್ಯ ವಿರಚಿತ "ಶ್ರೀ ವಾಯು ಸ್ತುತಿ" ಇವುಗಳು ಮಾಧ್ವ ಸಾಹಿತ್ಯದ ಮಾಂಗಲ್ಯ ಕೃತಿಗಳು. ಇವು ಮೂರನ್ನೂ ಕನ್ನಡದಲ್ಲಿ ಪದ್ಯ ರೂಪದಲ್ಲಿ ಅನುವಾದಿಸುವ ಸೌಭಾಗ್ಯವನ್ನು ಕೇವಲ ಪಾಮರನಾದ ನನಗೆ ಶ್ರೀ ಹರಿ ಮತ್ತು ಶ್ರೀಮದಾಚಾರ್ಯರು ನನಗೆ ಕರುಣಿಸಿದ್ದಾರೆ. ನನ್ನ ಈ ಅನುವಾದದಲ್ಲಿ ಸಾಕಷ್ಟು ತಪ್ಪುಗಳಿರುವ ಸಾಧ್ಯತೆಗಳು ಸಹಜವಾಗಿಯೇ ಇರಬಹುದು. ಸಹೃದಯ ಓದುಗರು ಇಂತಹ ತಪ್ಪುಗಳನ್ನು ನನ್ನ ಗಮನಕ್ಕೆ ತಂದರೆ ನಾನು ಅವರಿಗೆ ಋಣಿಯಾಗಿರುತ್ತೇನೆ.

ಇಂತಹ ಮಹತ್ವದ ಪ್ರಕಟಣೆಯಲ್ಲಿ ನನ್ನ ಬರಹವನ್ನೂ ಸೇರಿಸುವ ಅವಕಾಶವನ್ನು ಮಾಡಿಕೊಟ್ಟ ಶ್ರೀ ಪ್ರಭಾಕರ ರಾಯರಿಗೂ ಮತ್ತು ಅವರ ಕುಟುಂಬದವರಿಗೂ ನಾನು ಮತ್ತೊಮ್ಮೆ ನನ್ನ ಹಾರ್ದಿಕ ಧನ್ಯವಾದಗಳನ್ನು ಸಲ್ಲಿಸುತ್ತೇನೆ.


**ಇ. ಡಿ. ನರಹರಿ**

೫೧೧೨, ನಂದಿ ಎನ್ಕ್ಲೇವ್

ಬನಶಂಕರಿ ಮೂರನೆಯ ಹಂತ

ಬೆಂಗಳೂರು – ೫೬೦ ೦೮೫

ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯ ವಿರಚಿತ

# ದ್ವಾದಶ ಸ್ತೋತ್ರ

(ಮೂಲ)

## ಪ್ರಥಮೋಧ್ಯಾಯಃ

ವಂದೇ ವಂದ್ಯಂ ಸದಾನಂದಂ ವಾಸುದೇವಂ ನಿರಂಜನಮ್ ।
ಇಂದಿರಾಪತಿಮಾದ್ಯಾದಿ ವರದೇಶ ವರಪ್ರದಮ್ ॥ ೧

ನಮಾಮಿ ನಿಖಿಲಾಧೀಶ ಕಿರೀಟಾಘೃಷ್ಟಪೀಟವತ್ ।
ಹೃತ್ತಮಃ ಶಮನೇಽಕಾರ್ಭಂ ಶ್ರೀಪತೇಃ ಪಾದಪಂಕಜಂ ॥ ೨

ಜಾಂಬೂನದಾಂಬರಾಧಾರಂ ನಿತಂಬಂ ಚಿಂತ್ಯಮೀಶಿತುಃ ।
ಸ್ವರ್ಣಮಂಜೀರಸಂವೀತಂ ಆರೂಢಂ ಜಗದಂಬಯಾ ॥ ೩

ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯ ವಿರಚಿತ

# ದ್ವಾದಶ ಸ್ತೋತ್ರದ

ಕನ್ನಡ ಪದ್ಯಾನುವಾದ ಶ್ರೀ ಇ.ಡಿ. ನರಹರಿಯವರಿಂದ

## ಮೊದಲನೇ ಅಧ್ಯಾಯ

*ವಂದಿಪೆನು ವಂದ್ಯನೆ, ಓ, ಸದಾನಂದನೆ*
*ಓ, ವಾಸುದೇವನೆ, ಓ, ನಿರಂಜನನೆ*
*ಆ ಲಕುಮಿ ಬ್ರಹ್ಮರಿಗೆ, ದೇವಾದಿದೇವರಿಗೆ*
*ವರಗಳನು ಕೊಡುತಿರ್ಪ ಇಂದಿರಾಪತಿಯೆ ನಮನ* ೧

*ಮನದಲ್ಲಿ ಅಡಗಿರುವ ಅಜ್ಞಾನ ತಿಮಿರವನು*
*ದಿನಕರನ ಪರಿಯಲ್ಲಿ ಬಡಿದೋಡಿಸುವೆ ನೀನು*
*ಆ ಸುರರ ಮುಕುಟಗಳು ಬೀಳುವುವು ಕಾಲಡಿಗೆ*
*ಓ, ಶ್ರೀಪತಿಯೆ, ನಮಿಸುವೆನು ಪದಯುಗ್ಮ ಪಂಕಜಕೆ* ೨

*ಚಿನ್ನದುಡ್ಯಾಣದಲಿ ಶೋಭಿಸುತ ಮೆರೆದಿರುವ*
*ಜಗದಂಬೆ ಲಕುಮಿಗೆ ಆಶ್ರಯವ ನೀಡಿರುವ*
*ಸ್ವರ್ಣವರ್ಣದ ವಸನ ವಿಜೃಂಭಿಸುತ್ತಿರುವ*
*ಆ ನಿನ್ನ ಕಟಿಯನ್ನು ಶಿರಬಾಗಿ ನಮಿಸುವೆನು* ೩

ಉದರಂ ಚಿಂತ್ಯಮೀಶಸ್ಯ ತನುತ್ವೇಽಪ್ಯಖಿಲಂಭರಮ್ ।
ವಲಿತ್ರಯಾಂಕಿತಂ ನಿತ್ಯಂ ಆರೂಡಂ ಶ್ರಿಯೈಕಯಾ ॥ ೪

ಸ್ಮರಣೀಯಮುರೋ ವಿಷ್ಣೋಃ ಇಂದಿರಾವಾಸಮುತ್ತಮೈಃ ।
ಅನಂತಂ ಅಂತವದಿವ ಭುಜಯೋರಂತರಂಗತಂ ॥ ೫

ಶಂಖಚಕ್ರಗದಾಪದ್ಮಧರಾಶ್ಚಿಂತ್ಯಾ ಹರೇರ್ಭುಜಾಃ ।
ಪೀನವೃತ್ತಾ ಜಗದ್ರಕ್ಷಾ ಕೇವಲೋದ್ಯೋಗಿನೋಽನಿಶಂ ॥ ೬

ಸಂತತಂ ಚಿಂತಯೇತ್ಕಂಟಂ ಭಾಸ್ವತ್ಕೌಸ್ತುಭಭಾಸಕಂ ।
ವೈಕುಂಠಸ್ಯಾಖಿಲಾ ವೇದಾ ಉದ್ಗೀರ್ಯಂತೇಽನಿಶಂ ಯತಃ ॥ ೭

ಸ್ಮರೇತ ಯಾಮಿನೀನಾಥ ಸಹಸ್ರಾಮಿತಕಾಂತಿಮತ್ ।
ಭವತಾಪಾಪನೋದೀಡ್ಯಂ ಶ್ರೀಪತೇಃ ಮುಖಪಂಕಜಂ ॥ ೮

*ಮುಕುತಿಯನು ಆಶಿಪ ಭಕುತ ಜನರೆಲ್ಲ*
*ಶ್ರೀ ಹರಿಯ ಉದರವನು ಸ್ಮರಿಸುತ್ತಲಿರಬೇಕು*
*ಶ್ರೀಲಕುಮಿಯೋರ್ವಳೇ ಇದನು ಮುದ್ದಿಸಬಹುದು*
*ಮೂರು ರೇಖೆಗಳಿಂದ ಶೋಭಿಸಿಹ ಆ ಉದರ* ೪

*ಸ್ಮರಣೀಯವಾಗಿಹುದು ಶ್ರೀಹರಿಯ ವಕ್ಷ*
*ಇಂದಿರಾದೇವಿಯ ದಿವ್ಯ ಆವಾಸ*
*ಆದಿ–ಅಂತ್ಯಗಳಿರದ ಭುಜಗಳೆರಡರ ನಡುವೆ*
*ಭವ್ಯತೆಯ ತೋರುವುದು ಆ ದಿವ್ಯ ವಕ್ಷ* ೫

*ಪೀನ ವೃತ್ತಾಕೃತಿಯ ಆ ನಾಲ್ಕು ತೋಳುಗಳು*
*ಧರಿಸಿಹವು ಗದೆಯನ್ನು, ಶಂಖವನು, ಪದ್ಮಚಕ್ರಗಳನ್ನು*
*ಜಗದ ರಕ್ಷಣೆಗೈವ ಆ ದಿವ್ಯ ಭುಜಗಳನು*
*ಸರ್ವದಾ ಸ್ಮರಿಸುತ್ತ ಭಜಿಸಬೇಕು* ೬

*ಶ್ರಿಹರಿಯ ಕಂಠವದು ಅತಿ ದಿವ್ಯ ಕಂಠ*
*ಪ್ರಜ್ವಲಿಪ ಕೌಸ್ತುಭದ ಮಾಲೆ ಬೆಳಗಿಹುದಲ್ಲಿ*
*ವೈಕುಂಠದಿಂದಖಿಲ ವೇದಗಳನುಚ್ಚರಿಪ*
*ಆ ದಿವ್ಯ ಕಂಠವನು ಅನವರತ ಸ್ಮರಿಸಿರಿ ಭಕುತರೆಲ್ಲ* ೭

*ಶತಕೋಟಿ ಚಂದ್ರಮರ ಕಾಂತಿಯನು ಮೀರಿಸುವ*
*ಭವದ ದು:ಖವನೆಲ್ಲ ನೀಗಿಸುವ ಮುಖ ಕಮಲ*
*ಶ್ರೀಪತಿಯ ಆ ದಿವ್ಯ ವದನಾರವಿಂದವನು*
*ಸ್ಮರಿಸುತ್ತ, ಭಜಿಸುತ್ತ, ಆನಂದ ಪೊಂದೋಣ* ೮

ಪೂರ್ಣಾನನ್ಯ ಸುಖೋದ್ಭಾಸಿಂ ಅಂದಸ್ಮಿತಮಧೀಶಿತುಃ ।
ಗೋವಿಂದಸ್ಯ ಸದಾ ಚಿಂತ್ಯಂ ನಿತ್ಯಾನಂದಪದಪ್ರದಂ ॥ ೯

ಸ್ಮರಾಮಿ ಭವಸಂತಾಪ ಹಾನಿದಾಮೃತಸಾಗರಂ ।
ಪೂರ್ಣಾನಂದಸ್ಯ ರಾಮಸ್ಯ ಸಾನುರಾಗಾವಲೋಕನಂ ॥ ೧೦

ಧ್ಯಾಯೇದಜಸ್ರಮೀಶಸ್ಯ ಪದ್ಮಜಾದಿಪ್ರತೀಕ್ಷಿತಂ ।
ಭ್ರೂಭಂಗಂ ಪಾರಮೇಷ್ಟ್ಯಾದಿ ಪದದಾಯಿ ವಿಮುಕ್ತಿದಂ ॥ ೧೧

ಸಂತತಂ ಚಿಂತಯೇಽನಂತಂ ಅಂತಕಾಲೇ ವಿಶೇಷತಃ ।
ನೈವೋದಾಪುಃ ಗೃಣಂತೋಽನಂತಂ ಯದ್ಗುಣಾನಾಂ ಅಜಾದಯಃ ॥೧೨

॥ ಇತಿ ದ್ವಾದಶಸ್ತೋತ್ರೇ ಪ್ರಥಮೋಧ್ಯಾಯಃ ॥



*ಗೋವಿಂದನಾ ಮಧುರ ಮೃದು ಮಂದಹಾಸ*
*ಪರಿಪೂರ್ಣ, ಪರಮಸುಖಿ ಪರಮಾತ್ಮನಾ ನಗೆಯು*
*ಶೋಭಿಸುತ್ತಿಹುದಲ್ಲಿ ಪರಮ ಭವ್ಯತೆಯಲ್ಲಿ*
*ಆ ನಗೆಯ ಚಿಂತನೆಯು ಆನಂದ ನೀಡುವುದು* ೯

*ಭವ ತಾಪ ಪರಿಹಾರ ಶ್ರೀಹರಿಯ ಕೃಪೆಯಹುದು*
*ಅಂತಹ ಅಮೃತಕೆ ಆತನೇ ಸಾಗರನು*
*ಸಂಪೂರ್ಣ ಆನಂದ ರೂಪಿಯುವ ಶ್ರೀರಾಮ*
*ಆತನ ಅನುರಾಗ ಪಡೆವವನೆ ಧನ್ಯ* ೧೦

*ಪದ್ಮಜಾದಿಗಳೆಲ್ಲ ತವಕದಲಿ ನಿಂದು*
*ಶ್ರೀಹರಿಯ ಭ್ರೂಭಂಗ ಲಾಸ್ಯವನು ಕಾಂಬುವರು*
*ಮೋಕ್ಷಪದ ಕರುಣಿಸುವ ಆ ದಿವ್ಯ ಲಾಸ್ಯವನು*
*ಸಜ್ಜನರು ಅನವರತ ಚಿಂತಿಸಲೆ ಬೇಕ* ೧೧

*ಸಂತತವು ಚಿಂತಿಸುವೆ ಆ ಪರಮ ಪುರುಷನನು*
*ಅಂತ್ಯಕಾಲದಲಂತೂ ಅಡಿಗಡಿಗೆ ನೆನೆಯುವೆ*
*ಬ್ರಹ್ಮಾದಿ ದೇವಗಣ ಕೂಡ ಕೊಂಡಾಡುವರು*
*ಪರಿಪೂರ್ಣ ಆನಂದ ಸುಸ್ವರೂಪನನು.* ೧೨

ಕನ್ನಡ ಪದ್ಯಾನುವಾದದ
ಶ್ರೀದ್ವಾದಶಸ್ತೋತ್ರ ಮೊದಲನೇ ಅಧ್ಯಾಯವು ಮುಗಿದುದು

## ದ್ವಿತಿಯೋಧ್ಯಾಯಃ

ಸ್ವಜನೋದಧಿಸಂವೃದ್ಧಿ ಪೂರ್ಣಚಂದ್ರೋ ಗುಣಾರ್ಣವಃ ।
ಅಮಂದಾನಂದ ಸಾಂದ್ರೋ ನಃ ಸದಾವ್ಯಾದಿಂದಿರಾಪತಿಃ ॥ ೧

ರಮಾಚಕೋರೀವಿಧವೇ ದುಷ್ಟ ದರ್ಪೋದವಹ್ನಯೇ ।
ಸತ್ಪಾಂಥಜನಗೇಹಾಯ ನಮೋ ನಾರಾಯಣಾಯ ತೇ ॥ ೨

ಚಿದಚಿದ್ಭೇದಮಖಿಲಂ ವಿಧಾಯಾಧಾಯ ಭುಂಜತೇ ।
ಅವ್ಯಾಕೃತಗೃಹಸ್ಥಾಯ ರಮಾಪ್ರಣಯಿನೇ ನಮಃ ॥ ೩

ಅಮಂದಗುಣಸಾರೋಽಪಿ ಮಂದಹಾಸೇನ ವೀಕ್ಷಿತಃ ।
ನಿತ್ಯ ಮಿಂದಿರಯಾಽನಂದಸಾಂದ್ರೋ ಯೋ ನೌಮಿ ತಂ ಹರಿಮ್ ॥ ೪

ವಶೀ ವಶೋ ನ ಕಸ್ಯಾಪಿ ಯೋಽಜಿತೋ ವಿಜಿತಾಖಿಲಃ ।
ಸರ್ವಕರ್ತಾ ನ ಕ್ರಿಯತೇ ತಂ ನಮಾಮಿ ರಮಾಪತಿಮ್ ॥ ೫

## ಎರಡನೇ ಅಧ್ಯಾಯಃ

*ಸುಜನರೆಂಬುವ ಜಲಧಿ ಸಮೃದ್ಧಿ ಗೊಳಿಪ*
*ಪೂರ್ಣ ಚಂದ್ರನ ತೆರದಿ ಇಂದಿರಾಪತಿಯು*
*ಆನಂದ ಮತ್ತಿತರ ಸದ್ಗುಣಗಳಾಗರನು*
*ಸುಪ್ರಸನ್ನತೆಯನ್ನು ನಮಗೆ ಕರುಣಿಸಲಿ* ೧

*ಶ್ರೀ ರಮೆ ಎಂಬೊಂದು ಬೆಳ್ವಕ್ಕಿಯನ್ನು*
*ಮುದಗೊಳಿಪ ಚಂದ್ರಮನು ನಮ್ಮ ಶ್ರೀ ಹರಿಯು*
*ದುಷ್ಟರಿಗೆ ಅಗ್ನಿಯು; ಸನ್ಮಾರ್ಗ ಪಯಣಿಗರ ನೆಳಲ ದಾತ*
*ನಿನಗೆಮ್ಮ ನಮನ! ಓ, ನಾರಾಯಣ!* ೨

*ಈ ಜಗದ ಎಲ್ಲ ಜಡ-ಅಜಡಗಳ ಸೃಷ್ಟಿಸಿಹ*
*ಅವಕೆಲ್ಲಕೂ ಭೋಕ್ತೃ; ಆತ ವಿಧಾಯಕನು.*
*ಅವಿಕಾರ ವೈಕುಂಠ ಮಂದಿರದಿ ವಾಸಿಸುವ*
*ಶ್ರೀ ರಮಾಪ್ರಿಯನಿಗೆ ನಮ್ಮ ನಮನ* ೩

*ಆನಂದ ಗುಣಪೂರ್ಣ, ಸರ್ವಗುಣಸಂಪನ್ನ*
*ಮಂದಹಾಸದ ಮೊಗದ ದಿವ್ಯ ನೋಟ!*
*ಇಂದಿರೆಯು ನಿತ್ಯವೂ ಸಂತಸದಿ ಕಾಂಬುವ*
*ಶ್ರೀ ಹರಿಗೆ ಅನವರತ ವಂದಿಪೆವು ನಾವು* ೪

*ಎಲ್ಲರೂ ಅವನ ವಶ, ಅವನಾರ ವಶವಲ್ಲ!*
*ಎಲ್ಲರನೂ ಜಯಿಸಿದವ, ಆತ ಅಪರಾಜಿತ*
*ಎಲ್ಲರನೂ ಹುಟ್ಟಿಪನು ಅವಗೆ ಹುಟ್ಟಿಲ್ಲ*
*ಆ ರಮಾಪತಿಗೆ ನಮ್ಮ ನಮನ.* ೫

ಅಗುಣಾಯ ಗುಣೋದ್ರೇಕ ಸ್ವರೂಪಾಯಾದಿ ಕಾರಿಣೆ ।
ವಿದಾರಿತಾರಿಸಂಘಾಯ ವಾಸುದೇವಾಯ ತೇ ನಮಃ ॥ ೬

ಆದಿದೇವಾಯ ದೇವಾನಾಂ ಪತಯೇ ಸಾದಿತಾರಯೇ ।
ಅನಾದ್ಯಜ್ಞಾನಪರಾಯ ನಮಃ ಪಾರಾವರಾಶ್ರಯ ॥ ೭

ಅಜಾಯ ಜನಯಿತ್ರೇಸ್ಯ ವಿಜಿತಾಖಿಲದಾನವ ।
ಅಜಾದಿ ಪೂಜ್ಯಪಾದಾಯ ನಮಸ್ತೇ ಗರುಡಧ್ವಜ ॥ ೮

ಇಂದಿರಾಮಂದಸಾಂದ್ರಾಗ್ಯ ಕಟಾಕ್ಷಪ್ರೇಕ್ಷಿತಾತ್ಮನೇ ।
ಅಸ್ಮ ದಿಷ್ಟೈಕ ಕಾರ್ಯಾಯ ಪೂರ್ಣಾಯ ಹರಯೇ ನಮಃ ॥ ೯

॥ ಇತಿ ದ್ವಾದಶಸ್ತೋತ್ರೇ ದ್ವಿತೀಯೋಧ್ಯಾಯಃ ॥

*ನಿರ್ಗುಣನೂ ಅಹುದು, ಗುಣಪೂರ್ಣನೂ ಅಹುದು*
*ಬ್ರಹ್ಮದೇವಗೂ ಅವನೆ ಮೂಲ ಕಾರಣನು*
*ವೈರಿಗಳ ನಿವಹವನೇ ಬಡಿದಟ್ಟಿದವನು*
*ಆ ವಾಸುದೇವನಿಗೆ ನಮ್ಮ ನಮನ!*

*ಆದಿದೇವನು ಆತ, ದೇವಪಾಲಕನಾತ*
*ದುಷ್ಟಶಕ್ತಿಯ ದಿಟ್ಟ ಸಂಹಾರಕನು ಆತ*
*ಅನಾದಿ ಅಜ್ಞತೆಯ ಕಳೆಯುವಾತ*
*ಭಕುತರನು ಸರ್ವದಾ ಅರಸುವಗೆ ನಮನ*

*ಹುಟ್ಟಿಲ್ಲದವನವನು, ಜಗವ ಹುಟ್ಟಿಸಿದವನು*
*ಖೂಳ ರಕ್ಕಸರನು ಸದೆಬಡಿದನವನು*
*ಬ್ರಹ್ಮಾದಿಗಳು ನಮಿಪ ಪಾದವನು ಪಡೆದವನು*
*ಆ ಗರುಡ ವಾಹನಗೆ ನಮ್ಮ ನಮನ*

*ಇಂದಿರೆಯ ಒಲವಿನ ಆ ಮಧುರ ನೋಟ!*
*ಅದ ಕಂಡು ಸುಪ್ರೀತ ನಮ್ಮ ಪರಮಾತ್ಮ*
*ಭಕುತಜನ ಹಿತವವನ ಇಷ್ಟಕಾರ್ಯ*
*ಸಂಪೂರ್ಣ ಗುಣವಂತ ಆ ಹರಿಗೆ ನಮನ*

ಕನ್ನಡ ಪದ್ಯಾನುವಾದದ
ಶ್ರೀದ್ವಾದಶಸ್ತೋತ್ರ ಎರಡನೇ ಅಧ್ಯಾಯವು ಮುಗಿದುದು

## ತೃತಿಯೋಧ್ಯಾಯಃ

ಕುರು ಭುಂಕ್ಷ್ವ ಚ ಕರ್ಮ ನಿಜಂ ನಿಯತಂ
ಹರಿಪಾದ ವಿನಮ್ರಧಿಯಾಸತತಮ್ ।
ಹರಿರೇವ ಪರೋ ಹರಿರೇವ ಗುರು
ರ್ಹರಿರೇವ ಜಗತ್ಪಿತೃಮಾತೃಗತಿಃ ೧

ನ ತತೋಽಸ್ತ್ಯಪರಂ ಜಗತೀಡ್ಯತಮಂ
ಪರಮಾತ್ಪರತಃ ಪುರುಷೋತ್ತಮತಃ ।
ತದಲಂ ಬಹುಲೋಕವಿಚಿಂತನಯಾ
ಪ್ರವಣಂ ಕುರು ಮಾನಸಮೀಶಪದೇ ೨

ಯತತೋಽಪಿ ಹರೇಃ ಪದ ಸಂಸ್ಮರಣೇ
ಸಕಲಂ ಹ್ಯಘಮಾಶು ಲಯಂವ್ರಜತಿ ।
ಸ್ಮರತಸ್ತು ವಿಮುಕ್ತಿ ಪದಂ ಪರಮಃ
ಸ್ಫುಟಮೇಷ್ಯತಿ ತತ್ಕಿಮಪಾಕ್ರಿಯತೇ ೩

ಶ್ರುಣುತಾಮಲಸತ್ಯವಚಃ ಪರಮಂ
ಶಪಥೇರಿತಮುಚ್ಛ್ರಿತ ಬಾಹು ಯುಗಮ್ ।
ನ ಹರೇಃ ಪರಮೋ ನ ಹರೇಃ ಸದೃಶಃ
ಪರಮಃ ಸ ತುಸರ್ವಚಿದಾತ್ಮಗಣಾತ್ ೪

ಯದಿ ನಾಮ ಪರೋ ನ ಭವೇತ್ಸ (ತ) ಹರಿಃ
ಕಥಮಸ್ಯ ವಶೇಜಗದೇತದಭೂತ್ ।
ಯದಿ ನಾಮ ನ ತಸ್ಯ ವಶೇ ಸಕಲಂ
ಕಥಮೇವ ತು ನಿತ್ಯಸುಖಂ ನ ಭವೇತ್ ೫



## ಮೂರನೇ ಅಧ್ಯಾಯಃ

*ನಿತ್ಯಕರ್ಮವ ಮಾಡಿ, ಪೂರ್ವಕರ್ಮವ ಭುಜಿಸಿ*
*ಸತತವೂ ಹರಿಪಾದ ಸೇವೆಯಲಿ ತೊಡಗಿರಿ*
*ಹರಿಯೇ ಸರ್ವೋತ್ತಮನು, ಹರಿಯೆ ಗುರುವು*
*ಹರಿಯೇ ಜಗಕೆಲ್ಲಕೂ ತಾಯಿ ತಂದೆ*

*ಉತ್ತಮರೊಳುತ್ತಮನು ನಮ್ಮ ಪುರುಷೋತ್ತಮನು*
*ಸಕಲ ಭುವನದೊಳಿಲ್ಲ ಅವಗಿಂತ ಉತ್ತಮರು*
*ಭವದ ಚಿಂತೆಯನೆಲ್ಲ ಮನದಿಂದ ಕಿತ್ತೆಸೆದು*
*ಪರಮಾತ್ಮ ಪದದಲ್ಲಿ ಮನವ ತೊಡಗಿಸಿರಿ*

*ಹರಿಯ ಚರಣಗಳನ್ನು ಭಕುತಿಯಲಿ ನೆನೆಯಲು*
*ಸಕಲ ದುರಿತಗಳೆಲ್ಲ ಹಾರಿಹೋಗುವುವು*
*ಸಂದೇಹವಿಲ್ಲದೆಯೆ ಮುಕುತಿಪದ ದೊರೆಯುವುದು*
*ಬಿಡಲೇಕೆ ಸತ್ಕೃತದ ಹರಿಚರಣ ಸ್ಮರಣೆಯ?*

*ವಚನ ನೀಡುವೆ ಕೇಳಿ! ಬಾಹುಗಳ ಮೇಲೆತ್ತಿ*
*ಪರಿಶುದ್ಧ ಸತ್ಯವನು ಹೇಳುವೆನು ಕೇಳಿ*
*ಉತ್ತಮರು ಯಾರಿಲ್ಲ ಹರಿಯ ಹೊರತು*
*ಸಕಲಾತ್ಮ ಗಣಗಳಲಿ ಹರಿಯೆ ಸರ್ವೋತ್ತಮನು*

*ಸಕಲ ಭುವನಗಳಲ್ಲಿ ಶ್ರೀಹರಿಯು ಶ್ರೇಷ್ಠ*
*ಇಲ್ಲದಿರೆ ಎಲ್ಲವೂ ಅವನಧೀನವು ಹೇಗೆ?*
*ಜಗವೆಲ್ಲ ಆತನಿಗೆ ವಶವಾಗಿ ಇರದಿರೆ*
*ಈ ಜಗವು ನಿತ್ಯಸುಖ ಅನುಭವಿಸಬಲ್ಲುದೆ?*

ನ ಚ ಕರ್ಮವಿಮಾಮಲಕಾಲಗುಣ–
ಪ್ರಭೃತೀಶಮಚಿತ್ತನುತದ್ಧಿಯತಃ ।
ಚಿದಚಿತ್ತನುಸರ್ವಮಸೌ ತು ಹರಿ–
ರ್ಯಮಯೇದಿತಿ ವೈದಿಕಮಸ್ತಿವಚಃ ೬

ವ್ಯವಹಾರಭಿದಾಪಿ ಗುರೋರ್ಜಗತಾಂ
ನ ತು ಚಿತ್ತಗತಾ ಸ ಹಿ ಚೋದ್ಯ ಪರಮ್ ।
ಬಹವಃ ಪುರುಷಾಃ ಪುರುಷಪ್ರವರೋ
ಹರಿರಿತ್ಯವದತ್ಸ್ವಯ ಮೇವ ಹರಿಃ ೭

ಚತುರಾನನಪೂರ್ವವಿಮುಕ್ತಗಣಾ
ಹರಿಮೇತ್ಯತು ಪೂರ್ವದೇವ ಸದಾ ।
ನಿಯತೋಚ್ಛ ವಿನೀಚತಯೈವ ನಿಜಾಂ
ಸ್ಥಿತಿಮಾಪುರಿತಿ ಸ್ಮಪರಂ ವಚನಮ್ ೮

ಆನಂದತೀರ್ಥಸನ್ನಾಮ್ನಾ
ಪೂರ್ಣಪ್ರಜ್ಞಾಭಿದಾಯುಜಾ ।
ಕೃತಂ ಹರ್ಯಷ್ಟಕಂ ಭಕ್ತ್ಯಾ
ಪಠತಃ ಪ್ರೀಯತೇ ಹರಿಃ ೯

॥ ಇತಿ ದ್ವಾದಶಸ್ತೋತ್ರೇ ತೃತೀಯೋಧ್ಯಾಯಃ ॥

*ಕರ್ಮ ವಿಮಾಮಲ ಕಾಲ ಗುಣಗಳು ಎಲ್ಲ*
*ಪಡೆಯಲಾರವು ಸ್ವಾಮಿ ಪ್ರಭೃತಿ ಪದವನ್ನು*
*ಪರಮಾತ್ಮನೋರ್ವನೇ ಸಕಲ ಭುವನಕೆ ಒಡೆಯ*
*ಹೀಗೆಂದು ಸಾರುವುವು ಶೃತಿವಚನ ಸಾರಗಳು*

*"ಜೀವ–ದೇವರ ಭೇದ ವ್ಯಾವಹಾರಿಕವು*
*ಈ ಜಗದ ಎಲ್ಲವೂ ಶ್ರೀಹರಿಯ ಅಂಗವು"*
*ಎಂಬಂಥ ವಿಷಯಗಳು ಗುರುಮನದೊಳಿರಲಿಲ್ಲ*
*ಇಂತೆಂದು ನುಡಿದಿಹನು ಶ್ರೀಹರಿಯು ತಾನೆ*

*ನಾಲ್ಮೊಗನೆ ಮೊದಲಾದ ಮುಕ್ತಗಣರೆಲ್ಲರೂ*
*ಪೊಂದಿಹರು ಪರಮಾತ್ಮ ಸಾನ್ನಿಧ್ಯವನ್ನು*
*ಈ ಭವದ ಪರಿಯಲ್ಲಿ ಭೇದವನು ಪೊಂದಿಹರು*
*ಇಂತೆಂದು ನುಡಿದಿಹವು ಆಗಮದ ವಾಕ್ಯಗಳು*

*ಸುಖತೀರ್ಥರೆಂಬುವ ಸನ್ನಾಮ ಪಡೆದಿರುವ*
*ಯತಿವರ್ಯ ಶ್ರೀ ಪೂರ್ಣಪ್ರಜ್ಞರೆಂಬುವರಿಂದ*
*ರಚಿತವಾಗಿಹ ಈ ಅಷ್ಟಕದ ಹರಿಸ್ತುತಿಯ*
*ಭಜಿಸುವ ಭಕುತರಿಗೆ ಹರಿಕೃಪೆಯು ಲಭಿಸುವುದು*

ಕನ್ನಡ ಪದ್ಯಾನುವಾದದ
ಶ್ರೀದ್ವಾದಶಸ್ತೋತ್ರ ಮೂರನೇ ಅಧ್ಯಾಯವು ಮುಗಿದುದು

## ಚತುರ್ಥೋಽಧ್ಯಾಯಃ

ನಿಜಪೂರ್ಣ ಸುಖಾಮಿತಬೋಧತನುಃ
ಪರಶಕ್ತಿರನಂತ ಗುಣಃ ಪರಮಃ ।
ಅಜರಾಮರಣಃ ಸಕಲಾರ್ತಿಹರಃ
ಕಮಲಾಪತಿ ರೀಡ್ಯತಮೋಽವತುಃ ನಃ ॥ ೧

ಯದಸುಪ್ತಿಗತೋ ಪಿ ಹರಿಃ ಸುಖವಾನ್
ಸುಖರೂಪಿಣ ಮಾಹುರತೋನಿಗಮಾಃ ।
ಸ್ವ (ಸು) ಮತಿಪ್ರಭವಂ ಜಗದಸ್ಯ ಯತಃ
ಪರಭೋಧತನುಂಚ ತತಃಖಪತಿಮ್ ॥ ೨

ಬಹುಚಿತ್ರಜಗದ್ಬಹುಧಾರಕರಣಾತ್ಪರ
ಶಕ್ತಿರನಂತಗುಣಃ ಪರಮಃ ।
ಸುಖರೂಪಮಮುಷ್ಯ ಪದಂ ಪರಮಂ
ಸ್ಮರತಸ್ತು ಭವಿಷ್ಯತಿ ತತ್ಸತತಮ್ ॥ ೩

ಸ್ಮರಣೇ ಹಿ ಪರೇಶಿತುರಸ್ಯ ವಿಭೋ–
ರ್ಮಲಿನಾನಿ ಮನಾಂಸಿ ಕುತಃ ಕರಣಮ್ ।
ವಿಮಲಂ ಹಿ ಪದಂ ಪರಮಂ ಸ್ವರತಂ
ತರುಣಾರ್ಕ ಸವರ್ಣಮಜಸ್ಯ ಹರೇಃ ॥ ೪

ವಿಮಲೈಃ ಶ್ರುತಿಶಾಣನಿಶಾತತಮೈಃ
ಸುಮನೋಽಸಿಭಿರಾಶು ನಿಹತ್ಯ ದೃಡಮ್ ।
ಬಲಿನಂ ನಿಜವೈರಿಣಮಾತ್ಮ ತಮೋ
ಭಿದಮೀಶಮನಂತ ಮುಪಾಸ್ವ ಹರಿಮ್ ॥ ೫

## ನಾಲ್ಕನೇ ಅಧ್ಯಾಯಃ

*ಅತಿಶಯ ಶಕ್ತಿಯ ಅನುಪಮ ಆಗರ*
*ಅಪೂರ್ವ ಜ್ಞಾನಾನಂದದ ಸಾಗರ*
*ಅಜರಾಮರಣನು ದುರಿತನಿವಾರಣ*
*ಪೊರೆಯಲಿ ನಮ್ಮನು ಕಮಲಾಪತಿಯು* ೧

*ನಿದ್ರಾರಹಿತನು, ಸುಖಪರಿಪೂರ್ಣನು*
*ವೇದವು ಹೊಮ್ಮುವ ಆ ಸಿರಿ ಕಂಠ!*
*ಇಚ್ಛಾ ಮಾತ್ರದಿ ಸೃಜಿಸಿಹ ಜಗವನು*
*ಇಂದ್ರಿಯ ಪ್ರೇರಕ, ಜ್ಞಾನಾತ್ಮಕನು* ೨

*ಬಹುವಿಧ ಜಗವನು ಪರಿಪರಿ ಬಗೆಯಲಿ*
*ರಚಿಸಿಹನಾತನು, ಅಗಣಿತಗುಣನು*
*ಅತಿಶಯ ಶಕ್ತಿಯ ಸರ್ವೋತ್ತಮನು*
*ಅವಿರತ ಭಕುತಗೆ ಲಭಿಪುದು ಮುಕುತಿಯು* ೩

*ಜನುಮಗಳಿಲ್ಲದ ಶ್ರೀ ಹರಿ ಸ್ವ-ರತನು*
*ಬಾಲಸೂರ್ಯನ ತೆರದಿ ಹೊಳೆಯುವ ಕಾಂತಿ!*
*ಆತನನು ಸ್ಮರಿಸಿದರೆ ಪರಮ ಭಕ್ತಿಯಲಿ*
*ಮಲಿನವೇಕಾಗುವುವು ಕರಣ, ಇಂದ್ರಿಯಗಳು?* ೪

*ನಿಗಮ ತತಿಯೆಂಬುವ ಒರೆಗಲ್ಲಿನಲ್ಲಿ*
*ಹರಿತಗೊಳಿಸಿರಿ ನಿಮ್ಮ ಜ್ಞಾನ ಖಡ್ಗಗಳನ್ನು*
*ತುಂಡರಿಸಿ ಕಾಮಾದಿ ಕಡುವೈರಿಗಳನು*
*ಸತತ ಚಿಂತನೆಯಲ್ಲಿ ಸ್ಮರಿಸಿ ಶ್ರೀ ಹರಿಯನು* ೫

ಸ ಹಿ ವಿಶ್ವಸೃಜೋ ವಿಭುಶಂಭು ಪುರಂ
ದರಸೂರ್ಯಮುಖಾನಪರಾನಮರಾನ್ ।
ಸೃಜತೀಡ್ಯ ತವೋಽವತಿ ಹಂತಿ ನಿಜಂ
ಪದಮಾಪಯತಿ ಪ್ರಣತಾನ್ ಸ್ವಧಿಯಾ ॥ ೬

ಪರವೋಽಪಿ ರಮೇಶಿತುರಸ್ಯ ಸವೋ
ನ ಹಿ ಕಶ್ಚಿದಭೂನ್ನ ಭವಿಷ್ಯತಿ ಚ ।
ಕ್ವಚಿದದ್ಯತನೋಽಪಿ ನ ಪೂರ್ಣ ಸದಾ–
ಗಣೀತೇಡ್ಯ ಗುಣಾನುಭವೈಕತನೋಃ ॥ ೭

ಇತಿ ದೇವತರಸ್ಯ ಹರೇಃ ಸ್ತವನಂ
ಕೃತವಾನ್ ಮುನಿರುತ್ತಮಮಾದರತಃ ।
ಸುಖತೀರ್ಥ ಪದಾಭಿಹಿತಃ ಪಠತ–
ಸ್ತದಿದಂ ಭವತಿ ಧೃವಮುಚ್ಚ ಸುಖಮ್ ॥ ೮

॥ ಇತಿ ದ್ವಾದಶಸ್ತೋತ್ರೇ ಚತುರ್ಥೋಽಧ್ಯಾಯಃ ॥

*ಬ್ರಹ್ಮರುದ್ರೇಂದ್ರರನು, ಸೂರ್ಯನನು ಚಂದ್ರನನು*
*ಸೃಜಿಸುವನು ಶ್ರೀಹರಿಯು ಪ್ರತಿ ಕಲ್ಪದಲ್ಲೂ*
*ಜೀವಿಗಳ ಕೊಲ್ಲುವನು, ಮತ್ತೆ ರಕ್ಷಿಪನು*
*ನಿಜಪದಕೆ ಬಾಗಿದರೆ ಮುಕುತಿಯನು ಕರುಣಿಪನು* ೬

*ಎಲ್ಲ ಸದ್ಗುಣದಿಂದ ಪರಮಾತ್ಮ ಪರಿಪೂರ್ಣ*
*ಆತನ ಸದ್ಗುಣವು ಅಗಣಿತವು ಸ್ತುತಿಪರವು*
*ಹಿಂದೆಂದೂ ಇರಲಿಲ್ಲ, ಮುಂದೆಂದೂ ಬಾರರು*
*ಆತನಿಗೆ ಸಮರೆಂಬ ಆರು ಇಂದಿಲ್ಲ* ೭

*ಇಂತು ಆ ಸುಖತೀರ್ಥ ಮುನಿವರ್ಯರೆಂಬುವರು*
*ಅಪರಿಮಿತ ಭಕ್ತಿಯಲಿ ರಚಿಸಿಹರು ಸ್ತವನವನು*
*ಪರಮ ಭಕ್ತಿಯಲಿದನು ಪಠಿಸುವ ಭಕುತರಿಗೆ*
*ಲಭಿಸುವುದು ದಿಟವಾಗಿ ಪರಮೋಚ್ಚ ಸುಖವು* ೮

ಕನ್ನಡ ಪದ್ಯಾನುವಾದದ
ಶ್ರೀದ್ವಾದಶಸ್ತೋತ್ರ ನಾಲ್ಕನೇ ಅಧ್ಯಾಯವು ಮುಗಿದುದು

## ಪಂಚಮೋಧ್ಯಾಯಃ

ವಾಸುದೇವಾಪರಿಮೇಯ ಸುಧಾಮನ್
ಶುದ್ಧ ಸದೋದಿತ ಸುಂದರೀಕಾಂತ ।
ಧರಾಧರಧಾರ(ರಿ)ಣ ವೇದುರಧರ್ತಃ
ಸೌಧೃತಿದೀಧೃತಿ ವೇಧೃವಿಧಾತಃ ॥ ೧

ಅಧಿಕಬಂಧಂ ರಂಧಯ ಬೋಧಾ(ಧ)
ಚ್ಛಿಂದಿ ಪಿ(ವಿ)ಧಾನಂ ಬಂಧುರಮದ್ಧಾ।
ಕೇಶವ ಕೇಶವ ಶಾಸಕ ವಂದೇ
ಪಾಶಧರಾರ್ಚಿ(ಚ್ಯು)ತ ಶೂರವರೇಶ ॥ ೨

ನಾರಾಯಣಾಮಲಕಾರಣ ವಂದೇ
ಕಾರಣ ಕಾರಣ ಪೂರ್ಣ ವರೇಣ್ಯ ।
ಮಾಧವ ಮಾಧವ ಸಾಧಕ ವಂದೇ
ಬಾಧಕ ಬೋಧಕ ಶುದ್ಧ ಸಮಾಧೇ ॥ ೩

ಗೋವಿಂದ ಗೋವಿಂದ ಪುರಂದರ ವಂದೇ
ಸ್ಕಂದಸು(ಸ)ನಂದನವಂದಿತಪಾದ ।
ವಿಷ್ಣೋಸೃಜಿಷ್ಣೋ ಗ್ರಸಿಷ್ಣೋ ವಿವಂದೇ
ಕೃಷ್ಣ ಸುದುಷ್ಣ ವಧಿಷ್ಣೋಸುಧೃಷ್ಣೋ ॥ ೪

ಮಧುಸೂದನ ದಾನವ ಸಾದನವಂದೇ
ದೈವತಮೋದಿತ (ದನ)ವೇದಿತಪಾದ ।

## ಐದನೇ ಅಧ್ಯಾಯ

*ನಿನ್ನ ಸ್ವರೂಪವನು ಅರಿಯಬಲ್ಲವರಾರು ?*
*ದೋಷದೂರನು ನೀನು! ಸರ್ವ ಸರ್ವೋತ್ತಮನು..*
*ಲಾವಣ್ಯಮಯಿಯಾದ ಇಂದಿರೆಯ ಪತಿಯು*
*ಗೋವರ್ಧನೋದ್ಧಾರಿ! ನಾಲ್ಮೊಗನ ಜನಕನು* ೧

*ಸುಟ್ಟುಬಿಡು ಸಂಸಾರಬಂಧದ ಅರಿವೆಯನು*
*ಹರಿದು ಬಿಡು ಅಜ್ಞಾನವೆಂಬಂಥ ಹೊದಿಕೆಯನು*
*ಕೇಶಿ ಸಂಹಾರಕನೆ! ಕೇಶವನೆ! ನಮಿಸುವೆನು*
*ನಮಿಸುವೆನು ನಾಲ್ಮೊಗದ ಬ್ರಹ್ಮನ ಜನಕನೆ!* ೨

*ಜಗದೇಕ ಕಾರಣ, ಸ್ವಾಮಿ ನಾರಾಯಣ!*
*ದೋಷವರ್ಜಿತ ನೀನು! ಪ್ರತ್ಯಾದಿ ಕಾರಣನು!*
*ಪರಿಶುದ್ಧ ಸಮಚಿತ್ತ! ಮಾಧವನೆ! ನಮಿಸುವೆನು.*
*ಜ್ಞಾನದಾಯಕ ನೀನು! ಇಂದಿರಾಪತಿ ನೀನು.* ೩

*ಸ್ಕಂದ ಸುನಂದನ ವಂದಿತ ಪಾದನೆ !*
*ಓ, ಗೋವಿಂದನೆ, ವಂದ್ಯ ಪುರಂದರ*
*ವೇದಾದಿ ವಂದ್ಯನೆ ದೇವಗಣ ಪೂಜ್ಯನೆ*
*ಹರಿ ಸರ್ವೋತ್ತಮ, ಗೋಪಾಲಕನೆ.* ೪

*ಮಧುವೆಂಬ ರಾಕ್ಷಸನ ಸಂಹರಿಸಿದವನೆ*
*ದೇವತಾಗಣಕೆಲ್ಲ ಆನಂದ ಕೊಡುವವನೆ*
*ಭಕುತರಿಗೆ ದರ್ಶನವ ನೀಡುವವನೆ*
*ನಮಿಸುವೆನು ನಾ ನಿನ್ನ ಪಾದಗಳಿಗೆ*

ತ್ರಿವಿಕ್ರಮ ನಿಷ್ಕ್ರಮ ವಿಕ್ರಮ ವಂದೇ
ಸುಕ್ರಮ ಸಂಕ್ರಮಹುಂಕೃತವಕ್ತ್ರ ॥ ೫

ವಾಮನ ವಾಮನ ಭಾಮನ ವಂದೇ
ಸಾಮನ ಸೀಮನ ಸಾಮನ ಸಾನೋ ।
ಶ್ರೀಧರ ಶ್ರೀಧರ ಶಂಧರ ವಂದೇ
ಭೂಧರ ವಾರ್ಧರ ಕಂದರಧಾರಿನ್ ॥ ೬

ಹೃಷಿಕೇಶ ಸುಕೇಶ ಪರೇಶ ವಿವಂದೇ
ಶರಣೇಶ ಕಲೇಶ ಬಲೇಶ ಸುಖೇಶ ।
ಪದ್ಮನಾಭ ಶುಭೋದ್ಭವ ವಂದೇ
ಸಂಭೃತ ಲೋಕಭರಾಭರ ಭೂರೇ ॥ ೭

ದಾಮೋದರ ದೂರತರಾಂತರ ವಂದೇ
ದಾರಿತಪಾರಗಪಾರ ಪರಸ್ಮಾತ್ ॥ ೮

ಆನಂದ ಸುತೀರ್ಥ ಮುನೀಂದ್ರಕೃತಾ
ಹರಿಗೀತಿರಿಯಂ ಪರಮಾದರತಃ ।
ಪರಲೋಕ ವಿಲೋಕನ ಸೂರ್ಯನಿಭಾ
ಹರಿಭಕ್ತಿ ವಿವರ್ಧನ ಶೌಂಡತಮಾ ॥ ೯

॥ ಇತಿ ದ್ವಾದಶಸ್ತೋತ್ರೇ ಪಂಚಮೋಧ್ಯಾಯಃ ॥

*ಪ್ರಳಯ ಕಾಲದಿ ನಿನ್ನ ಹೂಂಕಾರದಿಂದ*
*ಉಗ್ರವಾಯಿತು ನಿನ್ನ ಶಾಂತವಕ್ತ್ರ*
*ಆಕಾಶದೆತ್ತರಕೆ, ಭೂಮಿ ಪಾತಾಳಕ್ಕೆ*
*ಬೆಳೆದವಗೆ ವಂದಿಪೆನು ತ್ರಿವಿಕ್ರಮನಿಗೆ* ೫

*ಸಾಮಗಾನವು ಹೊಗಳಿ ಸ್ತುತಿಪ ವಾಮನನೆ*
*ಭೂಮಿಯನು ಹೊತ್ತವನೆ, ಜಲಧರನೆ, ಕಂಧರನೆ*
*ನಮಿಸುವೆನು ಶ್ರೀಧರನೆ!  ಮಧುರ ಬಂಧುರನೆ!*
*ನಮಿಸುವೆನು ಆನಂದ ಮುಕ್ತಿದಾಯಕನೆ* ೬

*ಸುಂದರ ಕೇಶ ಸುಶೋಭಿತ ನೀನು*
*ಪರೇಶ, ಬಲೇಶ, ಸುಖೇಶನು ನೀನು*
*ಇಂದ್ರಿಯ ಪ್ರೇರಕ ಪಂಕಜನಾಭನೆ*
*ವಂದಿಪೆ, ಓ ಹೃಷಿಕೇಶನೆ ನಿನಗೆ.* ೭

*ದುರುಳರಿಗೆ ಅತ್ಯಂತ ದೂರವಾಗಿರುವವನೆ*
*ಜ್ಞಾನಿಗಳು, ಮುಕ್ತರಿಗೆ ಆಶ್ರಯವ ಕೊಡುವವನೆ*
*ಸಕಲ ಲೋಕಗಳನ್ನು ಉದರದಲಿ ಇಟ್ಟವನೆ*
*ನಿನ್ನಡಿಗೆ ನಮಿಸುವೆನು ದಾಮೋದರನೆ* ೮

*ಯತಿವರ್ಯ ಆನಂದತೀರ್ಥರಿದ ರಚಿಸಿಹರು*
*ಪರಮ ಆದರದಿಂದ ಹರಿಗೀತೆ ಹಾಡಿಹರು*
*ಪರಮಪದ ಹಾದಿಗಿದು ಸೂರ್ಯನಂತಿಹುದು*
*ಭಕ್ತಿಯಿಂ ಪಠಿಸಿದರೆ ಹರಿಕರುಣೆ ದೊರೆಯುವುದು.* ೯

ಕನ್ನಡ ಪದ್ಯಾನುವಾದದ
ಶ್ರೀದ್ವಾದಶಸ್ತೋತ್ರ ಐದನೇ ಅಧ್ಯಾಯವು ಮುಗಿದುದು

## ಷಷ್ಠೋಽಧ್ಯಾಯಃ

ಮತ್ಸ್ಯಕರೂಪಲಯೋದ ವಿಹಾರಿನ್
ವೇದವಿನೇತೃ ಚತುರ್ಮುಖ ವಂದ್ಯ ।
ಕೂರ್ಮಸ್ವರೂಪಕ ಮಂದರಧಾರಿನ್
ಲೋಕವಿಧಾರಕ ದೇವವರೇಣ್ಯ ॥ ೧

ಸೂಕರರೂಪಕ ದಾನವಶತ್ರೋ
ಭೂಮಿವಿಧಾರಕ ಯಜ್ಞವರಾಂಗ ।
ದೇವ ನೃಸಿಂಹ ಹಿರಣ್ಯಕಶತ್ರೋ
ಸರ್ವಭಯಾಂತಕ ದೈವತಬಂಧೋ ॥ ೨

ವಾಮನ ವಾಮನ ಮಾಣವವೇಷ
ದೈತ್ಯವರಾ(ಕುಲಾಂ)ಂತಕ ಕಾರಣ ರೂಪ(ಭೂತ) ।
ರಾಮ ಭೃಗೂದ್ವಹ ಸೂರ್ಜಿತದೀಪ್ತೇ
ಕ್ಷತ್ರಕುಲಾಂತಕ ಶಂಭುವರೇಣ್ಯ ॥ ೩

ರಾಘವ ರಾಘವ ರಾಕ್ಷಸ ಶತ್ರೋ
ಮಾರುತಿ ವಲ್ಲಭ ಜಾನಕೀ ಕಾಂತ ।
ದೇವಕಿ ನಂದನ ಸುಂದರರೂಪ
ರುಕ್ಮಿಣಿ (ಣೀ) ವಲ್ಲಭ ಪಾಂಡವ ಬಂಧೋ ॥ ೪

ದೇವಕಿನಂದನ ನಂದಕುಮಾರ
ವೃಂದಾವನಾಂಚನ ಗೋಕುಲ ಚಂದ್ರ ।
ಕಂದಫಲಾಶನ ಸುಂದರರೂಪ
ನಂದಿತ ಗೋಕುಲ ವಂದಿತಪಾದ ॥ ೫

## ಆರನೇ ಅಧ್ಯಾಯಃ

*ಪ್ರಳಯಾಬ್ಧಿಯಲಿ ಮತ್ಸ್ಯರೂಪದಲಿ ವಿಹರಿಸುವೆ*
*ವೇದಾದಿ ವಂದ್ಯನೆ ! ದೇವಗಣ ಪೂಜಿತನೆ*
*ಕೂರ್ಮಸ್ವರೂಪನೆ ! ಮಂದರೋದ್ಧಾರನೆ*
*ಲೋಕ ವಿದಾರಕ ದೇವೋತ್ತಮನೆ* ೧

*ಸೂಕರರೂಪದ ದಾನವ ವೈರಿಯೆ*
*ಧಾರುಣಿ ಧಾರಣ ಯಜ್ಞವರಾಂಗನೆ*
*ಹಿರಣ್ಯಕ ವೈರಿಯೆ ನರಹರಿ ರೂಪನೆ*
*ಭಯಪರಿಹಾರಕ ಸುರಜನ ಬಂಧುವೆ* ೨

*ವಾಮನ! ವಾಮನ ವಟುವೇಷ ಧಾರಿಯೆ*
*ರಾಕ್ಷಸಕುಲ ಸಂಹಾರಕೆ ಕಾರಣ*
*ಭೃಗುಕುಲ ರಕ್ಷಕ ಉಜ್ವಲ ರೂಪ*
*ಪರಶುವ ಧರಿಸಿಹ ಕ್ಷತ್ರಕುಲಾಂತಕ* ೩

*ಓ, ರಾಘವನೆ! ರಾಕ್ಷಸ ಶತೃವೆ*
*ಮಾರುತಿ ವಲ್ಲಭ ಜಾನಕಿ ಕಾಂತನೆ*
*ದೇವಕಿ ಪುತ್ರನೆ, ಸುಂದರ ರೂಪನೆ*
*ರುಕ್ಮಿಣಿ ಪತಿಯೆ, ಪಾಂಡವ ಪ್ರಿಯನೆ* ೪

*ದೇವಕಿನಂದನ ನಂದಕುಮಾರನೆ*
*ವೃಂದಾವನದಲಿ ಆಡುವ ಶಿಶುವೆ*
*ಕಂದಮೂಲಗಳ ಮೆಲ್ಲುತ ನಲಿವನೆ*
*ಗೋಪೀಲೋಲನೆ ಗೋಕುಲ ಪೂಜ್ಯನೆ* ೫

ಇಂದ್ರಸುತಾವಕನಂದಕ ಹಸ್ತ
ಚಂದನಚರ್ಚಿತ ಸುಂದರಿನಾಥ ।
ಇಂದೀವರೋದರ ದಲನಯನ
ಮಂದರಧಾರಿನ್ ಗೋವಿಂದ ವಂದೇ ॥ ೬

ಚಂದ್ರಶತಾನನ ಕುಂದಸುಹಾಸ
ನಂದಿತದ್ಯೈವತಾನಂದ ಸುಪೂರ್ಣ ।
ದೈತ್ಯ ವಿಮೋಹಕ ನಿತ್ಯ ಸಖಾದೇ
ದೇವಸು (ವಿ) ಬೋಧಕ ಬುದ್ಧ ಸ್ವರೂಪ ॥ ೭

ದುಷ್ಟ ಕುಲಾಂತಕ ಕಲ್ಕಿಸ್ವರೂಪ
ಧರ್ಮ ವಿವರ್ಧನ ಮೂಲಯುಗಾದೇ ।
ನಾರಾಯಣಾಮಲಕಾರಣ ಮೂರ್ತೇ
ಪೂರ್ಣ ಗುಣಾರ್ಣವ ನಿತ್ಯ ಸುಬೋಧ ॥ ೮

ಸುಖ(ಆನಂದ)ತೀರ್ಥ ಮುನೀಂದ್ರ ಕೃತಾ ಹರಿಗಾಥಾ
ಪಾಪಹರಾಶುಭನಿತ್ಯ ಸುಖಾರ್ಥ ೯

॥ ಇತಿ ದ್ವಾದಶಸ್ತೋತ್ರೇ ಷಷ್ಠೋಧ್ಯಾಯಃ ॥

*ಪಾರ್ಥನ ಪ್ರಿಯನೆ, ನಂದಕಹಸ್ತನೆ*
*ಚಂದನ ಪೂಸಿದ ಮನಮೋಹಕನೆ*
*ಪಂಕಜನಯನನೆ ಮಂದರಧಾರಿಯೆ*
*ವಂದಿಪೆ, ಓ ಗೋವಿಂದನೆ ನಿನಗೆ*

*ಶತಚಂದ್ರಮರ ನಗೆಮೊಗದವನೆ*
*ಸುರರಿಗೆ ಸಂತಸ ನೀಡುವ ಪ್ರಭುವೆ*
*ಅಸುರವಿಮೋಹಕ, ವಿಭ್ರಮ ಕಾರಣ*
*ಬುದ್ಧಸ್ವರೂಪನೆ ದೇವಸುಬೋಧಕ*

*ದುರುಳರ ವೈರಿಯೆ ಕಲ್ಕಿಸ್ವರೂಪನೆ*
*ಯುಗ ಕಲ್ಪ ಕಾರಣನೆ, ಧರ್ಮಪ್ರವರ್ತಕನೆ*
*ಪೂರ್ಣಗುಣಸಾಗರನೆ, ಎಲ್ಲವನೂ ಅರಿತವನೆ*
*ನಮಿಪೆ ನಾರಾಯಣನೆ! ಅಮಲ ಕಾರಣನೆ*

*ಸುಖತೀರ್ಥ ಮುನಿವರ್ಯ ರಚಿಸಿರುವ ಹರಿಗಾಥೆ*
*ಸಕಲ ಪಾಪವನೆಲ್ಲ ಪರಿಹರಿಸಬಲ್ಲುದು*
*ನಿತ್ಯಸುಖವನು ನೀಡಿ ದುಃಖವನು ನಿಗ್ರಹಿಸಿ*
*ಮುಕುತಿಪದ ಸೌಖ್ಯವನು ನೀಡುವಂತಹುದು*

ಕನ್ನಡ ಪದ್ಯಾನುವಾದದ
ಶ್ರೀದ್ವಾದಶಸ್ತೋತ್ರ ಆರನೇ ಅಧ್ಯಾಯವು ಮುಗಿದುದು

## ಸಪ್ತಮೋಧ್ಯಾಯಃ

ವಿಶ್ವಸ್ಥಿತಿ ಪ್ರಳಯ ಸರ್ಗಮಹಾವಿಭೂತಿ–
ವೃತ್ತಿಪ್ರಕಾಶನಿಯ ಮಾವೃತಿಬಂಧಮೋಕ್ಷಾಃ ।
ಯಸ್ಯಾ ಅಪಾಂಗಲವಮಾತ್ರತ ಊರ್ಜಿತಾ ಸಾ
ಶ್ರೀಃ ಯತ್ಕಟಾಕ್ಷ ಬಲವತ್ಯಜಿತಂ ನಮಾಮಿ ॥ ೧

ಬ್ರಹ್ಮೇಶಶಕ್ರರವಿಧರ್ಮಶಶಾಂಕ ಪೂರ್ವ–
ಗೀರ್ವಾಣ ಸಂತತಿರಿಯಂ ಯದಪಾಂಗಲೇಶಮ್ ।
ಆಶ್ರಿತ್ಯ ವಿಶ್ವವಿಜಯಂ ವಿಸೃಜತ್ಯ(ವಿದಧಾ)ಚಿಂತ್ಯಾ
ಶ್ರೀಃ ಯತ್ಕಟಾಕ್ಷ ಬಲವತ್ಯಜಿತಂ ನಮಾಮಿ ॥ ೨

ಧರ್ಮಾರ್ಥಕಾಮಸುಮತಿ ಪ್ರಚಯಾದ್ಯ ಶೇಷ–
ಸನ್ಮಂಗಲಂವಿದಧತೇ ಯದಪಾಂಗಲೇಶಮ್ ।
ಆಶ್ರಿತ್ಯ ತತ್ಪ್ರಣತಸತ್ಪ್ರಣತಾ ಅಪೀಡ್ಯಾಃ
ಶ್ರೀಃ ಯತ್ಕಟಾಕ್ಷ ಬಲವತ್ಯಜಿತಂ ನಮಾಮಿ ॥ ೩

ಷಡ್ವರ್ಗ ನಿಗ್ರಹನಿರಸ್ತಸಮಸ್ತದೋಷಾ
ಧ್ಯಾಯಂತಿ ವಿಷ್ಣು ಮೃಷಯೋ ಯದಪಾಂಗಲೇಶಮ್ ।
ಆಶ್ರಿತ್ಯ ಯಾನಪಿ ಸಮೇತ್ಯ ನ ಯಾತಿ ದುಃಖಂ
ಶ್ರೀಃ ಯತ್ಕಟಾಕ್ಷ ಬಲವತ್ಯಜಿತಂ ನಮಾಮಿ ॥ ೪

ಶೇಷಾಹಿವೈರಿಶಿವಶಕ್ರಮನುಪ್ರಧಾನ–
ಚಿತ್ರೋರುಕರ್ಮರಚನಂ ಯದಪಾಂಗಲೇಶಮ್ ।
ಆಶ್ರಿತ್ಯ ವಿಶ್ವಮುಖಿಲಂ ವಿದಧಾತಿ ಧಾತಾ
ಶ್ರೀಃ ಯತ್ಕಟಾಕ್ಷ ಬಲವತ್ಯಜಿತಂ ನಮಾಮಿ ॥ ೫

## ಏಳನೇ ಅಧ್ಯಾಯಃ

*ಯಾವ ಲಕುಮಿಯ ಕೃಪಾಕಟಾಕ್ಷದಿ*
*ವಿಶ್ವದ ಹುಟ್ಟು, ಸ್ಥಿತಿಗತಿ, ಪ್ರಲಯ*
*ಮಹಾವಿಭೂತಿ, ಐಸಿರಿ ನಿಯಮನ*
*ಎಲ್ಲವೂ ಜಗದಲಿ ಜರುಗುವುವೊ*
*ಆ ಜಗದಂಬೆಗೂ ಒಡೆಯನು ಶ್ರೀ ಹರಿ ನಮಿಸುವೆ ಲಕುಮಿಗೆ; ಅಜಿತನಾಮಕಗೆ* ೧

*ಯಾವ ಲಕುಮಿಯ ಕೃಪಾಕಟಾಕ್ಷದಿ*
*ಬ್ರಹ್ಮ, ರುದ್ರ, ರವಿ, ಇಂದ್ರ, ಚಂದ್ರರು*
*ಜಗದಭ್ಯುದಯುವ ಮಾಡುತಲಿಹರೊ*
*ಆ ಜಗದಂಬೆಗೂ ಒಡೆಯನು ಶ್ರೀ ಹರಿ ನಮಿಸುವೆ ಲಕುಮಿಗೆ; ಅಜಿತನಾಮಕಗೆ* ೨

*ಯಾವ ಲಕುಮಿಯ ಕೃಪಾಕಟಾಕ್ಷದಿ*
*ಪುರುಷಾರ್ಥಗಳನು ಬಯುಸುವ ಸುಜನರು*
*ಬ್ರಹ್ಮಾದಿಗಳನೆಲ್ಲ ಭಜಿಸಿ ನಲಿಯುವರೊ*
*ಆ ಜಗದಂಬೆಗೂ ಒಡೆಯನು ಶ್ರೀ ಹರಿ ನಮಿಸುವೆ ಲಕುಮಿಗೆ; ಅಜಿತನಾಮಕಗೆ* ೩

*ಯಾವ ಲಕುಮಿಯ ಕೃಪಾಕಟಾಕ್ಷದಿ*
*ಸುಜನರು ಮುನಿಗಳ ಪರಿ ಪರಿ ಸ್ತುತಿಸುತ*
*ಅರಿಷಡ್ವರ್ಗವ ನಿಗ್ರಹಿಸುವರೊ*
*ಅಂತಹ ಮುನಿಗಳೂ ಇಂದಿರೆ ಭಜಕರು*
*ಆ ಜಗದಂಬೆಗೂ ಒಡೆಯನು ಶ್ರೀ ಹರಿ ನಮಿಸುವೆ ಲಕುಮಿಗೆ; ಅಜಿತನಾಮಕಗೆ* ೪

*ಯಾವ ಲಕುಮಿಯ ಕೃಪಾಕಟಾಕ್ಷದಿ*
*ಶೇಷ ಗರುಡರು, ರುದ್ರೇಂದ್ರ ಮನುಗಳು*
*ಚಿತ್ರ ವಿಚಿತ್ರದ ಕಾರ್ಯವ ಜರುಗಿಸಿ*
*ಬ್ರಹ್ಮನ ಆಣತಿ ಪರಿಪಾಲಿಪರೋ*
*ಆ ಜಗದಂಬೆಗೂ ಒಡೆಯನು ಶ್ರೀ ಹರಿ ನಮಿಸುವೆ ಲಕುಮಿಗೆ; ಅಜಿತನಾಮಕಗೆ* ೫

ಶಕ್ರೋಗ್ರದೀಧಿತಿ ಹಿಮಾಕರಸೂರ್ಯಸೂನು–
ಪೂರ್ವಂ ನಿಹತ್ಯ ನಿಖಿಲಂ ಯದಪಾಂಗಲೇಶಮ್ ।
ಆಶ್ರಿತ್ಯ ನೃತ್ಯತಿ ಶಿವಃ ಪ್ರಕಟೋರು ಶಕ್ತಿಃ
ಶ್ರೀಃ ಯತ್ಕಟಾಕ್ಷ ಬಲವತ್ಯಜಿತಂ ನಮಾಮಿ ॥ ೬

ತತ್ಪಾದ ಪಂಕಜ ಮಹಾಸನತಾಮವಾಪ
ಶರ್ವಾದಿವಂದ್ಯ ಚರಣೋ ಯದಪಾಂಗಲೇಶಮ್ ।
ಆಶ್ರಿತ್ಯ ನಾಗಪತಿರನ್ಯ ಸುರೈರ್ದುರಾಪಾಂ
ಶ್ರೀಃ ಯತ್ಕಟಾಕ್ಷ ಬಲವತ್ಯಜಿತಂ ನಮಾಮಿ ॥ ೭

ನಾಗಾರಿರುಗ್ರಬಲ ಪೌರುಷ ಆಪ ವಿಷ್ಣೋ–
ವಾ(ರ್ವೋ್ಣರ್ವಾ)ಹತ್ವಮುತ್ತ ಮಜವೋ ಯದಪಾಂಗಲೇಶಮ್ ।
ಆಶ್ರಿತ್ಯ ಶಕ್ರಮುಖದೇವಗಣೈರಚಿಂತ್ಯಂ
ಶ್ರೀಃ ಯತ್ಕಟಾಕ್ಷ ಬಲವತ್ಯಜಿತಂ ನಮಾಮಿ ॥ ೮

ಆನಂದ ತೀರ್ಥಮುನಿಸನ್ಮುಖಪಂಕಜೋತ್ಥಂ
ಸಾಕ್ಷಾದ್ರಮಾ ಹರಿಮನಃಪ್ರಿಯಮುತ್ತಮಾರ್ಥಮ್ ।
ಭಕ್ತ್ಯಾಪಠತ್ಯಜಿತಮಾತ್ಮನಿ ಸನ್ನಿಧಾಯ
ಯಃಸ್ತೋತ್ರಮೇತಭಿಯಾತಿತಯೋರಭೀಷ್ಟಮ್ ॥ ೯

॥ ಇತಿ ದ್ವಾದಶಸ್ತೋತ್ರೇ ಸಪ್ತಮೋಧ್ಯಾಯಃ ॥

*ಯಾವ ಲಕುಮಿಯ ಕೃಪಾಕಟಾಕ್ಷದಿ*
*ರುದ್ರನು ಪ್ರಳಯದ ನೃತ್ಯವ ಮಾಡಿ*
*ಕಾಲ, ಸೂರ್ಯ, ಆ ಚಂದ್ರರ ಸಹಿತ*
*ಸೃಷ್ಟಿವಿನಾಶವ ಕೈಗೊಳ್ಳುವನೋ*
*ಆ ಜಗದಂಬೆಗೂ ಒಡೆಯನು ಶ್ರೀ ಹರಿ ನಮಿಸುವೆ ಲಕುಮಿಗೆ; ಅಜಿತನಾಮಕಗೆ* ೬

*ಯಾವ ಲಕುಮಿಯ ಕೃಪಾಕಟಾಕ್ಷದಿ*
*ಶರ್ವಾದಿಗಳೂ ವಂದಿಪ ಪಾದವ*
*ಆದಿಶೇಷರು ಗಳಿಸಿ ಪೂಜಿಸಿ*
*ಹರಿಪದ ಪಂಕಜಕಾಸನವಾದರೋ*
*ಆ ಜಗದಂಬೆಗೂ ಒಡೆಯನು ಶ್ರೀ ಹರಿ ನಮಿಸುವೆ ಲಕುಮಿಗೆ; ಅಜಿತನಾಮಕಗೆ* ೭

*ಯಾವ ಲಕುಮಿಯ ಕೃಪಾಕಟಾಕ್ಷದಿ*
*ಅತಿಬಲ ಶೌರ್ಯ, ಅತಿಸಾಹಸವನ್ನು*
*ಅತಿಶಯ ವೇಗವ ಪೊಂದಿಹ ಗರುಡರು*
*ವಿಷ್ಣುವಾಹನ ಪುಣ್ಯವ ಪಡೆದರೊ*
*ಆ ಜಗದಂಬೆಗೂ ಒಡೆಯನು ಶ್ರೀ ಹರಿ ನಮಿಸುವೆ ಲಕುಮಿಗೆ; ಅಜಿತನಾಮಕಗೆ* ೮

*ಮಧ್ವ ಮುನಿ ಮುಖದಿಂದ ಹೊಮ್ಮಿರುವ ಈ ಸ್ತವನ*
*ಹರಿ–ಸಿರಿಯ ಮನವನ್ನು ಸಂತೋಷ ಗೊಳಿಪುದು*
*ಹರಿಯು ಸರ್ವೋತ್ತಮನೆಂದು ಸಾರುವ ಈ ಸ್ತೋತ್ರ*
*ಅಜಿತನಾಮಕನನ್ನು ಸರ್ವದಾ ಸ್ಮರಿಸುತ್ತ*
*ಭಕುತಿಯಲಿ ಪಠಿಸುವ ಎಲ್ಲ ಹರಿಭಕ್ತರು*
*ಸಿರಿ–ಹರಿಯ ಕೃಪೆಯಿಂದ ಇಷ್ಟಾರ್ಥ ಪಡೆಯುವರು* ೯

ಕನ್ನಡ ಪದ್ಯಾನುವಾದದ
ಶ್ರೀದ್ವಾದಶಸ್ತೋತ್ರ ಏಳನೇ ಅಧ್ಯಾಯವು ಮುಗಿದುದು

## ಅಷ್ಟಮೋಧ್ಯಾಯಃ

ವಂದಿತಾಶೇಷವಂದ್ಯೋರುವೃಂದಾರಕಂ
ಚಂದನಾಚರ್ಚಿತೋದಾರಪೀನಾಂಸಕಮ್ ।
ಇಂದಿರಾಚಂಚಲಾಪಾಂಗನೀರಾಜಿತಂ
ಮಂದರೋದ್ಧಾರಿವೃತ್ತೋದ್ಭುಜಾಭೋಗಿನಂ ।
ಪ್ರೀಣಯಾಮೋ ವಾಸುದೇವಂ ದೇವತಾಮಂಡಲಾಖಂಡಮಂಡನಂ ॥ ೧

ಸೃಷ್ಟಿಸಂಹಾರಲೀಲಾವಿಲಾಸಾತತಂ
ಪುಷ್ಟಷಾಡ್ಗುಣ್ಯ ಸದ್ವಿಗ್ರಹೋಲ್ಲಾಸಿನಮ್ ।
ದುಷ್ಟ ನಿಶ್ಶೇಷಸಂಹಾರಕರ್ಮೋದ್ಯತಂ
ಹೃಷ್ಟಪುಷ್ಟಾನು(ತಿ)ಶಿಷ್ಟ ಪ್ರಜಾಸಂಶ್ರಯಂ ।
ಪ್ರೀಣಯಾಮೋ ವಾಸುದೇವಂ ದೇವತಾಮಂಡಲಾಖಂಡಮಂಡನಂ ॥ ೨

ಉನ್ನತಪ್ರಾರ್ಥಿತಾಶೇಷಸಂಸಾಧಕಂ
ಸನ್ನತಾಲೌಕಿಕಾ ನಂದದ ಶ್ರೀಪದಮ್ ।
ಭಿನ್ನಕರ್ಮಾಶಯಪ್ರಾಣಿಸಂಪ್ರೇರಕಂ
ತನ್ನಕಿಂನೇತಿ ವಿದ್ವತ್ಸು ಮಿಮಾಂಸಿತಂ ।
ಪ್ರೀಣಯಾಮೋ ವಾಸುದೇವಂ ದೇವತಾಮಂಡಲಾಖಂಡಮಂಡನಂ ॥ ೩

ವಿಪ್ರಮುಖ್ಯೈಃ ಸದಾವೇದವಾದೋನ್ಮುಖೈಃ
ಸುಪ್ರತಾಪೈಃಕ್ಷಿತಿಶೇಶ್ವರೈಶ್ಚಾರ್ಚಿತಂ ।
ಅಪ್ರತರ್ಕ್ಯೋರುಸಂವಿದ್ಗುಣಂ ನಿರ್ಮಲಂ
ಸಪ್ರಕಾಶಾಜರಾನಂದ ರೂಪಂಪರಂ।
ಪ್ರೀಣಯಾಮೋ ವಾಸುದೇವಂ ದೇವತಾಮಂಡಲಾಖಂಡಮಂಡನಂ ॥ ೪

## ಎಂಟನೇ ಅಧ್ಯಾಯಃ

ಸರ್ವ ವಂದಿತ ವಂದ್ಯ ಶ್ರೀ ರಮಾರಮಣನು
ಚಂದನದಿ ಲೇಪಿತನು ಪೀನ ಭುಜ ಭೂಷಿತನು
ಇಂದಿರೆಯ ಚಂಚಲದ ಕಂಗಳಿಂದ ಬೆಳಗುವನು
ಮಂದರೋದ್ಧಾರಿಯು ದಷ್ಟ ಪುಷ್ಟ ಭುಜಬಲನು
ಸಂತೋಷಗೊಳಿಸುವೆನು ಶ್ರೀ ವಾಸುದೇವನನು ದೇವತಾಮಂಡಲಕೆ ಆಭರಣ ಶ್ರೀರಮಣ ೧

ಸೃಷ್ಟಿ ಸಂಹಾರ ಲೀಲಾ ವಿಲಾಸಾದ್ಭುತನು
ಸಂಪೂರ್ಣ ಷಡ್ಗುಣದ ದೇಹವನು ಧರಿಸಿಹನು
ದುಷ್ಟರನು ಸಂಹರಿಸಿ ನಿಶ್ಶೇಷಗೊಳಿಸುವನು
ಸಂತೃಪ್ತ ಭಕ್ತರಿಗೆ ಆಶ್ರಯವ ನೀಡುವನು
ಸಂತೋಷಗೊಳಿಸುವೆನು ಶ್ರೀ ವಾಸುದೇವನನು ದೇವತಾಮಂಡಲಕೆ ಆಭರಣ ಶ್ರೀರಮಣ ೨

ಭಕುತರ, ಭಜಕರ ಬಯಕೆಗಳ ಕೊಡುವವನು
ಅಲೌಕಿಕಾನಂದ ನೀಡುವ ಶುಭಚರಣ
ಭಿನ್ನಕರ್ಮ ಬಯಸುವಗೆ ಈತ ಸಂಪ್ರೇರಕ
ತರ್ಕ ಜಿಜ್ಞಾಸುಗಳ ಪರಮ ಮೀಮಾಂಸಿತನು
ಸಂತೋಷಗೊಳಿಸುವೆನು ಶ್ರೀ ವಾಸುದೇವನನು ದೇವತಾಮಂಡಲಕೆ ಆಭರಣ ಶ್ರೀರಮಣ ೩

ವೇದಕೋವಿದರಿಂದ ವಿಪ್ರರ ಮುಖದಿಂದ
ಕ್ಷಾತ್ರಬಲ ಸಂಪನ್ನ ಧರಣೀಶ ಪೂಜಿತನು
ತರ್ಕಗಳಿಗೆ ನಿಲುಕದ ಸಂಪೂರ್ಣ ಸದ್ಗುಣನು
ಅಜರಾನಂದ ರೂಪನು, ಅಪ್ರತಿಮ ಪ್ರಕಾಶನು
ಸಂತೋಷಗೊಳಿಸುವೆನು ಶ್ರೀ ವಾಸುದೇವನನು ದೇವತಾಮಂಡಲಕೆ ಆಭರಣ ಶ್ರೀರಮಣ ೪

ಅತ್ಯಯೋ ಯಸ್ಯಕೇನಾಪಿನಕ್ವಾಪಿಹಿ
ಪ್ರತ್ಯತೋಯದ್ಗುಣೇಷೂತ್ತಮಾನಾಂಪರಃ ।
ಸತ್ಯಸಂಕಲ್ಪ ಏಕೋ ವರೋಣ್ಯೋ ವಶೀ
ಮತ್ಯನೂನ್ಯೈಃ ಸದಾವೇದವಾದೋದಿತಃ ।
ಪ್ರೀಣಯಾಮೋ ವಾಸುದೇವಂ ದೇವತಾಮಂಡಲಾಖಂಡಮಂಡನಂ ॥ ೫

ಪಶ್ಯತಾಂ ದುಃಖಸಂತಾನನಿರ್ಮೂಲನಂ
ದೃಶ್ಯತಾಂ ದೃಶ್ಯತಾಮಿತ್ಯ ಜೇಶಾರ್ಚಿ(ರ್ಥಿ)ತಮ್ ।
ನಶ್ಯತಾಂ ದೂರಗಂ ಸರ್ವದಾಪ್ಯಾತ್ಮಗಂ
ಪಶ್ಯತಾಂ ಸ್ವೇಚ್ಛಯಾಸಜ್ಜನೇಷ್ವಾಗತಂ ।
ಪ್ರೀಣಯಾಮೋ ವಾಸುದೇವಂ ದೇವತಾಮಂಡಲಾಖಂಡಮಂಡನಂ ॥ ೬

ಅಗ್ರಜಂ ಯಃ ಸಸರ್ಜಾಜಮಗ್ರ್ಯಾಕೃತಿಂ
ವಿಗ್ರಹೋಯಸ್ಯ ಸರ್ವೇಗುಣಾ ಏವಹಿ ।
ಉಗ್ರ ಆದ್ಯೋಽಪಿ ಯಸ್ಯಾತ್ಮಜಾಗ್ರ್ಯಾತ್ಮಜಃ
ಸದ್ಗೃಹೀತಃ ಸದಾಯಃಪರಂದೈವತಮ್ ।
ಪ್ರೀಣಯಾಮೋ ವಾಸುದೇವಂ ದೇವತಾಮಂಡಲಾಖಂಡಮಂಡನಂ ॥ ೭

ಅಚ್ಯುತೋ ಯೋ ಗುಣೈರ್ನಿತ್ಯಮೇವಾಖಿಲೈಃ
ಪ್ರಚ್ಯುತೋಽಶೇಷ ದೋಷೈಃಸದಾಪೂರ್ತಿತ ।
ಉಚ್ಯತೇ ಸರ್ವವೇದೋರು ವಾದೈರಜಃ
ಸ್ವರ್ಚಿತೋ(ರ್ಚ್ಯತೇ) ಬ್ರಹ್ಮರುದ್ರೇಂದ್ರಪೂರ್ವೈಸ್ಸದಾ ।
ಪ್ರೀಣಯಾಮೋ ವಾಸುದೇವಂ ದೇವತಾಮಂಡಲಾಖಂಡಮಂಡನಂ ॥ ೮

ಹರಿಗಿಂತ ಉತ್ತಮರು ಇಲ್ಲವೇ ಇಲ್ಲ
ಇದು ಸಿದ್ಧ ತತ್ವಗಳ ಸಿದ್ಧಾಂತದಿಂದ
ಹರಿಯ ಸದ್ಗುಣಗಳಲಿ ಮುನಿಗಳಿಗೆ ಅತಿ ಭಕ್ತಿ
ಸತ್ಯ ಸಂಕಲ್ಪನು, ವೇದವಾದೋದಿತನು
ಸಂತೋಷಗೊಳಿಸುವೆನು ಶ್ರೀ ವಾಸುದೇವನನು ದೇವತಾಮಂಡಲಕೆ ಆಭರಣ ಶ್ರೀರಮಣ ೫

ಅಪರೋಕ್ಷ ಜ್ಞಾನಿಗಳ ಭವ ಬಂಧಮೋಚಕನು
ಬಾರಿ ಬಾರಿ ದರ್ಶನವ ಪಡೆಯುವ ಹಂಬಲದ
ಅಜಭವಾದಿಗಳಿಂದ ಪೂಜೆಯನು ಪಡೆಯುವನು
ದುಷ್ಟರಿಗೆ ದೂರನು ಸುಜನಾಂತರಂಗನು
ಸಂತೋಷಗೊಳಿಸುವೆನು ಶ್ರೀ ವಾಸುದೇವನನು ದೇವತಾಮಂಡಲಕೆ ಆಭರಣ ಶ್ರೀರಮಣ ೬

ಮಹದಾದಿ ತತ್ವಗಳ ಅಭಿಮಾನಿ ಬ್ರಹ್ಮನು
ಶ್ರೀಹರಿಯ ಸೃಷ್ಟಿಯಲಿ ಈತನೇ ಅಗ್ರಜನು
ಸುರಪತಿಗೂ ಹಿರಿಯನು ಪಾರ್ವತೀಪತಿಯು
ದೇವಾಧಿದೇವರೊಳು ಹರಿಯೆ ಸರ್ವೋತ್ತಮನು
ಸಂತೋಷಗೊಳಿಸುವೆನು ಶ್ರೀ ವಾಸುದೇವನನು ದೇವತಾಮಂಡಲಕೆ ಆಭರಣ ಶ್ರೀರಮಣ ೭

ನಿತ್ಯ ಸದ್ಗುಣವೆಲ್ಲ ಅಚ್ಯುತವು ಹರಿಯಲ್ಲಿ
ಪ್ರಚ್ಯುತವು ದೋಷಗಳು ಸಂಪೂರ್ಣವಾಗಿ
ಸಾರುವುವು ವೇದಗಳು ಹರಿಯ ಪಾರಮ್ಯವನು
ಬ್ರಹ್ಮರುದ್ರೇಂದ್ರರು ಅರ್ಚಿಪರು ಈತನನು
ಸಂತೋಷಗೊಳಿಸುವೆನು ಶ್ರೀ ವಾಸುದೇವನನು ದೇವತಾಮಂಡಲಕೆ ಆಭರಣ ಶ್ರೀರಮಣ ೮

ಧಾರ್ಯತೇ ಯೇನವಿಶ್ವಂ ಸದಾಜಾದಿಕಂ
ವಾರ್ಯತೇಶೇಷದುಃಖಂ ನಿಜಧ್ಯಾಯಿನಾಂ ।
ಪಾರ್ಯತೇ ಸರ್ವಮನ್ಯೈರ್ನಯತ್ಪಾರ್ಯತೇ
ಕಾರ್ಯತೇ ಚಾಖಿಲಂಸರ್ವಭೂತ್ಯೈಃ ಸದಾ ।
ಪ್ರೀಣಯಾಮೋ ವಾಸುದೇವಂ ದೇವತಾಮಂಡಲಾಖಂಡಮಂಡನಂ ॥ ೯

ಸರ್ವಪಾಪಾನಿ ಯತ್ಸಂಸ್ಮೃತೇಃ ಸಂಕ್ಷಯ
ಸರ್ವದಾಯಾಂತಿಭಕ್ತ್ಯಾವಿಶುದ್ಧಾತ್ಮನಾಂ ।
ಶರ್ವಗುರ್ವಾದಿಗೀರ್ವಾಣ ಸಂಸ್ಥಾನದಃ
ಕುರ್ವತೇ ಕರ್ಮ ಯತ್ಪ್ರೀತಯೆಸಜ್ಜನಾಃ ।
ಪ್ರೀಣಯಾಮೋ ವಾಸುದೇವಂ ದೇವತಾಮಂಡಲಾಖಂಡಮಂಡನಂ ॥ ೧೦

ಅಕ್ಷಯಂ ಕರ್ಮಯಸ್ಮಿನ್ ಪರೇಸ್ವರ್ಪಿತಂಽ
ಪ್ರಕ್ಷಯಂ ಯಾಂತಿದುಃಖಾನಿಃಯನ್ನಾಮತ ।
ಅಕ್ಷರೋಯೋಽಜರಃ ಸರ್ವದೈವಾಮೃತಃ
ಕುಕ್ಷಿಗಂ ಯಸ್ಯ ವಿಶ್ವಂಸದಾಜಾದಕಮ್ ।
ಪ್ರೀಣಯಾಮೋ ವಾಸುದೇವಂ ದೇವತಾಮಂಡಲಾಖಂಡಮಂಡನಂ ॥ ೧೧

ನಂದಿತೀರ್ಥೋರುಸನ್ನಾಮಿನೋ ನಂದಿನಃ
ಸಂದಧಾನಾಃ ಸದಾನಂದದೇವೇಮತಿಮ್ ।
ಮಂದಹಾಸಾರುಣಾಪಾಂಗ ದತ್ತೋನ್ನತಿಂ
ನ(ವಂ)ದಿತಾ ಶೇಷದೇವಾದಿವೃಂದಂ ಸದಾ ।
ಪ್ರೀಣಯಾಮೋ ವಾಸುದೇವಂ ದೇವತಾಮಂಡಲಾಖಂಡಮಂಡನಂ ॥ ೧೨

॥ ಇತಿ ದ್ವಾದಶಸ್ತೋತ್ರೇ ಅಷ್ಟಮೋಧ್ಯಾಯಃ ॥

ವಿಧಿಸಹಿತ ವಿಶ್ವವನು ಧರಿಸಿರುವ ಪ್ರಭುವೆ
ತತ್ವಾಭಿಮಾನಿಗಳ ಕಾರ್ಯನಿಯಾಮಕನೆ
ಧ್ಯಾನಿಸುವ ತನ್ನವರ ದುಃಖ ನಿವಾರಕನೆ
ಸರ್ವ ಭೂತಗಳಿಂದ ಕೆಲಸ ಪಡೆಯುವವನೆ
ಸಂತೋಷಗೊಳಿಸುವೆನು ಶ್ರೀ ವಾಸುದೇವನನು ದೇವತಾಮಂಡಲಕೆ ಆಭರಣ ಶ್ರೀರಮಣ ೯

ಪರಿಶುದ್ಧ ಭಕ್ತಿಯಲಿ ಶ್ರೀಹರಿಯ ಸ್ಮರಿಸಿದರೆ
ಸರ್ವದಾ ಕಳೆಯುವುವು ಸಕಲ ಪಾಪಂಗಳು
ಶರ್ವ ಗುರ್ವಾದಿಗಳು ಪದವಿಯನು ಪಡೆಯುವರು
ಕರ್ಮ ಮಾಡುವರಿವನ ಕೃಪೆಗಾಗಿ ಸಜ್ಜನರು
ಸಂತೋಷಗೊಳಿಸುವೆನು ಶ್ರೀ ವಾಸುದೇವನನು ದೇವತಾಮಂಡಲಕೆ ಆಭರಣ ಶ್ರೀರಮಣ ೧೦

ಶ್ರೀಹರಿಗೆ ಅರ್ಪಿಸಿದ ಕರ್ಮಫಲ ಹೆಚ್ಚುವುದು
ನಿಶ್ಶೇಷಗೊಳ್ಳುವುವು ಸಕಲ ದುಃಖಾದಿಗಳು
ಶ್ರೀಹರಿಯು ಅಕ್ಷರನು ಅವಿನಾಶ ಅಜರನು
ಅಡಗಿಹುದು ಒಡಲಿನಲಿ ಬ್ರಹ್ಮಾಂಡವೆಲ್ಲ
ಸಂತೋಷಗೊಳಿಸುವೆನು ಶ್ರೀ ವಾಸುದೇವನನು ದೇವತಾಮಂಡಲಕೆ ಆಭರಣ ಶ್ರೀರಮಣ ೧೧

ಮಂದಹಾಸದ ನಗೆಯ ಮುಖಕಮಲದಿಂದ
ನಂದತೀರ್ಥರೆಂಬ ನಾವು ರಚಿಸಿಹೆವು ಸ್ತೋತ್ರಗಳ
ಆನಂದ ತುಂದಿಲರು ಸದಾನಂದ ಪ್ರಿಯರು
ಆದಿಶೇಷನ ವೃಂದಕಾನಂದ ನೀಡುವೆವು
ಸಂತೋಷಗೊಳಿಸುವೆನು ಶ್ರೀ ವಾಸುದೇವನನು ದೇವತಾಮಂಡಲಕೆ ಆಭರಣ ಶ್ರೀರಮಣ ೧೨

ಕನ್ನಡ ಪದ್ಯಾನುವಾದದ
ಶ್ರೀದ್ವಾದಶಸ್ತೋತ್ರ ಎಂಟನೇ ಅಧ್ಯಾಯವು ಮುಗಿದುದು

## ನವಮೋಧ್ಯಾಯಃ

ಅತಿಮತ ತಮೋಗಿರಿಸಮಿತಿವಿಭೇದನ
ಪಿತಾಮಹಭೂತಿದ ಗುಣಗಣನಿಲಯ ।
ಶುಭತಮಕಥಾಶಯ ಪರಮಸದೋದಿತ
ಜಗದೇಕಕಾರಣ ರಾಮ ರಮಾರಮಣ ॥ ೧

ವಿಧಿಭವಮುಖ ಸುರಸತತ ಸುವಂದಿತ
ರಮಾ ಮನೋವಲ್ಲಭ ಭವ ಮಮ ಶರಣಮ್ ।
ಶುಭತಮಕಥಾಶಯ ಪರಮಸದೋದಿತ
ಜಗದೇಕಕಾರಣ ರಾಮ ರಮಾರಮಣ ॥ ೨

ಅಗಣಿತಗುಣಗಣ ಮಯಶರೀರ ಹೇ
ವಿಗತಗುಣೇತರ ಭವ ಮಮ ಶರಣಮ್ ।
ಶುಭತಮಕಥಾಶಯ ಪರಮಸದೋದಿತ
ಜಗದೇಕಕಾರಣ ರಾಮ ರಮಾರಮಣ ॥ ೩

ಅಪರಿಮಿತ ಸುಖನಿಧಿವಿಮಲಸುದೇಹ ಹೇ
ವಿಗತಸುಖೇತರ ಭವ ಮಮ ಶರಣಮ್ ।
ಶುಭತಮಕಥಾಶಯ ಪರಮಸದೋದಿತ
ಜಗದೇಕಕಾರಣ ರಾಮ ರಮಾರಮಣ ॥ ೪

## ಒಂಭತ್ತನೇ ಅಧ್ಯಾಯಃ

*ಅಜ್ಞಾನ ತಿಮಿರಗಿರಿ ಭಂಜಕನು ನೀನು*
*ಬ್ರಹ್ಮನಿಗೂ ಭಾಗ್ಯವನು ಕರುಣಿಸುವವನು*
*ಮಂಗಳ ಕಥನದಿ ಕೊಂಡಾಡುವೆನು*
*ರಮಾರಮಣನೆ ರಕ್ಷಕನಾಗು* ೧

*ವಿಧಿ, ಭವ ಸುರರಿಂ ವಂದಿತ ನೀನು*
*ಲಕ್ಷ್ಮೀಪತಿಯೆ ಶರಣಾಗುವೆನು*
*ಮಂಗಳ ಕಥನದಿ ಕೊಂಡಾಡುವೆನು*
*ರಮಾರಮಣನೆ ರಕ್ಷಕನಾಗು* ೨

*ಅಗಣಿತಗುಣಮಯ ಪುರುಷೋತ್ತಮನೆ*
*ವಿಗತ ಗುಣಾಢ್ಯನೆ ಸರ್ವೋತ್ತಮನೆ*
*ಮಂಗಳ ಕಥನದಿ ಕೊಂಡಾಡುವೆನು*
*ರಮಾರಮಣನೆ ರಕ್ಷಕನಾಗು* ೩

*ಪರಿಮಿತಿ ಇಲ್ಲದ ಸುಖನಿಧಿ ನೀನು*
*ಶೋಕವಿರಹಿತನೆ ಶರಣಾಗುವೆನು*
*ಮಂಗಳ ಕಥನದಿ ಕೊಂಡಾಡುವೆನು*
*ರಮಾರಮಣನೆ ರಕ್ಷಕನಾಗು* ೪

ಪ್ರಚಲಿತಲಯಜಲವಿಹರಣ ಶಾಶ್ವತ
ಸುಖಮಯಮೀನ ಹೇ ಭವ ಮಮ ಶರಣಮ್ ।
ಶುಭತಮಕಥಾಶಯ ಪರಮಸದೋದಿತ
ಜಗದೇಕಕಾರಣ ರಾಮ ರಮಾರಮಣ ॥ ೫

ಸುರದಿತಿಜ ಸುಬಲವಿಲುಲಿತಮಂದರ–
ಧರಪರ (ವರ) ಕೂರ್ಮ ಹೇ ಭವ ಮಮ ಶರಣಮ್ ।
ಶುಭತಮಕಥಾಶಯ ಪರಮಸದೋದಿತ
ಜಗದೇಕಕಾರಣ ರಾಮ ರಮಾರಮಣ ॥ ೬

ಸಗಿರಿವರಧರಾತಲವಹ ಸುಸೂಕರ
ಪರಮವಿಬೋಧ ಹೇ ಭವ ಮಮ ಶರಣಮ್ ।
ಶುಭತಮಕಥಾಶಯ ಪರಮಸದೋದಿತ
ಜಗದೇಕಕಾರಣ ರಾಮ ರಮಾರಮಣ ॥ ೭

ಅತಿಬಲದಿತಿಸುತಹೃದಯವಿಭೇದನ
ಜಯನೃಹರೇಽಮಲ ಭವ ಮಮ ಶರಣಮ್ ।
ಶುಭತಮಕಥಾಶಯ ಪರಮಸದೋದಿತ
ಜಗದೇಕಕಾರಣ ರಾಮ ರಮಾರಮಣ ॥ ೮

*ಪ್ರಲಯದ ಜಲದಲಿ ವಿಹರಿಪ ಮತ್ಸ್ಯನೆ*
*ಶಾಶ್ವತ ಸುಖಿಯೆ ಶರಣಾಗುವೆನು*
*ಮಂಗಳ ಕಥನದಿ ಕೊಂಡಾಡುವೆನು*
*ರಮಾರಮಣನೆ ರಕ್ಷಕನಾಗು* ೫

*ಸುರ,ದಾನವರು ಕಡಲನು ಕಡೆಯಲು*
*ಮಂದರ ಧರಿಸಿದ ಕೂರ್ಮನೆ ಶರಣು*
*ಮಂಗಳ ಕಥನದಿ ಕೊಂಡಾಡುವೆನು*
*ರಮಾರಮಣನೆ ರಕ್ಷಕನಾಗು* ೬

*ಗಿರಿಧರೆ ಧರೆಯನು ಧರಿಸಿದ ಸೂಕರ*
*ಪರಮವಿಬೋಧನೆ ಶರಣಾಗುವೆನು*
*ಮಂಗಳ ಕಥನದಿ ಕೊಂಡಾಡುವೆನು*
*ರಮಾರಮಣನೆ ರಕ್ಷಕನಾಗು* ೭

*ಖೂಳ ಹಿರಣ್ಯನ ಹೃದಯವಿಭೇದನ*
*ನರಹರಿ ರೂಪನೆ ಶರಣಾಗುವೆನು*
*ಮಂಗಳ ಕಥನದಿ ಕೊಂಡಾಡುವೆನು*
*ರಮಾರಮಣನೆ ರಕ್ಷಕನಾಗು* ೮

ಬಲಿಮುಖದಿತಿಸುತವಿಜಯವಿನಾಶನ
ಜಗದವನಾಜಿತ ಭವ ಮಮ ಶರಣಮ್ ।
ಶುಭತಮಕಥಾಶಯ ಪರಮಸದೋದಿತ
ಜಗದೇಕಕಾರಣ ರಾಮ ರಮಾರಮಣ ॥ ೯

ಅವಿಜಿತಕುನೃಪತಿಸಮಿತಿವಿಖಂಡನ
ರಮಾವರ ವೀರಪ ಭವ ಮಮಶರಣಮ್ ।
ಶುಭತಮಕಥಾಶಯ ಪರಮಸದೋದಿತ
ಜಗದೇಕಕಾರಣ ರಾಮ ರಮಾರಮಣ ॥ ೧೦

ಖರತರನಿಶಿಚರದಹನ ಪರಾಮೃತ
ರಘುವರ ಮಾನದ ಭವ ಮಮ ಶರಣಮ್ ।
ಶುಭತಮಕಥಾಶಯ ಪರಮಸದೋದಿತ
ಜಗದೇಕಕಾರಣ ರಾಮ ರಮಾರಮಣ ॥ ೧೧

ಸಲಲಿತತನುವರ ವರದ ಮಹಾಬಲ
ಯದುವರ ಪಾರ್ಥಪ ಭವ ಮಮ ಶರಣಮ್ ।
ಶುಭತಮಕಥಾಶಯ ಪರಮಸದೋದಿತ
ಜಗದೇಕಕಾರಣ ರಾಮ ರಮಾರಮಣ ॥ ೧೨

*ಬಲೀಂದ್ರ ರಾಜನ ವಿಜಯ ವಿನಾಶನ*
*ವಾಮನ ರೂಪಿಯೆ ಶರಣಾಗುವೆನು*
*ಮಂಗಳ ಕಥನದಿ ಕೊಂಡಾಡುವೆನು*
*ರಮಾರಮಣನೆ ರಕ್ಷಕನಾಗು* ೯

*ಧೂರ್ತ ನೃಪತಿಗಳ ಸಂಹಾರಕನೆ*
*ಪರಶುರಾಮನೆ ಶರಣಾಗುವೆನು*
*ಮಂಗಳ ಕಥನದಿ ಕೊಂಡಾಡುವೆನು*
*ರಮಾರಮಣನೆ ರಕ್ಷಕನಾಗು* ೧೦

*ಖರ-ದೂಷಣರನು ದಹಿಸಿದ ಪ್ರಭುವೆ*
*ರಘುವರ ರಾಮನೆ ಶರಣಾಗುವೆನು*
*ಮಂಗಳ ಕಥನದಿ ಕೊಂಡಾಡುವೆನು*
*ರಮಾರಮಣನೆ ರಕ್ಷಕನಾಗು* ೧೧

*ವರದ ಮಹಾಬಲ, ಸುಂದರೀಕಾಂತ*
*ಪಾರ್ಥನ ಪ್ರಿಯನೆ ಶರಣಾಗುವೆನು*
*ಖಮಂಗಳ ಕಥನದಿ ಕೊಂಡಾಡುವೆನು*
*ರಮಾರಮಣನೆ ರಕ್ಷಕನಾಗು* ೧೨

ದಿತಿಸುತವಿಮೋಹನ ವಿಮಲವಿಬೋಧನ
ಪರಗುಣಬುದ್ಧ ಹೇ ಭವ ಮಮ ಶರಣಮ್ ।
ಶುಭತಮಕಥಾಶಯ ಪರಮಸದೋದಿತ
ಜಗದೇಕಕಾರಣ ರಾಮ ರಮಾರಮಣ ॥ ೧೩

ಕಲಿಮಲಹುತವಹ ಸುಭಗಮಹೋತ್ಸವ
ಶರಣದ ಕಲ್ಕೀಶ ಹೇ ಭವ ಮಮ ಶರಣಮ್ ।
ಶುಭತಮಕಥಾಶಯ ಪರಮಸದೋದಿತ
ಜಗದೇಕಕಾರಣ ರಾಮ ರಮಾರಮಣ ॥ ೧೪

ಅಖಿಲಜನಿವಿಲಯ ಪರಸುಖ ಕಾರಣ
ಪರಪುರುಷೋತ್ತಮ ಭವ ಮಮ ಶರಣಮ್ ।
ಶುಭತಮಕಥಾಶಯ ಪರಮಸದೋದಿತ
ಜಗದೇಕಕಾರಣ ರಾಮ ರಮಾರಮಣ ॥ ೧೫

ಇತಿ ತವನುತಿವರಸತತರತೇರ್ಭವ
ಸುಶರಣಮುರು ಸುಖತೀರ್ಥಮುನೇರ್ಭಗವನ್ ।
ಶುಭತಮಕಥಾಶಯ ಪರಮಸದೋದಿತ
ಜಗದೇಕಕಾರಣ ರಾಮ ರಮಾರಮಣ ॥ ೧೬

॥ ಇತಿ ದ್ವಾದಶಸ್ತೋತ್ರೇ ನವಮೋಧ್ಯಾಯಃ ॥

*ಅಸುರ ಸಮ್ಮೋಹನ ವಿಮಲ ವಿಬೋಧನ*
*ಬುದ್ಧ ಸ್ವರೂಪನೆ ಶರಣಾಗುವೆನು*
*ಮಂಗಳಕಥನದಿ ಕೊಂಡಾಡುವೆನು*
*ರಮಾರಮಣನೆ ರಕ್ಷಕನಾಗು* ೧೩

*ಕಲಿಯುಗ ಕಲ್ಮಷ ದಹಿಸುವ ಅಗ್ನಿಯೆ*
*ಸುಭಗ ಮಹೋತ್ಸವ ಕಲ್ಕಿಯೆ ಶರಣು*
*ಮಂಗಳ ಕಥನದಿ ಕೊಂಡಾಡುವೆನು*
*ರಮಾರಮಣನೆ ರಕ್ಷಕನಾಗು* ೧೪

*ಸಕಲ ಸೃಷ್ಟಿಯ, ಪ್ರಲಯದ ಕಾರಣ*
*ಪುರುಷೋತ್ತಮನೆ ಶರಣಾಗುವೆನು*
*ಮಂಗಳ ಕಥನದಿ ಕೊಂಡಾಡುವೆನು*
*ರಮಾರಮಣನೆ ರಕ್ಷಕನಾಗು* ೧೫

*ಈ ಪರಿಯಲಿ ಶ್ರೀಹರಿಯನು ಸ್ತುತಿಸುವ*
*ಮುನಿಸುಖತೀರ್ಥರ ಸ್ತವನವನಾಲಿಸಿ*
*ಸತತವೂ ಪಾಲಿಸು ಕೃಪೆಯಿಂದ*
*ರಕ್ಷಿಸು ಭಕುತರ ಅನವರತ* ೧೬

ಕನ್ನಡ ಪದ್ಯಾನುವಾದದ
ಶ್ರೀದ್ವಾದಶಸ್ತೋತ್ರ ಒಂಭತ್ತನೇ ಅಧ್ಯಾಯವು ಮುಗಿದುದು

## ದಶಮೋಧ್ಯಾಯಃ

ಅವ ನಃ ಶ್ರೀಪತಿರಪ್ರತಿರಧಿಕೇಶಾದಿಭವಾದೇ ।
ಕರುಣಾಪೂರ್ಣ ವರಪ್ರದ ಚರಿತಂ ಜ್ಞಾಪಯ ಮೇ ತೇ ॥ ೧

ಸುರವಂಧ್ಯಾದಿಪ ಸದ್ವರಭರಿತಾ ಶೇಷಗುಣಾಲಮ್ ।
ಕರುಣಾಪೂರ್ಣ ವರಪ್ರದ ಚರಿತಂ ಜ್ಞಾಪಯ ಮೇ ತೇ ॥ ೨

ಸಕಲಧ್ವಾಂತವಿನಾಶನ ಪರಮಾನಂದ ಸುಧಾಹೋ ।
ಕರುಣಾಪೂರ್ಣ ವರಪ್ರದ ಚರಿತಂ ಜ್ಞಾಪಯ ಮೇ ತೇ ॥ ೩

ತ್ರಿಜಗತ್ಪೋತ ಸದಾರ್ಚಿತಶರಣಾಶಾಪತಿಧಾತೋ ।
ಕರುಣಾಪೂರ್ಣ ವರಪ್ರದ ಚರಿತಂ ಜ್ಞಾಪಯ ಮೇ ತೇ ॥ ೪

ತ್ರಿಗುಣಾತೀತವಿಧಾರಕ ಪರಿತೋ ದೇಹಿ ಸುಭಕ್ತಿಮ್ ।
ಕರುಣಾಪೂರ್ಣ ವರಪ್ರದ ಚರಿತಂ ಜ್ಞಾಪಯ ಮೇ ತೇ ॥ ೫

## ಹತ್ತನೇ ಅಧ್ಯಾಯ

*ಓ ಪರಿಪಾಲಕ,ಸರ್ವೋತ್ತಮನೆ*
*ವಿಧಿ ಭವ ಕಾರಣ, ವರದಾಯಕನೆ*
*ಕರುಣಾಪೂರ್ಣನೆ ಲಕುಮೀಪತಿಯೆ*
*ನಿನ್ನಯ ಚರಿತೆಯ ಅರಿವನು ನೀಡು* ೧

*ಸುರಗಣ ವಂದಿತ ಸರ್ವಾಧೀಶನೆ*
*ಸದ್ವರದಾತನೆ ಗುಣಪರಿಪೂರ್ಣನೆ*
*ಕರುಣಾಪೂರ್ಣನೆ ಲಕುಮೀಪತಿಯೆ*
*ನಿನ್ನಯ ಚರಿತೆಯ ಅರಿವನು ನೀಡು* ೨

*ತಿಮಿರವಿನಾಶಕ ಪರಮಾನಂದನೆ*
*ಆನಂದಾಮೃತ ಧಾರಾಪೂರ್ಣನೆ*
*ಕರುಣಾಪೂರ್ಣನೆ ಲಕುಮೀಪತಿಯೆ*
*ನಿನ್ನಯ ಚರಿತೆಯ ಅರಿವನು ನೀಡು* ೩

*ಮೂಜಗ ನಾವಿಕ ಸದಾರ್ಚಿತ ಚರಣ*
*ಸರಸ್ವತೀಪತಿ ಪೋಷಕ ಪ್ರಭುವೆ*
*ಕರುಣಾಪೂರ್ಣನೆ ಲಕುಮೀಪತಿಯೆ*
*ನಿನ್ನಯ ಚರಿತೆಯ ಅರಿವನು ನೀಡು* ೪

*ವಿಧಾರಕ ಪಾಲಕ ತ್ರಿಗುಣಾತೀತನೆ*
*ನಿನ್ನೊಳು ನಿರ್ಮಲ ಭಕ್ತಿಯ ನೀಡು*
*ಕರುಣಾಪೂರ್ಣನೆ ಲಕುಮೀಪತಿಯೆ*
*ನಿನ್ನಯ ಚರಿತೆಯ ಅರಿವನು ನೀಡು.* ೫

ಶರಣಂ ಕಾರಣಾಭಾವನ ಭವ ಮೇ ತಾತ ಸದಾಽಲಮ್ ।
ಕರುಣಾಪೂರ್ಣ ವರಪ್ರದ ಚರಿತಂ ಜ್ಞಾಪಯ ಮೇ ತೇ ॥ ೬

ಮರಣಪ್ರಾಣದ ಪಾಲಕ ಜಗದೀಶಾವ ಸುಭಕ್ತಿಮ್ ।
ಕರುಣಾಪೂರ್ಣ ವರಪ್ರದ ಚರಿತಂ ಜ್ಞಾಪಯ ಮೇ ತೇ ॥ ೭

ತರುಣಾದಿತ್ಯ ಸವರ್ಣಕಚರಣಾಬ್ಜಾಮಲಕೀರ್ತೇ ।
ಕರುಣಾಪೂರ್ಣ ವರಪ್ರದ ಚರಿತಂ ಜ್ಞಾಪಯ ಮೇ ತೇ ॥ ೮

ಸಲಿಲಪ್ರೋತ್ಥಸರಾಗಕಮಣಿವರ್ಣೋಚ್ಚನಖಾದೇ ।
ಕರುಣಾಪೂರ್ಣ ವರಪ್ರದ ಚರಿತಂ ಜ್ಞಾಪಯ ಮೇ ತೇ ॥ ೯

ಖಜ(ಕಜ)ತೂಣೀನಿಭಪಾವನ ವರಜಂಘಾಮಿತಶಕ್ತೇ ।
ಕರುಣಾಪೂರ್ಣ ವರಪ್ರದ ಚರಿತಂ ಜ್ಞಾಪಯ ಮೇ ತೇ ॥ ೧೦

*ಮಹದಾದಿ ತತ್ವದ ಕಾರಣ ನೀನು*
*ಭಕುತರ ರಕ್ಷಕ ವಿಶ್ವದ ಜನಕ*
*ಕರುಣಾಪೂರ್ಣನೆ ಲಕುಮೀಪತಿಯೆ*
*ನಿನ್ನಯ ಚರಿತೆಯ ಅರಿವನು ನೀಡು* ೬

*ಸಾವು–ಜೀವಗಳ ನೀಡುವ ದಾತ*
*ಪಾಲಕ ಪ್ರಭುವೆ ಭಕ್ತಿಯ ನೀಡು*
*ಕರುಣಾಪೂರ್ಣನೆ ಲಕುಮೀಪತಿಯೆ*
*ನಿನ್ನಯ ಚರಿತೆಯ ಅರಿವನು ನೀಡು* ೭

*ಬಾಲಾರ್ಕನ ರೀತಿಯ ಚಿನ್ನದ ಪಾದ*
*ಧವಳ ಕೀರ್ತಿಯ ಪ್ರಭು ಶ್ರೀಹರಿಯೆ*
*ಕರುಣಾಪೂರ್ಣನೆ ಲಕುಮೀಪತಿಯೆ*
*ನಿನ್ನಯ ಚರಿತೆಯ ಅರಿವನು ನೀಡು* ೮

*ನೀರೊಳು ಅರಳಿದ ತಾವರೆಯಂತೆ*
*ಕೆಂಬಣ್ಣದ ಮಣಿ ನಖವುಳ್ಳವನೆ*
*ಕರುಣಾಪೂರ್ಣನೆ ಲಕುಮೀಪತಿಯೆ*
*ನಿನ್ನಯ ಚರಿತೆಯ ಅರಿವನು ನೀಡು* ೯

*ಮೊಳಕಾಲುಂಟು ಹೂಬತ್ತಳಿಕೆ*
*ಅನುಪಮ ಶಕ್ತಿಯ ಅನುಪಮ ಆಗರ*
*ಕರುಣಾಪೂರ್ಣನೆ ಲಕುಮೀಪತಿಯೆ*
*ನಿನ್ನಯ ಚರಿತೆಯ ಅರಿವನು ನೀಡು* ೧೦

ಇಭಹಸ್ತಪರಭಶೋಭನಪರಮೋರು ಸ್ಥಿರ(ಲ)ಮಾಲೇ ।
ಕರುಣಾಪೂರ್ಣ ವರಪ್ರದ ಚರಿತಂ ಜ್ಞಾಪಯ ಮೇ ತೇ ॥ ೧೧

ಅಸನೋ(ಮೋ)ತ್ಫುಲ್ಲಸುಪುಷ್ಪಕಸಮವರ್ಣಾವರಣಾಂತೇ
ಕರುಣಾಪೂರ್ಣ ವರಪ್ರದ ಚರಿತಂ ಜ್ಞಾಪಯ ಮೇ ತೇ ॥ ೧೨

ಶತಮೋದೋದ್ಭವಸುಂದರಿ ವರಪದ್ಮೋತ್ಥಿತನಾಭೇ ।
ಕರುಣಾಪೂರ್ಣ ವರಪ್ರದ ಚರಿತಂ ಜ್ಞಾಪಯ ಮೇ ತೇ ॥ ೧೩

ಜಗದಾಗೂಹಕಪಲ್ಲವಸಮಕುಕ್ಷೇ ಶರಣಾದೇ ।
ಕರುಣಾಪೂರ್ಣ ವರಪ್ರದ ಚರಿತಂ ಜ್ಞಾಪಯ ಮೇ ತೇ ॥ ೧೪

ಜಗದಂಬಾಮಲಸುಂದರಗೃಹವಕ್ಷೋವರಯೋಗಿನ್ ।
ಕರುಣಾಪೂರ್ಣ ವರಪ್ರದ ಚರಿತಂ ಜ್ಞಾಪಯ ಮೇ ತೇ ॥ ೧೫

*ಊರುಗಳುಂಟು ಸೊಂಡಿಲ ರೀತಿ*
*ರಮಾಭ್ರಮರಳು ರಮಿಸುವಳಲ್ಲಿ*
*ಕರುಣಾಪೂರ್ಣನೆ ಲಕುಮೀಪತಿಯೆ*
*ನಿನ್ನಯ ಚರಿತೆಯ ಅರಿವನು ನೀಡು* ೧೧

*ಪೀತಾಂಬರವು ಅರಳಿದ ಹೂವು!*
*ಉಜ್ವಲ ಕಾಂತಿಯು ಬೆಳಗಿಹುದಲ್ಲಿ*
*ಕರುಣಾಪೂರ್ಣನೆ ಲಕುಮೀಪತಿಯೆ*
*ನಿನ್ನಯ ಚರಿತೆಯ ಅರಿವನು ನೀಡು* ೧೨

*ಪರಮಾನಂದದ ಬ್ರಹ್ಮನು ಜನಿಸಿದ*
*ಸುಂದರ ತಾವರೆ ಹೊಕ್ಕಳಿನವನೆ*
*ಕರುಣಾಪೂರ್ಣನೆ ಲಕುಮೀಪತಿಯೆ*
*ನಿನ್ನಯ ಚರಿತೆಯ ಅರಿವನು ನೀಡು* ೧೩

*ಚೈತ್ರದ ನವಪಲ್ಲವದಂತಿಹ*
*ಉದರದೊಳಿರಿಸಿಹೆ ಬ್ರಹ್ಮಾಂಡವನು*
*ಕರುಣಾಪೂರ್ಣನೆ ಲಕುಮೀಪತಿಯೆ*
*ನಿನ್ನಯ ಚರಿತೆಯ ಅರಿವನು ನೀಡು* ೧೪

*ಆ ಜಗದಂಬೆಗೆ ನೆಲೆಯಾಗಿರುವ*
*ಸುಂದರ ವಕ್ಷದ ಪುರುಷೋತ್ತಮನೆ*
*ಕರುಣಾಪೂರ್ಣನೆ ಲಕುಮೀಪತಿಯೆ*
*ನಿನ್ನಯ ಚರಿತೆಯ ಅರಿವನು ನೀಡು* ೧೫

ದಿತಿಜಾಂತಪ್ರದ ಚಕ್ರಧರಗದಾಯುಗ್ವರಬಾಹೋ ।
ಕರುಣಾಪೂರ್ಣ ವರಪ್ರದ ಚರಿತಂ ಜ್ಞಾಪಯ ಮೇ ತೇ ॥ ೧೬

ಪರಮಜ್ಞಾನಮಹಾನಿಧಿವದನ ಶ್ರೀರಮಣೇಂದೋ ।
ಕರುಣಾಪೂರ್ಣ ವರಪ್ರದ ಚರಿತಂ ಜ್ಞಾಪಯ ಮೇ ತೇ ॥ ೧೭

ನಿಖಿಲಾಘೌಘವಿನಾಶನ ಪರಸೌಖ್ಯಪ್ರದದೃಷ್ಟೇ ।
ಕರುಣಾಪೂರ್ಣ ವರಪ್ರದ ಚರಿತಂ ಜ್ಞಾಪಯ ಮೇ ತೇ ॥ ೧೮

ಪರಮಾನಂದಸುತೀರ್ಥಮುನಿರಾಜೋ ಹರಿಗಾಥಾಮ್
ಕೃತವಾನ್ನಿತ್ಯಸುಪೂರ್ಣಪರಮಾನಂದಪದೈಷಿ(ಷೀ)ನ್ ॥ ೧೯

॥ ಇತಿ ದ್ವಾದಶಸ್ತೋತ್ರೇ ದಶಮೋಧ್ಯಾಯಃ ॥

*ದಿತಿಜರ ಮರಣಕೆ ಕಾರಣವಾಗುವ*
*ಶಂಖ,ಚಕ್ರ, ಗದೆ ಧರಿಸಿಹ ಬಾಹು*
*ಕರುಣಾಪೂರ್ಣನೆ ಲಕುಮೀಪತಿಯೆ*
*ನಿನ್ನಯ ಚರಿತೆಯ ಅರಿವನು ನೀಡು* ೧೬

*ಪರಮ ಜ್ಞಾನಮಹಾನಿಧಿ ವದನನೆ*
*ಸಿರಿಮುಖ ಕಮಲಕೆ ಚಂದ್ರಮನೆ*
*ಕರುಣಾಪೂರ್ಣನೆ ಲಕುಮೀಪತಿಯೆ*
*ನಿನ್ನಯ ಚರಿತೆಯ ಅರಿವನು ನೀಡು* ೧೭

*ಕೇವಲ ಕಣ್ಣಿನ ನೋಟದ ಮಾತ್ರದಿ*
*ಭಕ್ತರ ಪಾಪವ ಪರಿಹರಿಸುವನೆ*
*ಕರುಣಾಪೂರ್ಣನೆ ಲಕುಮೀಪತಿಯೆ*
*ನಿನ್ನಯ ಚರಿತೆಯ ಅರಿವನು ನೀಡು* ೧೮

*ಆನಂದ ತೀರ್ಥರು ರಚಿಸಿಹ ಈ ಸ್ತುತಿ*
*ನರಹರಿ ಕಥನವ ಸಾರುವುದು*
*ಪರಮಾತ್ಮನ ಪದ ಬಯಸುವ ಭಕ್ತರು*
*ಮುದದಲಿ ಪಠಿಸಲಿ ಈ ಸ್ತುತಿಯ* ೧೯

ಕನ್ನಡ ಪದ್ಯಾನುವಾದದ
ಶ್ರೀದ್ವಾದಶಸ್ತೋತ್ರ ಹತ್ತನೇ ಅಧ್ಯಾಯವು ಮುಗಿದುದು

## ಏಕಾದಶೋಧ್ಯಾಯಃ

ಉದೀರ್ಣಮಜರಂ ದಿವ್ಯಮಮೃತಸ್ಯಂದ್ಯಧೀಶಿತುಃ ।
ಆನಂದಸ್ಯ ಪದಂ ವಂದೇ ಬ್ರಹ್ಮೇಂದ್ರಾದ್ಯಭಿ ವಂದಿತಮ್ ॥ ೧

ಸರ್ವವೇದ(ದೇವ)ಪದೋದ್ಗೀತಮಿಂದಿರಾಧಾರಮುತ್ತಮಮ್ ।
ಆನಂದಸ್ಯ ಪದಂ ವಂದೇ ಬ್ರಹ್ಮೇಂದ್ರಾದ್ಯಭಿ ವಂದಿತಮ್ ॥ ೨

ಸರ್ವದೇವಾದಿದೇವಸ್ಯ ವಿದಾರಿತಮಹತ್ತಮಃ ।
ಆನಂದಸ್ಯ ಪದಂ ವಂದೇ ಬ್ರಹ್ಮೇಂದ್ರಾದ್ಯಭಿ ವಂದಿತಮ್ ॥ ೩

ಉದಾರಮಾದರಾನ್ನಿತ್ಯಮನಿಂದ್ಯಂ ಸುಂದರೀಪತೇಃ ।
ಆನಂದಸ್ಯ ಪದಂ ವಂದೇ ಬ್ರಹ್ಮೇಂದ್ರಾದ್ಯಭಿ ವಂದಿತಮ್ ॥ ೪

ಇಂದೀವರೋದರನಿಭಂ ಸಂಪೂರ್ಣಂ ವಾದಿಮೋಹನ(ದ)ಮ್ ।
ಆನಂದಸ್ಯ ಪದಂ ವಂದೇ ಬ್ರಹ್ಮೇಂದ್ರಾದ್ಯಭಿ ವಂದಿತಮ್ ॥ ೫

## ಹನ್ನೊಂದನೇ ಅಧ್ಯಾಯ

*ಉತ್ತಮೋತ್ತಮ ಪಾದ, ಮುಪ್ಪಿರದ ಪಾದ*
*ಆನಂದ ಸುಧೆಯನ್ನು ಹರಿಸುವ ಪಾದ*
*ಬ್ರಹ್ಮೇಂದ್ರರೂ ಕೂಡ ಪೂಜಿಸುವ ಪಾದಕ್ಕೆ*
*ವಂದಿಸುವೆ ಮುದ ಕೊಡುವ ಶ್ರೀಹರಿಯ ಪಾದಕ್ಕೆ* ೧

*ವೇದವಾಕ್ಯಗಳಿಂದ ಪ್ರತಿಪಾದ್ಯನಿವನು*
*ಇಂದಿರೆಯ ಆವಾಸ ಪರಮಪಾವನನಿವನು*
*ಬ್ರಹ್ಮೇಂದ್ರರೂ ಕೂಡ ಪೂಜಿಸುವ ಪಾದಕ್ಕೆ*
*ವಂದಿಸುವೆ ಮುದ ಕೊಡುವ ಶ್ರೀ ಹರಿಯ ಪಾದಕ್ಕೆ* ೨

*ಸರ್ವ ದೇವರ ದೇವ, ಎಲ್ಲದಕೂ ಕಾರಣನು*
*ಅಜ್ಞಾನ ತಿಮಿರವನು ಬಡಿದೋಡಿಸುವವನು*
*ಬ್ರಹ್ಮೇಂದ್ರರೂ ಕೂಡ ಪೂಜಿಸುವ ಪಾದಕ್ಕೆ*
*ವಂದಿಸುವೆ ಮುದ ಕೊಡುವ ಶ್ರೀ ಹರಿಯ ಪಾದಕ್ಕೆ* ೩

*ಕೊಡುಗೈಯ ಧಣಿ ಇವನು, ಸುಂದರೀಪತಿ ಇವನು*
*ನಿತ್ಯಸ್ತುತ್ಯನು ಇವನು ಸರ್ವರೊಳು ಉತ್ತಮನು*
*ಬ್ರಹ್ಮೇಂದ್ರರೂ ಕೂಡ ಪೂಜಿಸುವ ಪಾದಕ್ಕೆ*
*ವಂದಿಸುವೆ ಮುದ ಕೊಡುವ ಶ್ರೀ ಹರಿಯ ಪಾದಕ್ಕೆ* ೪

*ನೀಲ ಕಮಲದ ರೀತಿ ಕೋಮಲನು ಇವನು*
*ಸಂಪೂರ್ಣ ಗುಣಪೂರ್ಣ ವಾದಿ ಮೋಹಕನು*
*ಬ್ರಹ್ಮೇಂದ್ರರೂ ಕೂಡ ಪೂಜಿಸುವ ಪಾದಕ್ಕೆ*
*ವಂದಿಸುವೆ ಮುದ ಕೊಡುವ ಶ್ರೀ ಹರಿಯ ಪಾದಕ್ಕೆ* ೫

ದಾತೃಸರ್ವಾಮರೈಶ್ವರ್ಯವಿಮುಕ್ತ್ಯಾದೇರಹೋ ವರಮ್ ।
ಆನಂದಸ್ಯ ಪದಂ ವಂದೇ ಬ್ರಹ್ಮೇಂದ್ರಾದ್ಯಭಿ ವಂದಿತಮ್ ॥ ೬

ದೂರಾದ್ದೂರತರಂ ಯತ್ತು ತದೇವಾಂತಿಕಮಂತಿಕಾತ್ ।
ಆನಂದಸ್ಯ ಪದಂ ವಂದೇ ಬ್ರಹ್ಮೇಂದ್ರಾದ್ಯಭಿ ವಂದಿತಮ್ ॥ ೭

ಪೂರ್ಣ ಸರ್ವಗುಣೈಕಾರ್ಣಮನಾದ್ಯಂತಂ ಸುರೇಶಿತುಃ ।
ಆನಂದಸ್ಯ ಪದಂ ವಂದೇ ಬ್ರಹ್ಮೇಂದ್ರಾದ್ಯಭಿ ವಂದಿತಮ್ ॥ ೮

ಆನಂದತೀರ್ಥ ಮುನಿನಾ ಹರೇರಾನಂದ ರೂಪಿಣಃ ।
ಕೃತ ಸ್ತೋತ್ರಮಿದಂ ಪಠನ್ನಾನಂದಮಾಪ್ನುಯಾತ್ (ಮಾಪ್ತುಯಾತ್)॥ ೯

॥ ಇತಿ ದ್ವಾದಶಸ್ತೋತ್ರೇ ಏಕಾದಶೋಧ್ಯಾಯಃ ॥

*ಸಕಲ ದೇವತೆಗಳಿಗೆ ಐಸಿರಿಯ ದಾತ*
*ಅವರವರ ಸಾಧನೆಗೆ ವಿಹಿತ ಫಲ ದಾತ*
*ಬ್ರಹ್ಮೇಂದ್ರರೂ ಕೂಡ ಪೂಜಿಸುವ ಪಾದಕ್ಕೆ*
*ವಂದಿಸುವೆ ಮುದ ಕೊಡುವ ಶ್ರೀ ಹರಿಯ ಪಾದಕ್ಕೆ* ೬

*ದೂರವಾಗುವನವನು ನಂಬದ ಮಂದಿಗೆ*
*ಭಕುತ ಮಂದಿಗೆ ತನ್ನ ಸಾಮೀಪ್ಯ ಕರುಣಿಪನು*
*ಬ್ರಹ್ಮೇಂದ್ರರೂ ಕೂಡ ಪೂಜಿಸುವ ಪಾದಕ್ಕೆ*
*ವಂದಿಸುವೆ ಮುದ ಕೊಡುವ ಶ್ರೀ ಹರಿಯ ಪಾದಕ್ಕೆ* ೭

*ನಿರವಧಿಕ, ನಿಶ್ಶೇಷ, ಸರ್ವಗುಣ ಸಂಪನ್ನ*
*ಹುಟ್ಟು ಸಾವುಗಳಿರದ ಸರ್ವ ದೇವೇಶ*
*ಬ್ರಹ್ಮೇಂದ್ರರೂ ಕೂಡ ಪೂಜಿಸುವ ಪಾದಕ್ಕೆ*
*ವಂದಿಸುವೆ ಮುದ ಕೊಡುವ ಶ್ರೀ ಹರಿಯ ಪಾದಕ್ಕೆ* ೮

*ಆನಂದ ತೀರ್ಥರು ರಚಿಸಿರುವ ಈ ಕೃತಿಯು*
*ಸುಖಮಯದ ರೂಪದ ಶ್ರೀ ಹರಿಯ ಸ್ತುತಿಯು*
*ಈ ಸ್ತವನ ಪಠಿಸುವ ಭಕುತ ಜನರೆಲ್ಲ*
*ಪಡೆಯುವರು ಮುಕುತಿಯನು ಹರಿಯ ಕೃಪೆಯಿಂದ* ೯

ಕನ್ನಡ ಪದ್ಯಾನುವಾದದ
ಶ್ರೀದ್ವಾದಶಸ್ತೋತ್ರ ಹನ್ನೊಂದನೇ ಅಧ್ಯಾಯವು ಮುಗಿದುದು

## ದ್ವಾದಶೋಧ್ಯಾಯಃ

ಆನಂದಮುಕುಂದ ಅರವಿಂದನಯನ ।
ಆನಂದತೀರ್ಥಪರಾನಂದವರದ ॥ ೧

ಸುಂದರೀಮಂದಿರ ಗೋವಿಂದ ವಂದೇ ।
ಆನಂದತೀರ್ಥಪರಾನಂದವರದ ॥ ೨

ಚಂದ್ರಸುರೇಂದ್ರಸುವಂದಿತ ವಂದೇ ।
ಆನಂದತೀರ್ಥಪರಾನಂದವರದ ॥ ೩

ಚಂದ್ರಕಮಂದಿರನಂದಕವಂದೇ ।
ಆನಂದತೀರ್ಥಪರಾನಂದವರದ ॥ ೪

ವೃಂದಾರಕವೃಂದಸುವಂದಿತ ವಂದೇ ।
ಆನಂದತೀರ್ಥಪರಾನಂದವರದ ॥ ೫

ಮಂದಾರಸೂನಸುಚರ್ಚಿತ ವಂದೇ ।
ಆನಂದತೀರ್ಥಪರಾನಂದವರದ ॥ ೬

## ಹನ್ನೆರಡನೇ ಅಧ್ಯಾಯ

*ಆನಂದ ಮುಕುಂದ ಅರವಿಂದ ನಯನ*
*ಆನಂದ ತೀರ್ಥ ಪರಾನಂದ ವರದ* ೧

*ವಂದಿಪೆ ಲಕುಮಿಯ ಮಂದಿರ ಪ್ರಭುವೆ*
*ಆನಂದ ತೀರ್ಥ ಪರಾನಂದ ವರದ* ೨

*ವಂದಿಪೆ ಚಂದ್ರಕ ಮಂದಿರ ನಂದಕ*
*ಆನಂದ ತೀರ್ಥ ಪರಾನಂದ ವರದ* ೩

*ವಂದಿಪೆ ವೃಂದಾರಕ ವಂದಿತನೆ*
*ಆನಂದ ತೀರ್ಥ ಪರಾನಂದ ವರದ* ೪

*ವಂದಿಪೆ ಸುರರಿಂ ಕುಸುಮದಿ ಅರ್ಚಿತ*
*ಆನಂದ ತೀರ್ಥ ಪರಾನಂದ ವರದ* ೫

*ವಂದಿಪೆ ಪುಷ್ಪಾಲಂಕೃತ ಗೃಹವಾಸಿತ*
*ಆನಂದ ತೀರ್ಥ ಪರಾನಂದ ವರದ* ೬

ಇಂದಿರಾನಂದಕ ಸುಂದರ ವಂದೇ ।
ಆನಂದತೀರ್ಥಪರಾನಂದವರದ ॥ ೭

ಮಂದಿರಸ್ಯಂದನಸ್ಯಂದಕ ವಂದೇ ।
ಆನಂದತೀರ್ಥಪರಾನಂದವರದ ॥ ೮

ಆನಂದಚಂದ್ರಿಕಾಸ್ಯಂದಕ (ಸ್ಪಂದನ) ವಂದೇ ।
ಆನಂದತೀರ್ಥಪರಾನಂದವರದ ॥ ೯

॥ ಇತಿ ದ್ವಾದಶಸ್ತೋತ್ರೇ ದ್ವಾದಶೋಧ್ಯಾಯಃ ॥

*ವಂದಿಪೆ ಇಂದಿರೆ ಆನಂದ ದಾತ*
*ಆನಂದ ತೀರ್ಥ ಪರಾನಂದ ವರದ* ೭

*ವಂದಿಪೆ ಸೇವಕಗಣ ಮುದದಾತ*
*ಆನಂದ ತೀರ್ಥ ಪರಾನಂದ ವರದ* ೮

*ವಂದಿಪೆ ಆನಂದ ಚಂದ್ರಿಕಾ ಸ್ಪಂದಕ*
*ಆನಂದ ತೀರ್ಥ ಪರಾನಂದ ವರದ* ೯

ಕನ್ನಡ ಪದ್ಯಾನುವಾದದ
ಶ್ರೀದ್ವಾದಶಸ್ತೋತ್ರ ಹನ್ನೆರಡನೇ ಅಧ್ಯಾಯವು ಮುಗಿದುದು

---

**ಅನುವಾದಕನ ನುಡಿ:**

ಮುಕ್ತಾಯವಾಗಿಹುದು ಶ್ರೀಹರಿಯ ದ್ವಾದಶ ಸ್ತೋತ್ರ
ಆನಂದ ತೀರ್ಥ ಯತಿ ರಚಿಸಿರುವ ಈ ಸ್ತವನ
ಕನ್ನಡದಿ ನುಡಿಯುವ ಸೌಭಾಗ್ಯ ಎನಗಾಯ್ತು
ರಕ್ಷಿಸಲಿ ಕರುಣೆಯಲಿ ನರಹರಿಯು ಅನವರತ

# ॥ ವಾಯುಸ್ತುತಿಃ ॥

## ॥ ಶ್ರೀ ನರಸಿಂಹನಖಸ್ತುತಿಃ ॥

ಪಾಂತ್ವಸ್ಮಾನ್ ಪುರುಹೂತವೈರಿಬಲವನ್ಮಾತಂಗಮಾದ್ಯದ್ ಘಟಾ-
ಕುಂಭೋಚ್ಚಾದ್ರಿವಿಪಾಟನಾಧಿಕಪಟುಪ್ರತ್ಯೇಕವಜ್ರಾಯಿತಾಃ ।
ಶ್ರೀಮತ್ಕಂಠೀರವಾಸ್ಯಪ್ರತತಸುನಖರಾ ದಾರಿತಾರಾತಿದೂರ-
ಪ್ರಧ್ವಸ್ತಧ್ವಾಂತಶಾಂತಪ್ರವಿತತಮನಸಾ ಭಾವಿತಾ ಭೂರಿಭಾಗೈಃ ॥ ೧

ಲಕ್ಷ್ಮೀಕಾಂತ ಸಮಂತತೋಽಪಿ ಕಲಯನ್ ನೈವೇಶಿತುಸ್ತೇ ಸಮಂ
ಪಶ್ಯಾಮ್ಯುತ್ತಮವಸ್ತು ದೂರತರತೋಽಪಾಸ್ತಂ ರಸೋ ಯೋಽಷ್ಟಮಃ ।
ಯದ್ರೋಷೋತ್ಕರದಕ್ಷನೇತ್ರಕುಟಿಲಪ್ರಾಂತೋತ್ಥಿತಾಗ್ನಿಸ್ಫುರತ್-
ಖದ್ಯೋತೋಪಮವಿಷ್ಫುಲಿಂಗಭಸಿತಾ ಬ್ರಹ್ಮೇಶಶಕ್ರೋತ್ಕರಾಃ ॥ ೨

---

## ॥ ಶ್ರೀ ವಾಯುಸ್ತುತಿಃ ॥

॥ ಓಮ್ ॥ ಶ್ರೀಮದ್ವಿಷ್ಣ್ವಂಘ್ರಿನಿಷ್ಠಾತಿಗುಣಗುರುತಮಶ್ರೀಮದಾನಂದತೀರ್ಥ -
ತ್ರೈಲೋಕ್ಯಾಚಾರ್ಯಪಾದೋಜ್ಜ್ವಲಜಲಜಲಸತ್ಪಾಂಸವೋಽಸ್ಮಾನ್ ಪುನಂತು ।
ವಾಚಾಂ ಯತ್ರ ಪ್ರಣೇತ್ರೀ ತ್ರಿಭುವನಮಹಿತಾ ಶಾರದಾ ಶಾರದೇಂದು-
ಜ್ಯೋತ್ಸ್ನಾಭದ್ರಸ್ಮಿತಶ್ರೀಧವಲಿತಕಕುಭಾ ಪ್ರೇಮಭಾರಂ ಬಭಾರ ॥ ೧

# ವಾಯುಸ್ತುತಿ – ಕನ್ನಡ ಪದ್ಯಾನುವಾದ

**(ರಚನೆ : ಶ್ರೀ ಇ.ಡಿ. ನರಹರಿಯವರಿಂದ)**

## ॥ ಶ್ರೀ ನರಸಿಂಹನಖಸ್ತುತಿ ॥

*ಪುರುಹೂತ ವೈರಿಗಳ ಕರಿನಿಕರ ಕುಂಭಗಳ
ತಂದು ವಿಧ್ವಂಸಿಸುವ ಹರಿದು ನುಚ್ಚಾಗಿಸುವ
ಸುರಪತಿಯ ಆಯುಧದ ಪರಿಯ ಈ ಉಗುರುಗಳು ।
ವೈರಿಗಳ ತರಿವ, ತಿಮಿರಗಳ ಕಳೆವ
ಹಿರಿಯ ಸಿರಿವಂತರು ಅರಿತು ಆರಾಧಿಸುವ
ನರಹರಿಯ ಉಗುರುಗಳು ಪೊರೆಯಲನವರತ ॥* ೧

*ಕಾಣೆಯಾದೆನು ನಿನಗೆ ಸಾಟಿಯು ಸಿರಿರಮಣ ಹರಿಯೆ
ಎತ್ತೆತ್ತಲರಿಸಿದರೂ ಸೊತ್ತ ಕಾಣೆಸು ನಾನು
ಎಂಟನೆಯ ರಸದಂತೆ ನಂಟು ಗಂಟಾಗಿಹುದು
ಮುನಿಸು ಮಸೆದೆಸೆಯುವ ಕಂಗಳ ಕುಡಿಯಿಂದ
ಸಿಡಿವ ಸಿಡಿಲಿನ ಕಿಡಿಗಳಲಿ ನೋಡಾ ।
ಭಸ್ಮವಾಗಿಹುದಲ್ಲಿ ಬ್ರಹ್ಮ ರುದ್ರೇಂದ್ರ ದೇವತಾ ಗಡಣಗಳು ॥* ೨

---

**<u>ಮಂಗಳಾಚರಣೆ</u>**

*ಹರಿಚರಣ ಸೇವೆಯಲಿ ಆನಂದ ಪೊಂದುವ
ಮೂರ್ಲೋಕದಾಚಾರ್ಯ ಆನಂದ ತೀರ್ಥರ
ಪರಮ ಪಾವನವಾದ ಪಾದ ಪಂಕಜದಲ್ಲಿ ।
ಹೊಳೆವ ಧೂಳಿಗಳೆಮಗೆ ಮಂಗಳವನೀಯಲಿ
ಬೆಳದಿಂಗಳ ಚೆಲುವ ಮೆಲುನಗೆಯ ಹೊಳಪಿಂದ
ಬೆಳಗುವ ಶಾರದೆಯ ಒಲವ ಧೂಳಿಗಳು ಮಂಗಳವನೀಯಲಿ ॥* ೧

ಉತ್ಕಂಠಾಕುಂಠಕೋಲಾಹಲಜವವಿದಿತಾಜಸ್ರಸೇವಾನುವೃದ್ಧ-
ಪ್ರಾಜ್ಞಾತ್ಮಜ್ಞಾನಧೂತಾಂಧತಮಸಸುಮನೋಮೌಲಿರತ್ನಾವಲೀನಾಮ್ ।
ಭಕ್ತ್ಯುದ್ರೇಕಾವಗಾಢಪ್ರಘಟನಸಘಟಾತ್ಕಾರಸಂಘೃಷ್ಯಮಾಣ-
ಪ್ರಾಂತಪ್ರಾಂಗ್ರ್ಯಂಘ್ರಿಪೀಠೋತ್ಥಿತಕನಕರಜಃಪಿಂಜರಾ ರಂಜಿತಾಶಾಃ ॥ ೧

ಜನ್ಮಾಧಿವ್ಯಾಧ್ಯುಪಾಧಿಪ್ರತಿಹತಿವಿರಹಪ್ರಾಪಕಾಣಾಂ ಗುಣಾನಾ-
ಮಗ್ರ್ಯಾಣಾಮರ್ಪಕಾಣಾಂ ಚಿರಮುದಿತಚಿದಾನಂದಸಂದೋಹದಾನಾಮ್ ।
ಏತೇಷಾಮೇಷ ದೋಷಪ್ರಮುಷಿತಮನಸಾಂ ದ್ವೇಷಿಣಾಂ ದೂಷಕಾಣಾಂ
ದೈತ್ಯಾನಾಮಾರ್ತಿಮಂಧೇ ತಮಸಿ ವಿದಧತಾಂ ಸಂಸ್ತವೇ ನಾಸ್ಮಿ ಶಕ್ತಃ ॥ ೩

ಅಸ್ಯಾವಿಷ್ಕರ್ತುಕಾಮಂ ಕಲಿಮಲಕಲುಷೇಽಸ್ಮಿನ್ ಜನೇ ಜ್ಞಾನಮಾರ್ಗಂ
ವಂದ್ಯಂ ಚಂದ್ರೇಂದ್ರರುದ್ರದ್ಯುಮಣಿಫಣಿವಯೋನಾಯಕಾದ್ಯೈರಿಹಾದ್ಯ ।
ಮಧ್ವಾಖ್ಯಂ ಮಂತ್ರಸಿದ್ಧಂ ಕಿಮುತ ಕೃತವತೋ ಮಾರುತಸ್ಯಾವತಾರಂ
ಪಾತಾರಂ ಪಾರಮೇಷ್ಠ್ಯಂ ಪದಮಪವಿಪದಃ ಪ್ರಾಪ್ತುರಾಪನ್ನಪುಂಸಾಮ್ ॥ ೪

ಉದ್ಯದ್ವಿದ್ಯುತ್ಪ್ರಚಂಡಾಂ ನಿಜರುಚಿನಿಕರವ್ಯಾಪ್ತಲೋಕಾವಕಾಶೋ
ಬಿಭ್ರದ್ಭೀಮೋ ಭುಜೇ ಯೋಽಭ್ಯುದಿತದಿನಕರಾಭಾಂಗದಾಢ್ಯಪ್ರಕಾಂಡೇ ।
ವೀರ್ಯೋದ್ಧಾರ್ಯಾಂ ಗದಾಗ್ರ್ಯಾಮಯಮಿಹ ಸುಮತಿಂ ವಾಯುದೇವೋ ವಿದಧ್ಯಾ-
ದಧ್ಯಾತ್ಮಜ್ಞಾನನೇತಾ ಯತಿವರಮಹಿತೋ ಭೂಮಿಭೂಷಾಮಣಿರ್ಮೇ ॥ ೫

*ಗುರುಚರಣ ಸೇವೆಗೆ ಹಾತೊರೆದಾಸುರರು*
*ಕಾತುರಾತರದಿಂದ ಮುನ್ನುಗ್ಗಿ ಬಂದು*
*ಸೇವೆಯ ಸವಿಕಂಡ ದೇವ ವೃಂದವು ಅಂದು*
*ಗುರುಪದದ ಕಾಲ್ಮಣೆಗೆ ಶಿರವ ಘಟ್ಟಿಸಲು*
*ಚದರಿ ಚೆಲ್ಲಾಡಿದವು ಹೊನ್ನಮಣಿ ರನ್ನದ ದಿವ್ಯ ಧೂಳಿಗಳು*
*ಹತ್ತು ದಿಸೆಗಳ ಬಣ್ಣ ಹೊಂಬಣ್ಣವಾಯ್ತು ॥* ೧

*ಹುಟ್ಟಿನಿಂ ಮೊದಲಾಗಿ ಮರಣ ಕಾಲದವರೆಗೆ*
*ಬಾಧಿಪುವುವೆಮ್ಮನ್ನು ಮೈ ಮನದ ಬಾಧೆಗಳು*
*ತತ್ತರಿಸಿ ಹೋಗುವೆವು ಈ ವ್ಯಾಧಿ ಬಾಧೆಗಳು*
*ಉತ್ತಮೋತ್ತಮವಾದ ಈ ದಿವ್ಯ ಧೂಳಿಗಳಿಂದ*
*ತಿಮಿರ ರೂಪದಿ ನರಳಿ ಬಳಲುವ ಅಸುರರನು*
*ಕಾಡುವೀ ಧೂಳಿಗಳ ಬಣ್ಣಿಸುವ ಸಾಮರ್ಥ್ಯ ಎನಗಿಲ್ಲವಯ್ಯ ॥* ೩

*ಬ್ರಹ್ಮಪದ ಪೊಂದಲಿಹ ಹನುಮ ದೇವರು ಇಂದು*
*ಮಧ್ವನಾಮವ ಧರಿಸಿ ಧರೆಗಿಳಿದು ಬಂದಿಹರು*
*ಕಲಿಗಾಲ ಕೊಳೆಯನ್ನು ತೊಳೆಯುವೀ ಅವತಾರ ।*
*ಚಂದ್ರೇಂದ್ರ ರುದ್ರರೂ ಗರುಡಾದಿ ಶೇಷರೂ*
*ಮಣಿದು ನಮಿಸಿದ ಈ ದಿವ್ಯಾವತಾರವನು*
*ಪಾಡಿ ಪೊಗಳುವ ತ್ರಾಣ ಎನಗಿಲ್ಲ ಗುರುವೇ ॥* ೪

*ಕಂಗೊಳಿಸೆ ಮೆರೆದಿರುವ ಬಲ ಭೀಮಸೇನ*
*ಕೈಯಲ್ಲಿ ಮಿಂಚಿರಿರು ಗದೆಯ ಅದ್ಭುತ ಗಡಣ*
*ಉದಯ ರವಿಯಂದದಿ ಥಳಥಳಿಪ ತೋಳ್ಬಂದಿ ।*
*ಆಧ್ಯಾತ್ಮದರಿವಿನ ಹರಿಕಾರನಾಗಿ, ಪೂಜ್ಯ ಯತಿಗಳ ಪೂಜ್ಯ ದೇವತೆಯು ನೀನಾಗಿ*
*ಭೂತಾಯ ಸಿಂಗಾರ ಮುತ್ತಾಗಿ ಬಂದವನೆ*
*ವಾಯುದೇವನೆ ನಮಗೆ ಅರಿವನ್ನು ಕರುಣಿಸೋ ॥* ೫

ಸಂಸಾರೋತ್ತಾಪನಿತ್ಯೋಪಶಮದಸದಯಸ್ನೇಹಹಾಸಾಂಬುಪೂರ–
ಪ್ರೋದ್ಯದ್ವಿದ್ಯಾನವದ್ಯದ್ಯುತಿಮಣಿಕಿರಣಶ್ರೇಣಿಸಂಪೂರಿತಾಶಃ ।
ಶ್ರೀವತ್ಸಾಂಕಾಧಿವಾಸೋಚಿತತರಸರಲಶ್ರೀಮದಾನಂದತೀರ್ಥ–
ಕ್ಷೀರಾಂಭೋಧಿರ್ವಿಭಿಂದ್ಯಾದ್ಭವದನಭಿಮತಂ ಭೂರಿ ಮೇ ಭೂತಿಹೇತುಃ ॥ ೬ ॥

ಮೂರ್ಧನ್ಯೇಷೋಽಂಜಲಿರ್ಮೇ ದೃಢತರಮಿಹ ತೇ ಬಧ್ಯತೇ ಬಂಧಪಾಶ–
ಚ್ಛೇತ್ರೇ ದಾತ್ರೇ ಸುಖಾನಾಂ ಭಜತಿ ಭುವಿ ಭವಿಷ್ಯದ್ವಿಧಾತ್ರೇ ದ್ಯುಭರ್ತ್ರೇ ।
ಅತ್ಯಂತಂ ಸಂತತಂ ತ್ವಂ ಪ್ರದಿಶ ಪದಯುಗೇ ಹಂತ ಸಂತಾಪಭಾಜಾ–
ಮಸ್ಮಾಕಂ ಭಕ್ತಿಮೇಕಾಂ ಭಗವತ ಉತ ತೇ ಮಾಧವಸ್ಯಾಥ ವಾಯೋಃ ॥ ೭ ॥

ಸಾಭ್ರೋಷ್ಣಾಭೀಶುಶುಭ್ರಪ್ರಭಮಭಯ ನಭೋ ಭೂರಿ ಭೂಭೃದ್ವಿಭೂತಿ–
ಭ್ರಾಜಿಷ್ಣುರ್ಭೂರ್ಋಭೂಣಾಂ ಭವನಮಪಿ ವಿಭೋಽಭೇದಿ ಬಭ್ರೇ ಬಭೂವೇ ।
ಯೇನ ಭ್ರೂವಿಭ್ರಮಸ್ತೇ ಭ್ರಮಯತು ಸುಭೃಶಂ ಬಭ್ರುವದ್ದುರ್ಭೃತಾಶಾನ್
ಭ್ರಾಂತಿರ್ಭೇದಾವಭಾಸಸ್ತ್ವಿತಿ ಭಯಮಭಿಭೂರ್ಭೋಕ್ಷ್ಯತೋ ಮಾಯಿಭಿಕ್ಷೂನ್ ॥ ೮ ॥

ಯೇಽಮುಂ ಭಾವಂ ಭಜಂತೇ ಸುರಮುಖಸುಜನಾರಾಧಿತಂ ತೇ ತೃತೀಯಂ
ಭಾಸಂತೇ ಭಾಸುರೈಸ್ತೇ ಸಹಚರಚಲಿತೈಶ್ಚಾಮರೈಶ್ಚಾರುವೇಷಾಃ ।
ವೈಕುಂಠೇ ಕಂಠಲಗ್ನಸ್ಥಿರಶುಚಿವಿಲಸತ್ಕಾಂತಿತಾರುಣ್ಯಲೀಲಾ–
ಲಾವಣ್ಯಾಪೂರ್ಣಕಾಂತಾಕುಚಭರಸುಲಭಾಶ್ಲೇಷಸಮ್ಮೋದಸಾಂದ್ರಾಃ ॥ ೯ ॥

*ಪಾಲ್ಗಡಲ ರೂಪದ ಆನಂದ ತೀರ್ಥರು*
*ಸಿರಿರಮಣ ಶ್ರೀಹರಿಗೆ ಸರಿಯಾದ ನೆಲೆಯುಹುದು*
*ತಿಳಿವೆಂಬ ತಿಳಿಯಾದ ಬೆಳಕ ಮಿಂಚುಗಳನ್ನು ।*
*ಎಲ್ಲೆಲ್ಲು ಹರದಿರುವ ದಿವ್ಯ ಸೊಡಿಲು*
*ಭವದ ಬಂಧಗಳನ್ನು ಕಡಿದಿಕ್ಕುವೀ ಪಾಲ್ಗಡಲು*
*ದೂರ ಮಾಡಲಿ ನಮ್ಮ ದುರಿತರಾಶಿಗಳ ॥* ೬

<u>ಶ್ರೀ ಮೂಲ ವಾಯುಸ್ತುತಿ:</u>

*ಭಾರತೀ ರಮಣನೇ, ಭವಿಷ್ಯ ಬ್ರಹ್ಮನೇ, ಸಂತಸದ ದಾತನೇ*
*ಭುವಿಯಲ್ಲಿ ಭಕ್ತರ ಭವಬಂಧ ಮೋಚಕನೇ*
*ನಿನ್ನ ಶಿರದೊಳು ಎನ್ನ ಆಚಿಜಲಿಯನಿರಿಸುವೆನು ।*
*ನಿನ್ನ ಅಡಿ ಜೋಡಿಯಲಿ ಕರುಣಿಪುದು ಸದ್ಭಕ್ತಿ*
*ಬಳಲಿಹೆವು ನಾವಿಂದು, ಓ ವಾಯುದೇವಾ*
*ಸತತವಾಗಲಿ ನಮ್ಮ ಉತ್ಕಟದ ಭಕ್ತಿ ॥* ೭

*ಭಯವನ್ನು ಗೆಲ್ಲಿದವನೆ ಎಲ್ಲರೊಳು ಇರುವವನೆ*
*ಗಗನ ಭೂಮಿಗಳನ್ನು ಹುಬ್ಬಿನಲಿ ಕುಣಿಸುವನೆ*
*ಸೃಷ್ಠಿ ವೈವಿಧ್ಯವನು ಭ್ರಮೆಯೆನುವ ಬಿಕ್ಕುಗಳು*
*ಮುಳುಗಿ ಮಲಗಿಹರಯ್ಯ ದುಗುಡದ ಕಡಲಿನಲಿ*
*ಮುಂಗುಸಿಗಳಂತಿರುವ ಈ ಚಪಲ ಚಿತ್ತರನು*
*ಮೋಹಗೊಳಿಸಲಿ ನಿನ್ನ ಭ್ರೂ ಲಾಸ್ಯವಿಂದು ॥* ೮

*ಸುಜನ, ಸಗ್ಗಿಗ, ವಂದ್ಯ ಮೂರಾವತಾರವನು*
*ಸೇವಿಸುವ ಸಜ್ಜನರು, ಬೆಳಗುವರು ಸಗ್ಗದಲಿ*
*ಸಹಚರರು ಚಾಮರದಿ ತಂಗಾಳಿ ಎಸೆಯುವರು ।*
*ಕೊರಳಲ್ಲಿ ಇಳಿಬಿದ್ದ ಚೆಲುಕಾಂತಿ ಲಲನೆಯರು*
*ಎರೆದೆಯ ತರುಣಿಯರ ಬಿಗಿ ತೋಳ ಬಂಧನದಿ*
*ಬೀಗುವರು ಸಂತಸದಿ ಸನ್ಮೋದ ಸಾಂದ್ರಾ ॥* ೯

ಆನಂದಾನ್ಮಂದಮಂದಾ ದದತಿ ಹಿ ಮರುತಃ ಕುಂದಮಂದಾರನಂದ್ಯಾ-
ವರ್ತ್ಯಾಮೋದಾನ್ ದಧಾನಾ ಮೃದಪದಮುದಿತೋದ್ಗೀತಕೈಃ ಸುಂದರೀಣಾಮ್ ।
ವೃಂದೈರಾವಂದ್ಯಮುಕ್ತೇಂದ್ವಹಿಮಗುಮದನಾಹೀಂದ್ರದೇವೇಂದ್ರಸೇವ್ಯೇ
ಮೌಕುಂದೇ ಮಂದರೇಽಸ್ಮಿನ್ನವಿರತಮುದಯನ್ಮೋದಿನಾಂ ದೇವದೇವ ॥ ೧೦ ॥

ಉತ್ತಪ್ತಾತ್ಯುತ್ಕಟತ್ವಿಟ್ಪ್ರಕಟಕಟಕಟಧ್ವಾನಸಂಘಟ್ಟನೋದ್ಯ-
ದ್ವಿದ್ಯುದ್ವ್ಯೂಢಸ್ಫುಲಿಂಗಪ್ರಕರವಿಕಿರಣೋತ್ಕ್ವಥಿತೇ ಬಾಧಿತಾಂಗಾನ್ ।
ಉದ್ಗಾಢಂ ಪಾತ್ಯಮಾನಾ ತಮಸಿ ತತ ಇತಃ ಕಿಂಕರೈಃ ಪಂಕಿಲೇ ತೇ
ಪಂಕ್ತಿರ್ಗಾರ್ವ್ಣಾಂ ಗರಿಮ್ಣಾ ಗ್ಲಪಯತಿ ಹಿ ಭವದ್ದ್ವೇಷಿಣೋ ವಿದ್ವದಾದ್ಯ ॥ ೧೧ ॥

ಅಸ್ಮಿನ್ನಸ್ಮದ್ಗುರೂಣಾಂ ಹರಿಚರಣಚಿರಧ್ಯಾನಸನ್ಮಂಗಲಾನಾಂ
ಯುಷ್ಮಾಕಂ ಪಾರ್ಶ್ವಭೂಮಿಂ ಧೃತರಣರಣಿಕಸ್ವರ್ಗಿಸೇವ್ಯಾಂ ಪ್ರಪನ್ನಃ ।
ಯಸ್ತೂದಾಸ್ತೇ ಸ ಆಸ್ತೇಽಧಿಭವಮಸುಲಭಕ್ಲೇಶನಿರ್ಮೋಕಮಸ್ತ-
ಪ್ರಾಯಾನಂದಂ ಕಥಂಚಿನ್ನ ವಸತಿ ಸತತಂ ಪಂಚಕಷ್ಟೇಽತಿಕಷ್ಟೇ ॥ ೧೨ ॥

ಕ್ಷುತ್ಕ್ಷಾಮಾನ್ ರೂಕ್ಷರಕ್ಷೋರದಖರನಖರಕ್ಷುಣ್ಣವಿಕ್ಷೋಭಿತಾಕ್ಷಾ-
ನಾಮಗ್ನಾನಂಧಕೂಪೇ ಕ್ಷುರಮುಖಮುಖರೈಃ ಪಕ್ಷಿಭಿರ್ವಿಕ್ಷತಾಂಗಾನ್ ।
ಪೂಯಾಸೃಙ್ಮೂತ್ರವಿಷ್ಠಾಕೃಮಿಕುಲಕಲಿಲೇ ತತ್ಕ್ಷಣಕ್ಷಿಪ್ತಶಕ್ತ್ಯಾ-
ದ್ಯಸ್ತ್ರವ್ರಾತಾರ್ದಿತಾಂಸ್ತ್ವದ್ದ್ವಿಷ ಉಪಜಿಹತೇ ವಜ್ರಕಲ್ಪಾ ಜಲೂಕಾಃ ॥ ೧೩ ॥

*ಮುಕ್ತಿ ಮಂದಿರದೊಡೆಯ, ಓ ಮುಕುಂದ*
*ಆನಂದ ಮಂದಿರದಿ ಕುಂದ ಮಂದಾರ ನಂದಿ ಕುಸುಮಗಳಾ*
*ಮೆಲಮೆಲನೆ ಬೀಸುವಾ ಕಂಪಿನಾ ತಂಗಾಳಿ ।*
*ರವಿ, ಚಂದ್ರ, ಇಂದ್ರರು, ಶೇಷ, ಮನ್ಮಥರು*
*ಹಿಗ್ಗಿ ಕುಣಿದಾಡುವ ಬೆಡಗಿಯರ ಸುರಗಾನ*
*ಸತತ ಚಿಮ್ಮುವ ಸೊಗವನುಣ್ಣುವ ಈ ಮುಕ್ತಿ ಮಂದಿರ ॥* ೧೦

*ನರಕವೆಂಬುದು ಒಂದು ಕತ್ತಲಿನ ಕೊಂಪೆ*
*ದೇವ ಕಿಂಕರರೆಸೆವ ಕಲ್ಲು ಕೆಂಡದ ಒಜ್ಜೆ ।*
*ಕಂಗೆಡೆಸಿ ಬೀಳಿಪುದು ನಿನ್ನ ನಿಂದಕರನ್ನು*
*ಕಟಕಟನೆ ಘಟ್ಟಿಪುದು ಬೆಂಕಿಯ ಬಂಡೆಗಳು*
*ಕಣ್ಮುಂದೆ ಉರಿದುರಿದು ಸಿಡಿವ ಕಿಡಿಗಳ ಪಡೆಯು*
*ಬೆಂದ ಕಾದಳದಲ್ಲಿ ಸುಟ್ಟು ಕರಿಕಾಗುವರು ಪಾಪಿ ಜನರು ॥* ೧೧

*ಹರಿಚರಣ ಧ್ಯಾನದಲಿ ಮಂಗಳವ ಪೊಂದಿದಿರಿ*
*ಓ ಗುರುವೇ ಹಾತೊರೆವರಾ ಸುರರು ಸನಿಹಕ್ಕೆ ಬರಲು*
*ನಿಮ್ಮ ಸಾನ್ನಿಧ್ಯವನು ಬಳಸಿಕೊಳ್ಳದ ಭ್ರಷ್ಟ*
*ಬಾಳಕೂಪದಿ ಬಿದ್ದು ತೊಳಲುವನು ನರಳಿ*
*ಸಂತಸವೆ ಇಲ್ಲದ ಸಂಸಾರದಲಿ ಬೆಂದು*
*ಹೇಗೆ ಬೀಳದೆಯೆ ಉಳಿದಾನು ದುಃಖಮಯ ನರಕದಲಿ ॥* ೧೨

*ಮಲ-ಮೂತ್ರ, ಕ್ರಿಮಿ-ಕೀಟ, ಕೀವು-ನೆತ್ತರ ಕೂಪದಲಿ*
*ಹಸಿವೆ ತಾಪದಲಿ ಬೆಂದ ನಿನ್ನ ನಿಂದಕರು*
*ರಕ್ಕಸರ ನಖದಂಷ್ಟ್ರ ದಾಹಿತಿಯ ಕಂಗಳು*
*ಹಕ್ಕಿಗಳು ಕೊಕ್ಕಿಂದ ಕುಕ್ಕಿರುವ ಮೈಯುವರು*
*ಶಕ್ತಿಯಾಯುಧದಿಂದ ನುಗ್ಗಾದ ಅಂಗಗಳು*
*ವಜ್ರದೇಹದ ಜಿಗಣೆ ಹೀರಿದಾ ದೇಹದವರು ॥* ೧೩

ಮಾತರ್ಮೇ ಮಾತರಿಶ್ವನ್ ಪಿತರತುಲಗುರೋ ಭ್ರಾತರಿಷ್ಟಾಪ್ತಬಂಧೋ
ಸ್ವಾಮಿನ್ ಸರ್ವಾಂತರಾತ್ಮನ್ನಜರ ಜರಯಿತರ್ಜನ್ಮಮೃತ್ಯಾಮಯಾನಾಮ್ ।
ಗೋವಿಂದೇ ದೇಹಿ ಭಕ್ತಿಂ ಭವತಿ ಚ ಭಗವನ್ನೂರ್ಜಿತಾಂ ನಿರ್ನಿಮಿತ್ತಾಂ
ನಿರ್ವ್ಯಾಜಾಂ ನಿಶ್ಚಲಾಂ ಸದ್ಗುಣಗಣಬೃಹತೀಂ ಶಾಶ್ವತೀಮಾಶು ದೇವ ॥ ೧೪ ॥

ವಿಷ್ಣೋರತ್ಯುತ್ತಮತ್ವಾದಖಿಲಗುಣಗಣೈಸ್ತತ್ರ ಭಕ್ತಿಂ ಗರಿಷ್ಠಾ-
ಮಾಶ್ಲಿಷ್ಟೇ ಶ್ರೀಧರಾಭ್ಯಾಮಮುಮಥ ಪರಿವಾರಾತ್ಮನಾ ಸೇವಕೇಷು ।
ಯಃ ಸಂಧತ್ತೇ ವಿರಿಂಚಶ್ವಸನವಿಹಗಪಾನಂತರುದ್ರೇಂದ್ರಪೂರ್ವೇ-
ಷ್ವಾಧ್ಯಾಯಂಸ್ತಾರತಮ್ಯಂ ಸ್ಫುಟಮವತಿ ಸದಾ ವಾಯುರಸ್ಮದ್ಗುರುಸ್ತಮ್ ॥ ೧೫

ತತ್ತ್ವಜ್ಞಾನ್ ಮುಕ್ತಿಭಾಜಃ ಸುಖಯಸಿ ಹಿ ಗುರೋ ಯೋಗ್ಯತಾತಾರತಮ್ಯಾ-
ದಾಧತ್ಸೇ ಮಿಶ್ರಬುದ್ಧೀಂಸ್ತ್ರಿದಿವನಿರಯಭೂಗೋಚರಾನ್ನಿತ್ಯಬದ್ಧಾನ್ ।
ತಾಮಿಸ್ರಾಂಧಾದಿಕಾಖ್ಯೇ ತಮಸಿ ಸುಬಹುಲಂ ದುಃಖಯಸ್ಯನ್ಯಥಾಜ್ಞಾನ್
ವಿಷ್ಣೋರಾಜ್ಞಾಭಿರಿತ್ಥಂ ಶ್ರುತಿಶತಮಿತಿಹಾಸಾದಿ ಚಾಽಕರ್ಣಯಾಮಃ ॥ ೧೬

ವಂದೇಽಹಂ ತಂ ಹನೂಮಾನಿತಿ ಮಹಿತಮಹಾಪೌರುಷೋ ಬಾಹುಶಾಲೀ
ಖ್ಯಾತಸ್ತೇಽಗ್ರ್ಯೋಽವತಾರಃ ಸಹಿತ ಇಹ ಬಹುಬ್ರಹ್ಮಚರ್ಯಾದಿಧರ್ಮೈಃ ।
ಸಸ್ನೇಹಾನಾಂ ಸಹಸ್ವಾನಹರಹರಹಿತಂ ನಿರ್ದಹನ್ ದೇಹಭಾಜಾ-
ಮಂಹೋಮೋಹಾಪಹೋ ಯಃ ಸ್ಪೃಹಯತಿ ಮಹತೀಂ ಭಕ್ತಿಮದ್ಯಾಪಿ ರಾಮೇ ॥ ೧೭

*ನೀನೆನ್ನ ತಾಯ್ತಂದೆ, ನೀನೆ ಗುರು, ಹಿರಿಯಣ್ಣ ।*
*ನೀನೇ ಬಾಳಿನ ಬಂಧು, ನೀನೆನ್ನ ದಣಿಯು ।*
*ಎಲ್ಲರಲ್ಲಿರುವವನೆ, ಮುಪ್ಪಿಲ್ಲದವನೆ ।*
*ನಿನ್ನಲಲ್ಲದೆ ದೇವ, ಗೋವಿಂದನಲ್ಲಿಯೂ*
*ನೀದೆಮಗೆ ಕಾಮನೆಯ ಸೋಂಕಿರದ ಭಕ್ತಿ*
*ನೀಡು ಸದ್ಗುಣದಿಂದ ಪುಟಗೊಂಡ ಭಕ್ತಿ ॥* ೧೪

*ಶ್ರೀರಮಣ, ಭೂರಮಣ ನಾರಾಯಣ*
*ಸರ್ವರೊಳು ಉತ್ತಮ ಸರ್ವಗುಣ ಸಂಪನ್ನ*
*ಅದರಿಂದ ಅವನಲ್ಲಿ ಮಿಗಿಲಾದ ಭಕ್ತಿ*
*ಬ್ರಹ್ಮ ಮಾರುತರೆಲ್ಲ ಅವನ ಪರಿವಾರ*
*ತಾರತಮ್ಯವ ನೆನೆದು ಅವರಲ್ಲಿ ಭಕ್ತಿ*
*ಈ ಪರಿಯ ಸಾಧಕನ ಪೊರೆವನು ಗುರು ಮುಖ್ಯ ಪ್ರಾಣ ॥* ೧೫

*ಹರಿಯ ಆಣತಿಯನ್ನು ಪಡೆದಿರುವ ಗುರುವೇ*
*ಯೋಗ್ಯತೆಯ ಅಳತೆಗಳಿಗನುಗುಣದಿ ನೀನು*
*ಮುಕ್ತಿಯನು ಕರುಣಿಸುವೆ ನಿಜವನರಿತವರಿಗೆ*
*ಮಿಶ್ರಮತಿಗಳ ನತಿಸುವೆ ಬುವಿ, ನಾಕ, ನರಕದೊಳು*
*ತಾಮಿಸ್ರ ಲೋಕದಲಿ ನರಳಿಸುವೆ ಅಜ್ಞಾನ ಪಥದಲ್ಲಿ ನಡೆಯುವವರನ್ನು*
*ಸಾರುವುವು ನೂರಾರು ವೇದಾಂಗ ಇತಿಹಾಸ ॥* ೧೬

## ವಾಯುವಿನ ಪ್ರಥಮಾವತಾರ – ಹನುಮಂತನ ಸ್ತುತಿ

*ಶಿರಬಾಗಿ ಮಣಿಯುವೆನು, ತುಂಬು ತೋಳ್ಬಲದವನೆ*
*ಹನುಮನೆಂಬುವ ಖ್ಯಾತಿ ಮೊದಲ ಅವತಾರ*
*ಬ್ರಹ್ಮಚರ್ಯದಿ ಮೆರೆವ, ಸೋಲನರಿಯದ ಧೀರ*
*ಸ್ನೇಹಿಗಳ ಕಷ್ಟವನ್ನು ಸುಟ್ಟಿತ್ತ ವೀರ*
*ದುರಿತ ಮಾಹೆಯುಗಳನ್ನು ದೂರ ಮಾಡುವ ಶೂರ*
*ರಾಮನೊಳು ಭಕ್ತಿಯನು ಬಯಸಿ ನೆಲಸಿದ ವೀರ ॥* ೧೭

ಪ್ರಾಕ್ ಪಂಚಾಶತ್ಸಹಸ್ರೈರ್ವ್ಯವಹಿತಮಮಿತಂ ಯೋಜನೈಃ ಪರ್ವತಂ ತ್ವಂ
ಯಾವತ್ಸಂಜೀವನಾದ್ಯೌಷಧನಿಧಿಮಧಿಕಪ್ರಾಣ ಲಂಕಾಮನೈಷೀಃ ।
ಅದ್ರಾಕ್ಷೀದುತ್ಪತಂತಂ ತತ ಉತ ಗಿರಿಮುತ್ಪಾಟಯಂತಂ ಗೃಹೀತ್ವಾ
ಯಾಂತಂ ಖೇ ರಾಘವಾಂಘ್ರೌ ಪ್ರಣತಮಪಿ ತದೈಕಕ್ಷಣೇ ತ್ವಾಂ ಹಿ ಲೋಕಃ ॥ ೧೮

ಕ್ಷಿಪ್ತಃ ಪಶ್ಚಾತ್ಸಲೀಲಂ ಶತಮತುಲಮತೇ ಯೋಜನಾನಾಂ ಸ ಉಚ್ಚ-
ಸ್ತಾವದ್ವಿಸ್ತಾರವಾಂಶ್ಚಾಪ್ಯುಪಲಲವ ಇವ ವ್ಯಗ್ರಬುದ್ಧ್ಯಾ ತ್ವಯಾಽತಃ ।
ಸ್ವಸ್ವಸ್ಥಾನಸ್ಥಿತಾತಿಸ್ಥಿರಶಕಲಶಿಲಾಜಾಲಸಂಶ್ಲೇಷನಷ್ಟ-
ಚ್ಛೇದಾಂಕಃ ಪ್ರಾಗಿವಾಭೂತ್ ಕಪಿವರವಪುಷಸ್ತೇ ನಮಃ ಕೌಶಲಾಯ ॥ ೧೯

ದೃಷ್ಟ್ವಾ ದುಷ್ಟಾಧಿಪೋರಃ ಸ್ಫುಟಿತಕನಕಸದ್ವರ್ಮ ಘೃಷ್ಟಾಸ್ಥಿಕೂಟಂ
ನಿಷ್ಪಿಷ್ಟಂ ಹಾಟಕಾದ್ರಿಪ್ರಕಟತಟತಟಾಕಾತಿಶಂಕೋ ಜನೋಽಭೂತ್ ।
ಯೇನಾಜೌ ರಾವಣಾರಿಪ್ರಿಯನಟನಪಟುರ್ಮುಷ್ಟಿರಿಷ್ಟಂ ಪ್ರದೇಷ್ಟುಂ
ಕಿಂ ನೇಷ್ಟೇ ಮೇ ಸ ತೇಽಷ್ಟಾಪದಕಟಕತಟಿತ್ಕೋಟಿಭಾಮೃಷ್ಟಕಾಷ್ಠಃ ॥ ೨೦

ದೇವ್ಯಾದೇಶಪ್ರಣೀತಿ ದ್ರುಹಿಣಹರವರಾವಧ್ಯರಕ್ಷೋವಿಘಾತಾ-
ದ್ಯಾಸೇವೋದ್ಯದ್ದಯಾರ್ದ್ರಃ ಸಹಭುಜಮಕರೋದ್ರಾಮನಾಮಾ ಮುಕುಂದಃ।
ದುಷ್ಪ್ರಾಪೇ ಪಾರಮೇಷ್ಠ್ಯೇ ಕರತಲಮತುಲಂ ಮೂರ್ಧ್ನಿ ವಿನ್ಯಸ್ಯ ಧನ್ಯಂ
ತನ್ವನ್ ಭೂಯಃ ಪ್ರಭೂತಪ್ರಣಯವಿಕಸಿತಾಬ್ಜೇಕ್ಷಣಸ್ತ್ವೇಕ್ಷಮಾಣಃ ॥ ೨೧

*ಅರ್ಧಶತ ಸಾವಿರ ಯೋಜನದ ದೂರದಿಂ*
*ತಂದಿಟ್ಟ ಲಂಕೆಯೊಳು ಮೂಲಿಕೆಯ ಹಿರಿಬೆಟ್ಟ*
*ಗಗನದೆತ್ತರ ಮೀರಿ ಆ ನಿನ್ನ ಜಿಗಿತ ।*
*ಬೆಟ್ಟವನು ಕಿತ್ತಿಟ್ಟು, ಕಿತ್ತು ಕೈಯಲಿ ಪೊತ್ತು*
*ಶ್ರೀರಾಮ ಪಾದಕ್ಕೆ ಎರಗಿ ಬೀಳುವುದನ್ನು*
*ಜನ ನೋಡಿ ನಲಿದರು ನಿನ್ನ ಸಾಹಸವನ್ನು ॥* ೧೮

*ನೂರು ಯೋಜನದೆತ್ತರ, ಬಿತ್ತರದ ಬೆಟ್ಟವನು*
*ಕಲ್ಲು ಚೂರಿನ ತೆರದಿ, ನಿರ್ಲಕ್ಷ್ಯದಲಿ ಎಸೆದೆ*
*ಎಂತಹ ಕೌಶಲ್ಯ ಎಂಥದೀ ಅದ್ಭುತವು*
*ಸ್ವಸ್ಥಾನದಲಿ ಮತ್ತೆ ಕುಳಿತಿತಾ ಬೆಟ್ಟ*
*ಕಿತ್ತ ಗುರುತಿನ ಕುರುಹು ಇಂತಷ್ಟು ಇರದಂತೆ*
*ತಲೆಬಾಗಿ ವಂದಿಸುವೆ ಹಿರಿಯ ಕಪಿರೂಪನೇ ॥* ೧೯

*ದುಷ್ಟದೊರೆ ರಾವಣನ ಎದೆಗೂಡ ಹಂದರ*
*ಮುರಿದು ಹೋಯಿತು ನಿನ್ನ ಬಲವಾದ ಗುದ್ದಿನಿಂದ*
*ಹರಿದು ಹೋಯಿತು ಅವನ ಬಿನ್ನದೆದೆಗಟ್ಟು*
*ಹೊನ್ನಗುಡ್ಡದ ಬುಡದ ಕೆರೆಯೆಂಬ ಭ್ರಮೆಯಾಯ್ತು*
*ರಾಘವನ ಮೆಚ್ಚುಗೆಯ ಕೋಟಿ ಮಿಂಚಿನ ಮುಷ್ಠಿ*
*ನೀಗಲಾರದೆ ಎನ್ನ ಮನದ ಬಯಕೆಯನು? ॥* ೨೦

*ಶ್ರೀರಾಮ ಸಂದೇಶ ವೈದೇವಿಗರುಹಿದೆ*
*ಬ್ರಹ್ಮ ರುದ್ರರ ವರದಿಂದ ರಕ್ಕಸರ ಕೊಂದೆ*
*ನಿನ್ನ ಸೇವೆಯ ಮೆಚ್ಚಿ ರಾಮ ರೂಪದ ಹರಿಯು*
*ದುರ್ಲಭದ ಬ್ರಹ್ಮಪದ ಸಹಭೋಗ ನೀಡಿದನು*
*ಕರತಲವ ನಿನ್ನೆಯೂ ಶಿರದಲ್ಲಿ ಇರಿಸಿ*
*ದಿಟ್ಟಿಸಿದ  ಅಕ್ಕರೆಯ ಪದ್ಮಾಕ್ಷದಿಂದ ॥* ೨೧

ಜಘ್ನೇ ನಿಘ್ನೇನ ವಿಘ್ನೋ ಬಹುಲಬಲಬಕಧ್ವಂಸನಾದ್ಯೇನ ಶೋಚ–
ದ್ವಿಪ್ರಾನುಕ್ರೋಶಪಾಶೈರಸುವಿಧೃತಿಸುಖಸ್ಯೈಕಚಕ್ರಾಜನಾನಾಮ್ ।
ತಸ್ಮೈ ತೇ ದೇವ ಕುರ್ಮಃ ಕುರುಕುಲಪತಯೇ ಕರ್ಮಣಾ ಚ ಪ್ರಣಾಮಾನ್
ಕಿರ್ಮೀರಂ ದುರ್ಮತೀನಾಂ ಪ್ರಥಮಮಥ ಚ ಯೋ ನರ್ಮಣಾ ನಿರ್ಮಮಾಥ ॥ ೨೨

ನಿರ್ಮೃದ್ನನ್ನತ್ಯಯತ್ನಂ ವಿಜರವರ ಜರಾಸಂಧಕಾಯಾಸ್ಥಿಸಂಧೀ–
ನ್ಯುದ್ಧೇ ತ್ವಂ ಸ್ವಧ್ವರೇ ವಾ ಪಶುಮಿವ ದಮಯನ್ ವಿಷ್ಣುಪಕ್ಷದ್ವಿಡೀಶಮ್ ।
ಯಾವತ್ ಪ್ರತ್ಯಕ್ಷಭೂತಂ ನಿಖಿಲಮಖಭುಜಂ ತರ್ಪಯಾಮಾಸಿಥಾಸೌ
ತಾವತ್ಯಾಽಽಯೋಜಿ ತೃಪ್ತ್ಯಾ ಕಿಮು ವದ ಭಗವನ್ ರಾಜಸೂಯಾಶ್ವಮೇಧೇ ॥ ೨೩

ಕ್ಷ್ವೇಲಾಕ್ಷೀಣಾಟ್ಟಹಾಸಂ ತವ ರಣಮರಿಹನ್ನುದ್ಗದೋದ್ದಾಮಬಾಹೋ–
ರ್ಬಹ್ವಕ್ಷೌಹಿಣ್ಯನೀಕಕ್ಷಪಣಸುನಿಪುಣಂ ಯಸ್ಯ ಸರ್ವೋತ್ತಮಸ್ಯ ।
ಶುಶ್ರೂಷಾರ್ಥಂ ಚಕರ್ಥ ಸ್ವಯಮಯಮಥ ಸಂವಕ್ತುಮಾನಂದತೀರ್ಥ–
ಶ್ರೀಮನ್ನಾಮನ್ ಸಮರ್ಥಸ್ತ್ವಮಪಿ ಹಿ ಯುವಯೋಃ ಪಾದಪದ್ಮಂ ಪ್ರಪದ್ಯೇ ॥ ೨೪

ದ್ರುಹ್ಯಂತೀಂ ಹೃದ್ದ್ರುಹಂ ಮಾಂ ದ್ರುತಮನಿಲಬಲಾದ್ದ್ರಾವಯಂತೀಮವಿದ್ಯಾ–
ನಿದ್ರಾಂ ವಿದ್ರಾವ್ಯ ಸದ್ಯೋ ರಚನಪಟುಮಥಾಽಽಪಾದ್ಯ ವಿದ್ಯಾಸಮುದ್ರ ।
ವಾಗ್ದೇವೀ ಸಾ ಸುವಿದ್ಯಾದ್ರವಿಣದ ವಿದಿತಾ ದ್ರೌಪದೀ ರುದ್ರಪತ್ನ್ಯಾ–
ದ್ಯುದ್ರಿಕ್ತಾ ದ್ರಾಗಭದ್ರಾದ್ರಹಯತು ದಯಿತಾ ಪೂರ್ವಭೀಮಾಽಜ್ಞಯಾ ತೇ ॥ ೨೫

**<u>ಶ್ರೀ ವಾಯು ದೇವರ ದ್ವಿತೀಯ ಅವತಾರವಾದ ಭೀಮಸೇನರ ಸ್ತುತಿ:</u>**

*ಬ್ರಾಹ್ಮಣನ ಮೇಲೆ ನೀನು ಕರುಣೆಯನು ತೋರಿ*
*ಬಲಶಾಲಿ ಬಕನನ್ನು ತೃಣದಂತೆ ಕೊಂದೆ*
*ಏಕ ಚಕ್ರದ ಜನರ ಬಾಳ ಸುಖದಾತಂಕ*
*ಕ್ಷಣದಲ್ಲಿ ಪರಿಹರಿಸಿ ವೈಭವದಿ ಮೆರೆದೆ*
*ದುರ್ಮತಿ ಕಿರ್ಮೀರನನಾಡುತ್ತ ಕೆಡವಿದೆ*
*ಮಣಿಯುವೆನು ವೈಚೆಲ್ಲಿ ಕುರುಕುಲದ ದೊರೆಯೆ ॥* ೨೨

*ಹರಿಭಕ್ತಿ ದೂಷಕರ ನಾಯಕ ಜರಾಸಂಧ*
*ಅವನ ಮೈ ಮೂಳೆಗಳ ಸಲಿಲದಿಂ ಮುರಿದೆ*
*ಯಜ್ಞ ಪಶುವಿನ ತೆರದಿ ಕಾಳಗದಿ ಕೊಂಬೆ*
*ತೃಪ್ತಿಗೊಳಿಸಿದೆ ಎದುರಿದ್ದ ಯಜ್ಞ ಭಕ್ತರನು*
*ರಾಜಸೂಯಶ್ವಮೇಧದ ಯಾಗಾದಿಗಳಲಿ*
*ಹರಿಯು ಪಡೆದನೆ ಹೇಳು ಅಂಥ ಸಂತೃಪ್ತಿ? ॥* ೨೩

*ಹಗೆಗಳನ್ನು ಬಡಿದಟ್ಟಿದಾನಂದ ತೀರ್ಥರೆ ನೀನು*
*ಗದೆಯ ಹಿಡಿದೆತ್ತಿದ ಬೀಸು ತೋಳಿನ ಯುದ್ಧ*
*ಸಿಂಹಗರ್ಜನೆ ಸಿಡಿದ ಅಟ್ಟಹಾಸದ ಯುದ್ಧ*
*ಹಲವು ಅಕ್ಷೋಹಿಣಿಯ ಸದೆಬಡಿದ ಯುದ್ಧ*
*ಆವ ಹರಿ ಸೇವೆಯೊಳು ಕಾಗಳವ ಗೆಲಿದೆಯೋ*
*ಅದನ ಬಣ್ಣಿಸಲು ನೀವೀರ್ವರೇ ಶಕ್ತರು ॥* ೨೪

*ಓ ಜ್ಞಾನ ಸಾಗರನೆ, ಭೀಮರೂಪದ ವಾಯುದೇವನೆ*
*ರುದ್ರ ಪತ್ನಿಯ ಮೀರಿ ನಿಂದಿರುವ ನಿನ್ನ ಸತಿ*
*ವಾಗ್ದೇವಿಯೆನಿಸಿದಾ ದ್ರೌಪದಿಯು ಆಕೆ*
*ಆಶು ಕವನದ ಪ್ರತಿಭೆ ಎಮ್ಮದಾಗಿಸಲಿ*
*ನಿನ್ನ ಆಣತಿಯಿಂದ ಅಳಿಸಲಜ್ಞಾನ ನಿದ್ರೆಯನು*
*ಬಿಡುಗಡೆಯನೀಯಲಿ, ಎಲ್ಲ ಕೆಡಕುಗಳಿಂದ ॥* ೨೫

ಯಾಭ್ಯಾಂ ಶುಶ್ರೂಷುರಾಸೀಃ ಕುರುಕುಲಜನನೇ ಕ್ಷತ್ರವಿಪ್ರೋದಿತಾಭ್ಯಾಂ
ಬ್ರಹ್ಮಭ್ಯಾಂ ಬೃಂಹಿತಾಭ್ಯಾಂ ಚಿತಿಸುಖವಪುಷಾ ಕೃಷ್ಣನಾಮಾಸ್ಪದಾಭ್ಯಾಮ್ ।
ನಿರ್ಭೇದಾಭ್ಯಾಂ ವಿಶೇಷಾದ್ದ್ವಿವಚನವಿಷಯಾಭ್ಯಾಮುಭಾಭ್ಯಾಮಮೂಭ್ಯಾಂ
ತುಭ್ಯಂ ಚ ಕ್ಷೇಮದೇಭ್ಯಃ ಸರಸಿಜವಿಲಸಲ್ಲೋಚನೇಭ್ಯೋ ನಮೋಽಸ್ತು ॥ ೨೬

ಗಚ್ಛನ್ ಸೌಗಂಧಿಕಾರ್ಥಂ ಪಥಿ ಸ ಹನುಮತಃ ಪುಚ್ಛಮಚ್ಛಸ್ಯ ಭೀಮಃ
ಪ್ರೋದ್ಧರ್ತುಂ ನಾಶಕತ್ಸ ತ್ವಮುಮುರುವಪುಷಾ ಭೀಷಯಾಮಾಸ ಚೇತಿ ।
ಪೂರ್ಣಜ್ಞಾನೌಜಸೋಸ್ತೇ ಗುರುತಮ ವಪುಷೋಃ ಶ್ರೀಮದಾನಂದತೀರ್ಥ
ಕ್ರೀಡಾಮಾತ್ರಂ ತದೇತತ್ ಪ್ರಮದದ ಸುಧಿಯಾಂ ಮೋಹಕ ದ್ವೇಷಭಾಜಾಮ್ ॥ ೨೭

ಬಹ್ವೀಃ ಕೋಟೀರಟೀಕಃ ಕುಟಿಲಕಟುಮತೀನುತ್ಕಟಾಟೋಪಕೋಪಾನ್
ದ್ರಾಕ್ ಚ ತ್ವಂ ಸತ್ವರತ್ವಾಚ್ಛರಣದ ಗದಯಾ ಪೋಥಯಾಮಾಸಿಥಾರೀನ್ ।
ಉನ್ಮಥ್ಯಾತಥ್ಯಮಿಥ್ಯಾತ್ವವಚನವಚನಾನುತ್ಪಥಸ್ಥಾಂಸ್ತಥಾಽನ್ಯಾ-
ನ್ಪ್ರಾಯಚ್ಛಃ ಸ್ವಪ್ರಿಯಾಯೈ ಪ್ರಿಯತಮಕುಸುಮಂ ಪ್ರಾಣ ತಸ್ಮೈ ನಮಸ್ತೇ ॥ ೨೮

ದೇಹಾದುತ್ಕ್ರಾಮಿತಾನಾಮಧಿಪತಿರಸತಾಮಕ್ರಮಾದ್ವಕ್ರಬುದ್ಧಿಃ
ಕ್ರುದ್ಧಃ ಕ್ರೋಧೈಕವಶ್ಯಃ ಕೃಮಿರಿವ ಮಣಿಮಾನ್ ದುಷ್ಕೃತೀ ನಿಷ್ಕ್ರಿಯಾರ್ಥಮ್ ।
ಚಕ್ರೇ ಭೂಚಕ್ರಮೇತ್ಯ ಕ್ರಕಚಮಿವ ಸತಾಂ ಚೇತಸಃ ಕಷ್ಟಶಾಸ್ತ್ರಂ
ದುಸ್ತರ್ಕಂ ಚಕ್ರಪಾಣೇರ್ಗುಣಗಣವಿರಹಂ ಜೀವತಾಂ ಚಾಧಿಕೃತ್ಯ ॥ ೨೯ ॥

ಕುರುವಂಶದಲಿ ನೀನು ಜನಿಸಿ ಬಂದಾಗ
ಅವಳಿಗಳ ಸೇವಿಸಿದೆ, ಬ್ರಹ್ಮ ಸ್ವರೂಪನು
ಕೃಷ್ಣನಾಮದ ದ್ವಯರು ನಿರ್ಭೇದದವಳಿಗಳು
ಆನಂದ – ಜ್ಞಾನಗಳೆ ಮೈವೆತ್ತಿ ಬಂದವರು
ವ್ಯಾವಹಾರಿಕವಾಗಿ ಎರಡಾಗಿ ಉಳಿದವರು
ಶರಣು ಈ ದ್ವಯರಿಗೆ, ಶರಣು ನಿನಗೆ, ಒಳಿತನ ದಾತರಿಗೆ ॥ ೨೬

ಸೌಗಂಧಿಕಾವನ್ನು ತರಲು ತೆರಳಿದ ಭೀಮ
ಎತ್ತಲಾಗದೆ ಹೋದ ಹನುಮನ ಪುಚ್ಛವನು
ಅವನೋ ಬೆದರಿಸಿದ ಮುಗಿಲೆತ್ತರಕೆ ಬೆಳೆದು
ಆಟವದು ಅಲ್ಲವೆ ನಿಮ್ಮೆರಡು ರೂಪುಗಳು
ಜ್ಞಾನ ಬಲ ರೂಪಗಳ ಪೂರ್ಣ ಸ್ವರೂಪ
ಎಮ್ಮೆ ಮುದಗೊಳಿಸಿದ ಆನಂದ ತೀರ್ಥರೇ ನೀಡಿದಿರಿ ಗೊಂದಲವ ನಿಂದಕರಿಗೆ ॥ ೨೭

ಓ ಮುಖ್ಯಪ್ರಾಣನೇ, ಎಮಗೆ ನೆಲೆಯಾದ ನಿಮಗೆಮ್ಮ ನಮನ
ನಿನ್ನ ಎದುರಿಸಿದವರು ಕೋಟಿ ಕೋಟಿ
ಕ್ರೂರಮತಿ, ಕುಟಿಲತೆಯು, ಕೊಂಕುತನದವರು
ಗದೆಯಿಂದ ಸದೆಬೊಡೆದೆ ಒಡನೆ ಅವರನ್ನು
ಮಿಥ್ಯಲೋಕದ ಭ್ರಮೆಯ ಅಡ್ಡ ದಾರಿಗರನ್ನು
ಪ್ರಿಯತಮಗೆ ತಂದಿತ್ತೆ ಪ್ರೇಮ ಕುಸುಮವನ್ನು ॥ ೨೮

## ವಾಯುದೇವರ ತೃತೀಯಾವತಾರ ಶ್ರೀ ಮಧ್ವಾಚಾರ್ಯರ ಸ್ತುತಿ:

ಅಸುರ ನಾಯಕ ದುಷ್ಟ ಮಣಿವಂತನಂದು
ಹರಿಭಕ್ತ ಜನರಿಗೆ ಗರಗಸದ ಪರಿಯಲ್ಲಿ
ವ್ಯಾಕುಲವ ನೀಡುವ ಶಾಸ್ತ್ರಗಳ ರಚಿಸಿದ
ಸಾರಿದಾ ದುರ್ಮತಿಯು ಜೀವನೇ ಭಗವಂತ । ಆತ ನಿರ್ಗುಣನೆಂದು ।
ಕ್ರೋಧ ಪರವಶ ಕುಟಿಲನೀತನು ಅಸುರ ವೃಂದದ ನಾಯಕ
ಮೃತ್ಯು ನೀಡಿದ ಕರೆಗೆ ಸಂಗಾತಿಗಳ ಕೂಡೆ ಓಗೊಟ್ಟನವನು ॥ ೨೯

ತದ್ದುಷ್ಪ್ರೇಕ್ಷಾನುಸಾರಾತ್ಕತಿಪಯಕುನರೈರಾದೃತೋಽನ್ಯೈರ್ವಿಸೃಷ್ಟೋ
ಬ್ರಹ್ಮಾಽಹಂ ನಿರ್ಗುಣೋಽಹಂ ವಿತಥಮಿದಮಿತಿ ಹ್ಯೇಷ ಪಾಷಂಡವಾದಃ ।
ತದ್ಯುಕ್ತ್ಯಾಭಾಸಜಾಲಪ್ರಸರವಿಷತರೂದ್ದಾಹದಕ್ಷಪ್ರಮಾಣ-
ಜ್ವಾಲಾಮಾಲಾಧರೋಽಗ್ನಿಃ ಪವನ ವಿಜಯತೇ ತೇಽವತಾರಸ್ತೃತೀಯಃ ॥ ೩೦ ॥

ಆಕ್ರೋಶಂತೋ ನಿರಾಶಾ ಭಯಭರವಿವಶಸ್ವಾಶಯಾಶ್ಛಿನ್ನದರ್ಪಾ
ವಾಶಂತೋ ದೇಶನಾಶಸ್ತ್ವಿತಿ ಬತ ಕುಧಿಯಾಂ ನಾಶಮಾಶಾ ದಶಾಽಶು ।
ಧಾವಂತೋಽಶ್ಲೀಲಶೀಲಾ ವಿತಥಶಪಥಶಾಪಾಶಿವಾಃ ಶಾಂತಶೌರ್ಯಾ-
ಸ್ತ್ವದ್ವ್ಯಾಖ್ಯಾಸಿಂಹನಾದೇ ಸಪದಿ ದದೃಶಿರೇ ಮಾಯಿಗೋಮಾಯವಸ್ತೇ ॥ ೩೧ ॥

ತ್ರಿಷ್ವಪ್ಯೇವಾವತಾರೇಷ್ವರಿಭಿರಪಘೃಣಂ ಹಿಂಸಿತೋ ನಿರ್ವಿಕಾರಃ
ಸರ್ವಜ್ಞಃ ಸರ್ವಶಕ್ತಿಃ ಸಕಲಗುಣಗಣಾಪೂರ್ಣರೂಪಪ್ರಗಲ್ಭಃ ।
ಸ್ವಚ್ಛಃ ಸ್ವಚ್ಛಂದಮೃತ್ಯುಃ ಸುಖಯಸಿ ಸುಜನಂ ದೇವ ಕಿಂ ಚಿತ್ರಮತ್ರ
ತ್ರಾತಾ ಯಸ್ಯ ತ್ರಿಧಾಮಾ ಜಗದುತ ವಶಗಂ ಕಿಂಕರಾಃ ಶಂಕರಾದ್ಯಾಃ ॥ ೩೨ ॥

ಉದ್ಯನ್ಮಂದಸ್ಮಿತಶ್ರೀಮೃದುಮಧುಮಧುರಾಲಾಪಪೀಯೂಷಧಾರಾ-
ಪೂರಾಸೇಕೋಪಶಾಂತಾಸುಖಸುಜನಮನೋಲೋಚನಾಪೀಯಮಾನಮ್ ।
ಸಂದ್ರಕ್ಷ್ಯೇ ಸುಂದರಂ ಸಂದುಹದಿಹ ಮಹದಾನಂದಮಾನಂದತೀರ್ಥ
ಶ್ರೀಮದ್ವಕ್ತ್ರೇಂದುಬಿಂಬಂ ದುರಿತನುದುದಿತಂ ನಿತ್ಯದಾಹಂ ಕದಾ ನು ॥ ೩೩ ॥

*ನಾನೇ ಬ್ರಹ್ಮನು, ಎನಗೆ ಧರ್ಮಗಳ ಸೋಂಕಿಲ್ಲ
'ಈ ಜಗವು ಮಿಥ್ಯ' ಎಂಬ ಪಾಷಂಡವಾದವಿದು
ಆ ಭಾಸ ಉಕ್ತಿಗಳ ಸರಮಾಲೆ ಬಿತ್ತಿದ
ವಿಷಭರಿತ ತರುಗಳನು ಸುಟ್ಟು ಉರಿಸುವ ತೆರದಿ
ಪ್ರಾಮಾಣ್ಯ ಜ್ವಾಲೆಗಳ ಮಾಲೆಯನೆ ಹೊತ್ತಿಹುದು
ಬೆಂಕಿಯಂತಹ ನಿನ್ನ ಮೂರನೆಯ ಅವತಾರ ॥* ೩೦

*ಮಿಥ್ಯಾವಾದಿಗಳೆಂಬ ಈ ನರಿಗಳೆಲ್ಲಾ
ಕಲುಷಿತರು ಹುಸಿಗೊಂಡ ಆಶೆ ಆಕ್ರೋಶದಿಂದ
ಗಡಗಡನೆ ನಡುಗಿದರು ನಿಮ್ಮ ವಾಖ್ಯೆಯ ಸಿಂಹನಾದಕೆ ।
ಕಂಗೆಟ್ಟು ಸೊಕ್ಕಳಿದು ಊಳಿಟ್ಟ ಈ ಮಂದಿ
ತಿಳಿವಿಲ್ಲದವರಿಂದ ದೇಶ ನಾಶವಾಯ್ತೆಂದರು
ಒಳಗೊಳಗೆ ಎದೆಗೆಟ್ಟು ತತ್ತರಿಸಿ ಓಡಿದರು ॥* ೩೧

*ಮೂರು ಅವತಾರದೊಳು ಅಡ್ಡಿಯನೆ ಮಾಡಿದರೂ
ಮಣಿಯಲಾರದೆ ಹೋದೆ ವೈರಿಗಳಿಗೆ
ಸರ್ವಜ್ಞ ನೀನು । ಸರ್ವಶಕ್ತನು ನೀನು । ಸಕಲ ರೂಪ ಪ್ರಗಲ್ಭ ।
ಭಕ್ತರಿಗೆ ಸೊಗವನ್ನು ನೀ ಕೊಡಲು ಅದರಲ್ಲಿ ಆಶ್ಚರ್ಯವೇನು?
ಶಂಕರನು ಆಗಿಹನು ನಿನ್ನ ಕಿಂಕರನು, ಇಡಿಯ ವಿಶ್ವವೆ ಇಹದು ನಿನ್ನಂಕೆಯಲ್ಲಿ ॥
ಹರಿಯು ಶ್ರೀರಕ್ಷೆಯಿಹುದು ಅನವರತ ॥* ೩೨

*ಮಂದಹಾಸದ ಮೃದು ಮಧುರ ನಗೆಯ ಮೊಗ
ಸುಖವರಿತ ಸಜ್ಜನರು ಕಣ್ಮನದಿ ಕುಡಿವ ಮೊಗ
ಆನಂದನಾ ನೆಲದಲ್ಲಿ ಹನಿಗರೆವ ಚಂದ ಮೊಗ
ಹುಣ್ಣಿಮೆಯ ಚಂದಿರನ ಸಿರಿಹೊತ್ತ ಭವ್ಯ ಮೊಗ
ದುರಿತವನು ಕಳೆಯಲಿಂದರಳಿರುವ ಈ ಮೊಗವ
ಓ ಆನಂದತೀರ್ಥರೇ, ಎಂದೆಂದು ಕಾಣುವಂತಾಗುವುದು ಎಂದು? ॥* ೩೩

ಪ್ರಾಚೀನಾಚೀರ್ಣಪುಣ್ಯೋಚ್ಚಯಚತುರತರಾಚಾರತಶ್ಚಾರುಚಿತ್ತಾ-
ನತ್ಯುಚ್ಚಾಂ ರೋಚಯಂತೀಂ ಶ್ರುತಿಚಿತವಚನಾಂ ಶ್ರಾವಕಾಂಶ್ಚೋದ್ಯಚುಂಚೂನ್ ।
ವ್ಯಾಖ್ಯಾಮುತ್ಖಾತದುಃಖಾಂ ಚಿರಮುಚಿತಮಹಾಚಾರ್ಯ ಚಿಂತಾರತಾಂಸ್ತೇ
ಚಿತ್ರಾಂ ಸಚ್ಛಾಸ್ತ್ರಕರ್ತಶ್ಚರಣಪರಿಚರಾಂಛ್ರಾವಯಾಸ್ಮಾಂಶ್ಚ ಕಿಂಚಿತ್ ॥ ೩೪ ॥

*ಓ ಸಚ್ಛಾಸ್ತ್ರ ಕರ್ತೃವೇ, ಹಿರಿಯ ಗುರುವೇ*
*ಪ್ರಾಚೀನ ಪುಣ್ಯಫಲ ಸನ್ನಡತೆಯಿಂದ*
*ಮುಗ್ಧಗೊಳಿಪುದು ನಿಮ್ಮ ವಾಗ್ಝರಿಯ ಸ್ರೋತ*
*ಸಂದೇಹಗಳ ಹೊತ್ತ ತಿಳಿಮನದ ಶ್ರಾವಕರ*
*ದುಗುಡಗಳ ಕಿತ್ತೆಸೆವ ಇನಿದನಿಯ ಹನಿಗಳು*
*ಕಿಂಚಿತ್ತು ಕೇಳಿಸಿರಿ ಮಾತಿನ ಮೋಡಿಯನು ಚರಣ ಸೇವಕರೆಮಗೆ ॥* ೩೪

ಪೀಠೇ ರತ್ನೋಪಕ್ಲೃಪ್ತೇ ರುಚಿರರುಚಿಮಣಿಜ್ಯೋತಿಷಾ ಸನ್ನಿಷಣ್ಣಂ
ಬ್ರಹ್ಮಾಣಂ ಭಾವಿನಂ ತ್ವಾಂ ಜ್ವಲತಿ ನಿಜಪದೇ ವೈದಿಕಾದ್ಯಾ ಹಿ ವಿದ್ಯಾಃ ।
ಸೇವಂತೇ ಮೂರ್ತಿಮತ್ಯಃ ಸುಚರಿತ ಚರಿತಂ ಭಾತಿ ಗಂಧರ್ವಗೀತಂ
ಪ್ರತ್ಯೇಕಂ ದೇವಸಂಸತ್ಸ್ವಪಿ ತವ ಭಗವನ್ನರ್ತಿತದ್ಯೋವಧೂಷು ॥ ೩೫ ॥

*ಚೆಲುಕಾಂತಿ ಮಾಣಿಕ್ಯ ಬೆಳಗುವ ತಾಣದಲಿ*
*ಕುಳಿತಿಹಿರಿ ರತ್ನಗಳ ಪೋಣಿಸಿದ ಪೀಠದಲಿ*
*ಬ್ರಹ್ಮ ಪದವಿಗೆ ಏರಿ ಮುಂದೆ ಬೆಳಗುವ ಗುರುವೇ*
*ವೇದಾದಿ ವಿದ್ಯೆಗಳು ಮೈವೆತ್ತಿ ಸೇವಿಸುವೆ*
*ಅಪ್ಸರೆಯು ನರ್ತಿಸುವ ದೇವ ಸಭೆಗಳಲಿ*
*ಗಂಧರ್ವ ಗಾಯನದಿ ಬೆಳಗುತಿದೆ ಚರಿತೆ ॥* ೩೫

ಸಾನುಕ್ರೋಶೈರಜಸ್ರಂ ಜನಿಮೃತಿನಿರಯಾದ್ಯೂರ್ಮಿಮಾಲಾವಿಲೇಽಸ್ಮಿನ್
ಸಂಸಾರಾಬ್ಧೌ ನಿಮಗ್ನಾಂಛರಣಮಶರಣಾನಿಚ್ಛತೋ ವೀಕ್ಷ್ಯ ಜಂತೂನ್ ।
ಯುಷ್ಮಾಭಿಃ ಪ್ರಾರ್ಥಿತಃ ಸಞ್ಜಲನಿಧಿಶಯನಃ ಸತ್ಯವತ್ಯಾಂ ಮಹರ್ಷೇ-
ರ್ವ್ಯಕ್ತಶ್ಚಿನ್ಮಾತ್ರಮೂರ್ತಿರ್ನ ಖಲು ಭಗವತಃ ಪ್ರಾಕೃತೋ ಜಾತು ದೇಹಃ ॥ ೩೬ ॥

*ಜನ್ಮ ಮರಣ ನರಕದಲಿ ನೆಲೆಯಿಂದ*
*ಕದಡಿರುವ ಬಾಳಿನ ಕಡಲಲ್ಲಿ ಮುಳುಗಿರುವ*
*ಕಾತರಿಪ ಜೀವಿಗಳ ಕರುಣೆಗೊಂಡಿರಿ ಕಂಡು*
*ಕಡಲಲ್ಲಿ ಮಲಗಿರುವ ಭಗವಂತನನು ಬೇಡದಿರಿ*
*ಸತ್ಯವತಿಯ ಗರ್ಭದಲಿ ಚಿನ್ಮಯನ ರೂಪದಲಿ*
*ಭೂಮಿಗಿಳಿದು ಬಂದವನೆ, ಎಲ್ಲುಂಟು ಪ್ರಾಕೃತದ ರೂಪ ॥* ೩೬

ಅಸ್ತವ್ಯಸ್ತಂ ಸಮಸ್ತಶ್ರುತಿಗತಮಧಮೈ ರತ್ನಪೂಗಂ ಯಥಾಂಧೈ-
ರರ್ಥಂ ಲೋಕೋಪಕೃತ್ಯೈ ಗುಣಗಣನಿಲಯಃ ಸೂತ್ರಯಾಮಾಸ ಕೃತ್ಸ್ನಮ್ ।
ಯೋಽಸೌ ವ್ಯಾಸಾಭಿಧಾನಸ್ತಮಹಮಹರಹರ್ಭಕ್ತಿತಸ್ತತ್ಪ್ರಸಾದಾ-
ತ್ಸದ್ಯೋ ವಿದ್ಯೋಪಲಬ್ಧ್ಯೈ ಗುರುತಮಮಗುರುಂ ದೇವದೇವಂ ನಮಾಮಿ ॥ ೩೭ ॥

*ಕುರುಡರಿಗೆ ದೊರೆತಿರುವ ರತ್ನ ರಾಶಿಯ ಹಾಗೆ*
*ಚದುರಿತ್ತು ವೇದಾರ್ಥ ಅಧಮರಿಗೆ ಸಿಕ್ಕು*
*ಭಗವಂತ ಪೋಣಿಸಿದ ಸೂತ್ರರೂಪದಿ ಅದನು*
*ದೇವ ವೃಂದದ ಒಡೆಯ, ಗುರುಗಳಿಗೆ ಗುರುವೆಮಗೆ ಬೇರೊಬ್ಬ ಗುರುವಿಲ್ಲ*
*ವ್ಯಾಸರೂಪೀ ಹರಿಯ ಅನುದಿನವು ನೆನೆ ನೆನೆದು*
*ಬೇಡುವೆನು ಭಿಕ್ಷೆಯನು ತತ್ವ ಚಿಂತನೆಯನ್ನು ॥* ೩೭

ಆಜ್ಞಾಮನ್ಯೈರಧಾರ್ಯಾಂ ಶಿರಸಿ ಪರಿಸರದ್ರಶ್ಮಿಕೋಟೀರಕೋಟೌ
ಕೃಷ್ಣಸ್ಯಾಕ್ಲಿಷ್ಟಕರ್ಮಾ ದಧದನುಸರಣಾದರ್ಥಿತೋ ದೇವಸಂಘೈಃ ।
ಭೂಮಾವಾಗತ್ಯ ಭೂಮನ್ನಸುಕರಮಕರೋರ್ಬ್ರಹ್ಮಸೂತ್ರಸ್ಯ ಭಾಷ್ಯಂ
ದುರ್ಭಾಷ್ಯಂ ವ್ಯಸ್ಯ ದಸ್ಯೋರ್ಮಣಿಮತ ಉದಿತಂ ವೇದಸದ್ಯುಕ್ತಿಭಿಸ್ತ್ವಮ್ ॥ ೩೮

ಭೂತ್ವಾ ಕ್ಷೇತ್ರೇ ವಿಶುದ್ಧೇ ದ್ವಿಜಗಣನಿಲಯೇ ರೂಪ್ಯಪೀಠಾಭಿಧಾನೇ
ತತ್ರಾಪಿ ಬ್ರಹ್ಮಜಾತಿಸ್ತ್ರಿಭುವನವಿಶದೇ ಮಧ್ಯಗೇಹಾಖ್ಯಗೇಹೇ ।
ಪಾರಿವ್ರಾಜ್ಯಾಧಿರಾಜಃ ಪುನರಪಿ ಬದರೀಂ ಪ್ರಾಪ್ಯ ಕೃಷ್ಣಂ ಚ ನತ್ವಾ
ಕೃತ್ವಾ ಭಾಷ್ಯಾಣಿ ಸಮ್ಯಗ್ ವ್ಯತನುತ ಚ ಭವಾನ್ ಭಾರತಾರ್ಥಪ್ರಕಾಶಮ್ ॥ ೩೯

ವಂದೇ ತಂ ತ್ವಾ ಸುಪೂರ್ಣಪ್ರಮತಿಮನುದಿನಾಸೇವಿತಂ ದೇವವೃಂದೈ-
ರ್ವಂದೇ ವಂದಾರುಮೀಶೇ ಶ್ರಿಯ ಉತ ನಿಯತಂ ಶ್ರೀಮದಾನಂದತೀರ್ಥಮ್ ।
ವಂದೇ ಮಂದಾಕಿನೀಸತ್ಸರಿದಮಲಜಲಾಸೇಕಸಾಧಿಕ್ಯಸಂಗಂ
ವಂದೇಽಹಂ ದೇವ ಭಕ್ತ್ಯಾ ಭವಭಯದಹನಂ ಸಜ್ಜನಾನ್ಮೋದಯಂತಮ್ ॥ ೪೦

ಸುಬ್ರಹ್ಮಣ್ಯಾಖ್ಯಸೂರೇಃ ಸುತ ಇತಿ ಸುಭೃಶಂ ಕೇಶವಾನಂದತೀರ್ಥ-
ಶ್ರೀಮತ್ಪಾದಾಬ್ಜಭಕ್ತಃ ಸ್ತುತಿಮಕೃತ ಹರೇರ್ವಾಯುದೇವಸ್ಯ ಚಾಸ್ಯ ।
ತತ್ಪಾದಾರ್ಚಾದರೇಣ ಗ್ರಥಿತಪದಲಸನ್ಮಾಲಯಾ ತ್ವೇತಯಾ ಯೇ
ಸಂರಾಧ್ಯಾಮೂ ನಮಂತಿ ಪ್ರತತಮತಿಗುಣಾ ಮುಕ್ತಿಮೇತೇ ವ್ರಜಂತಿ ॥ ೪೧ ॥

*ಸುತ್ತ ಕಿರಣಗಳನ್ನು ಹೊಮ್ಮಿಸುವ ಮುಕುಟವನು ಹೊತ್ತ*
*ಶಿರದಲಿ ಹೊತ್ತೆ ದ್ವೈಪಾಯನರಾದೇಶ*
*ಬೇಡಿಕೊಂಡರು ನರರು ಓಲೈಸಿ ನಿನ್ನನ್ನು*
*ಸುಲಭದಲಿ ಏನನ್ನೂ ಸಾಧಿಸುವ ನೀನು*
*ಧರೆಗಿಳಿದು ಬರೆದೆ ಬ್ರಹ್ಮ ಸೂತ್ರಕೆ ಭಾಷ್ಯ*
*ಖಂಡಿಸಿದೆ ಮಣಿಮಂತನ ದುರ್ಭಾಷ್ಯ ವೇದ, ಸದ್ಯುಕ್ತಿ ತರ್ಕದಿಂದ ॥* ೩೮

*ವಿಪ್ರ ವೃಂದವು ಮೆರೆದ ಮೂರ್ಲೋಕ ಖ್ಯಾತಿಯ*
*ಪರಮ ಪಾವನ ರಜತ ಪೀಠದಿ, ಮಧ್ಯಗೇಹರ ಮನೆಯ ಮಧ್ಯದಿ*
*ಆನಿಸಿ ಬಂದೆ ನೀನು ಶುದ್ಧ ಬ್ರಾಹ್ಮಣನಾಗಿ*
*ಸನ್ಯಾಸ ಲೋಕದ ಪ್ರಭುವಾಗಿ ಮೆರೆದು ಮರಳಿ ತೆರಳಿದೆ ಬದರಿಗೆ ।*
*ಚಂದ ಭಾಷ್ಯವ ಬರೆದೆ, ವ್ಯಾಸರಿಗೆ ಮಣಿದು*
*ಭಾರತದ ತಿರುಳನ್ನು ತೆರೆದು ತೋರಿದೆ ಮಂದಿಗೆ ॥* ೩೯

*ಸುರಗಣವು ಅನುದಿನವು ಸೇವಿಸುವ ಪೂಜ್ಯರೇ*
*ಮಂದಾಕಿನೀ ನದಿಯಂತೆ ಪರಮ ಪರಿಶುದ್ಧರೇ*
*ಸಂಸಾರ ಭಯುವನ್ನು ಸುಡುವ ಮಹನೀಯರೇ ।*
*ಸುಜನ ಸದ್ಭಕ್ತರಿಗೆ ಮುದವ ನೀಡುವ ಗುರುವೇ*
*ಶ್ರೀ ಹರಿಗೆ ಪೊಡಮಡುವ ಆನಂದ ತೀರ್ಥರೇ*
*ವಂದಿಸುವೆ ಭಕ್ತಿಯಲಿ ಓ ಪೂರ್ಣಪ್ರಜ್ಞರೇ ॥* ೪೦

**ಫಲಶ್ರುತಿ:**

*ಕೇಶವಾನಂದ ತೀರ್ಥರ ಸಿರಿಯಡಿದಾವರೆಗಳಲ್ಲಿ*
*ಭಕ್ತಿಯಿಂದಲಿ ಹೊಸೆದ ಹರಿವಾಯುಗಳ ಹಾಡುಗಬ್ಬ*
*ಸುಬ್ರಹ್ಮಣ್ಯ ಪಂಡಿತರ ವರಪುತ್ರ ರಚಿಸಿದ ।*
*ಕವಿಯು ಪೋಣಿಸಿದ ಈ ನುಡಿಯು ಹಾರವನು*
*ಸ್ತುತಿಸಿ ಮಣಿವವರು ಮುಕ್ತಿಯನು ಪಡೆಯುವರು*
*ಹರವಾಗಿ ಬೆಳೆಯುವುದು ಅರಿವ ಹರವು ॥*

## ॥ ಶ್ರೀ ನರಸಿಂಹನಖಸ್ತುತಿಃ ॥

ಪಾಂತ್ವಸ್ಮಾನ್ ಪುರುಹೂತವೈರಿಬಲವನ್ಮಾತಂಗಮಾದ್ಯದ್ ಘಟಾ–
ಕುಂಭೋಚ್ಚಾದ್ರಿವಿಪಾಟನಾಧಿಕಪಟುಪ್ರತ್ಯೇಕವಜ್ರಾಯಿತಾಃ ।
ಶ್ರೀಮತ್ಕಂಠೀರವಾಸ್ಯಪ್ರತತಸುನಖರಾ ದಾರಿತಾರಾತಿದೂರ–
ಪ್ರಧ್ವಸ್ತಧ್ವಾಂತಶಾಂತಪ್ರವಿತತಮನಸಾ ಭಾವಿತಾ ಭೂರಿಭಾಗ್ಯೈಃ ॥ ೧

ಲಕ್ಷ್ಮೀಕಾಂತ ಸಮಂತತೋಽಪಿ ಕಲಯನ್ ನೈವೇಶಿತುಸ್ತೇ ಸಮಂ
ಪಶ್ಯಾಮ್ಯುತ್ತಮವಸ್ತು ದೂರತರತೋಽಪಾಸ್ತಂ ರಸೋ ಯೋಽಷ್ಟಮಃ ।
ಯದ್ರೋಷೋತ್ಕರದಕ್ಷನೇತ್ರಕುಟಿಲಪ್ರಾಂತೋತ್ಥಿತಾಗ್ನಿಸ್ಫುರತ್–
ಖದ್ಯೋತೋಪಮವಿಷ್ಫುಲಿಂಗಭಸಿತಾ ಬ್ರಹ್ಮೇಶಶಕ್ರೋತ್ಕರಾಃ ॥ ೨

॥ ಇತಿ ಕವಿಕುಲತಿಲಕಶ್ರೀಮತ್ತ್ರಿವಿಕ್ರಮಪಂಡಿತಾಚಾರ್ಯಕೃತಾ ವಾಯುಸ್ತುತಿಃ ಸಂಪೂರ್ಣಾ ॥

***ಪುರುಹೂತ ವೈರಿಗಳ ಕರಿನಿಕರ ಕುಂಭಗಳ***
***ತಂದು ವಿಧ್ವಂಸಿಸುವ ಹರಿದು ನುಚ್ಚಾಗಿಸುವ***
***ಸುರಪತಿಯ ಆಯುಧದ ಪರಿಯ ಈ ಉಗುರುಗಳು ।***
***ವೈರಿಗಳ ತರಿವ, ತಿಮಿರಗಳ ಕಳೆವ***
***ಹಿರಿಯ ಸಿರಿವಂತರು ಅರಿತು ಆರಾಧಿಸುವ***
***ನರಹರಿಯ ಉಗುರುಗಳು ಪೊರೆಯಲನವರತ ॥*** ೧

***ಕಾಣೆಯಾದೆನು ನಿನಗೆ ಸಾಟಿಯು ಸಿರಿರಮಣ ಹರಿಯೆ***
***ಎತ್ತೆತ್ತಲರಿಸಿದರೂ ಸೊತ್ತ ಕಾಣಿಸು ನಾನು***
***ಎಂಟನೆಯ ರಸದಂತೆ ನಂಟು ಗಂಟಾಗಿಹುದು***
***ಮುನಿಸು ಮಸೆದೆಸೆಯುವ ಕಂಗಳ ಕುಡಿಯಿಂದ***
***ಸಿಡಿವ ಸಿಡಿಲಿನ ಕಿಡಿಗಳಲಿ ನೋಡಾ ।***
***ಭಸ್ಮವಾಗಿಹುದಲ್ಲಿ ಬ್ರಹ್ಮ ರುದ್ರೇಂದ್ರ ದೇವತಾ ಗಡಣಗಳು ॥*** ೨

ಶ್ರೀ ಇ.ಡಿ. ನರಹರಿಯವರು ರಚಿಸಿರುವ ಶ್ರೀ ಹರಿ ವಾಯುಸ್ತುತಿಯ
ಕನ್ನಡ ಪದ್ಯಾನುವಾದವು ಮುಗಿದುದು

## ಸೂರ್ಯ ಸ್ತೋತ್ರ

ಸ್ವಾಮಿ ದೇವನೆ ಲೋಕಪಾಲನೆ ತೇ ನಮೋಸ್ತು ನಮೋಸ್ತು ತೇ ।
ಪ್ರೇಮದಿಂದಲಿ ನೋಡು ನಮ್ಮನು ತೇ ನಮೋಸ್ತು ನಮೋಸ್ತು ತೇ ॥ ಪ

ನೇಮಿಸೆಮ್ಮೊಳು ಧರ್ಮಕಾರ್ಯವ ತೇ ನಮೋಸ್ತು ನಮೋಸ್ತು ತೇ ।
ಕ್ಷೇಮದಿಂದಲಿ ಪಾಲಿಸೆಮ್ಮನು ತೇ ನಮೋಸ್ತು ನಮೋಸ್ತು ತೇ ॥ ೧

ದೇವದೇವನೆ ಹಸ್ತ ಪಾದಗಳಿಂದಲೂ ಮನದಿಂದಲೂ ।
ನಾವು ಮಾಡಿದ ಪಾಪವೆಲ್ಲವ ಹೋಗಲಾಡಿಸು ಬೇಗನೆ ॥ ೨

ಕಾವರಿಲ್ಲವು ನಿನ್ನ ಬಿಟ್ಟರೆ ಸೂರ್ಯನೆ ಜಗದೀಶನೆ ।
ಜೀವಕೋಟಿಯು ನಿನ್ನ ಈ ಬೆಳಕಿಂದ ಜೀವಿಪುದಲ್ಲವೆ ॥ ೩

ರಾತ್ರಿ ನಿದ್ದೆಯ ಗೈವ ಕಾಲದಿ ನೀನೆ ನಮ್ಮನು ಕಾಯ್ದಿಯ್ಯೆ ।
ಮಿತ್ರನೆಂಬುವ ನಾಮಧೇಯವು ಸತ್ಯವಾಯಿತು ನಿನ್ನೊಳು ॥ ೪

ಸ್ತೋತ್ರ ಮಾಡುವ ಹಾಗೆ ನಿನ್ನನು ಪಕ್ಷಿಗಳ್ ಧ್ವನಿ ಗೈವವೈ ।
ಚಿತ್ರ ಭಾನುವೆ ನೋಡಿ ನಿನ್ನನು ಎಲ್ಲಿ ಪೋದುದು ಕತ್ತಲೆ ॥ ೫

ಉತ್ತಮತೋಮ ನಿನ್ನ ಪಾದದ ಭಕ್ತಿಯೇ ಸ್ಥಿರವಲ್ಲವೇ ।
ಚಿತ್ತವೆಂಬುದು ಗಾಳಿಯಲ್ಲಿಹ ದೀಪದಿಂದಲಿ ಚಂಚಲ ॥ ೬

ಮತ್ತರಾಗುತ ಬಿಟ್ಟು ನಿನ್ನನು ಕೆಟ್ಟ ಯೋಚನೆ ಗೈಯದ ।
ಚಿತ್ತವಂ ನಮಗಿತ್ತು ರಕ್ಷಿಸು ಪದ್ಮನಾಭ ಸುರೇಶನೇ ॥ ೭

ಆಡುವಾಗಲು ನಾವು ಭೋಜನ ಮಾಡುವಾಗಲು ಸರ್ವದಾ ।
ನೋಡಿ ನೀ ದಯದಿಂದಲೆಮ್ಮನು ಪಾಲಿಸೈ ಭಗವಂತನೇ ॥ ೮

ಬೇಡಿಕೊಂಬೆವು ನಮ್ಮ ದೇಹಕೆ ಸೌಖ್ಯವಂ ಬಲ ಪುಷ್ಟಿಯಂ ।
ನೀಡು ನಿನ್ನಯ ಪಾದ ಭಜನೆಯ ಎಂದಿಗೂ ಬಿಡಲಾರೆವೈ ॥ ೯

ಸಂಗ್ರಹ
**ಜಿ.ವಿ. ಪ್ರಭಾಕರ ರಾವ್**

## ಶ್ರೀ ಗುರುಭ್ಯೋನಮ: ॥ ಹರಿ: ॥ ಓಂ ॥

## ರಾಗ - ಶಂಕರಾಭರಣ – ಆದಿತಾಳ.

ಭಾಗವತಾಮ್ರುತ ಕಥೆಯನು ಶುಕಮುನಿ ।
ಭಾಗವತಾಗ್ರಣಿ ಪರೀಕ್ಷಿತಗೊರೆದ ॥ ಪಲ್ಲವಿ ॥
ರಾಗದಿಂದಲಿಸೂತ ಶೌನಕರಿಗೆ ಪೇಳ್ದ ।
ಅಗಮವೇದ್ಯನ ಮುಕ್ತಿದಾತನ ಶ್ರೀ ॥ ಅನುಪ ॥
ಮೊದಲನೆ ಪದ್ಯವೆ ಮುಕ್ತಿಗೆ ಸಾಧನ ।
ವದರ್ಥ ತಿಳಿದರೆ ಸಾಕೆಂದಿಗೂ ।
ಇದರಲ್ಲಿ ಪ್ರಣವ ಗಾಯತ್ರೀ ಸೂತ್ರಂಗಳ ।
ವಿದಿತವಾದರ್ಥವೆ ಹುದುಗಿರುವುದು ಕಂಡ್ಯ ॥ ೧ ॥
ಬಾದರಾಯಣ ದೇವರಿಂದ ಪುಟ್ಟದ ಈ ।
ಭಾಗವತ ವೃಕ್ಷಕ್ಕಿಹುದು ಕೊಂಬೆಗಳು ।
ಮೋದದಿಂದಿದರಾ ಫಲಂಗಳ ಶುಕ ಸವಿದು ।
ಮೇದಿನಿಗೆಲ್ಲ ರಸಾಮೃತ ಸುರಿಸಿದ ॥ ೨ ॥
ವ್ಯಾಸದೇವನು ಸಕಲ ಶಾಸ್ತ್ರಂಗಳ ರಚಿಸಿ ।
ಭಾಸಿಸಿದನು ಸರ್ವತತ್ತ್ವಂಗಳ ।
ಆಶಾಪಾಶದಿ ಸಿಕ್ಕಜೀವರ ಬಿಡಿಸಲು ।
ದೋಷರಹಿತ ಕೃಷ್ಣ * ನಾರದರಿಂಕೇಳ್ದ * ವೇದವ್ಯಾಸರು ॥ ೩ ॥
ಧರ್ಮದೆ ಪರೀಕ್ಷಿತ ರಾಜ್ಯವ ಪಾಲಿಸೆ ।
ನಿರ್ಮಮರೆಲ್ಲರು ನಿತ್ಯಮಂಗಳರು ।
ಕರ್ಮಂಗಳೆಲ್ಲ ಶ್ರೀ ಹರಿಪೂಜೆಯೆಂಬರು ।

ನಿರ್ಮಲಚಿತ್ತರು ಕಲಿದೋಷರಹಿತರು ॥ ೪ ॥
ಪ್ರಾರಬ್ಧ ಕರ್ಮವು ಪೂರೈಸಲೇ ಬೇಕು ।
ಯಾರಿಗೂ ಬಿಡದಯ್ಯ * ವಿಷ್ಣು ರಾತ । * ಪರೀಕ್ಷಿದ್ರಾಜ
ಅರಣ್ಯಾಶ್ರಮದೊಳು ಋಷಿಗಳ ಕೆಣಕಿದ ।
ಮೂರು ನಾಲ್ಕು ದಿನದೆ ಸಾವನು ಸಾರಿದ ॥ ೫ ॥
ಸಾವಿನ ಭೀತಿಯು ಸಂಗರಹಿತಗುಂಟೆ ।
ಮಾವರನ * ಕರುಣ ಅವಗಿಲ್ಲವೆ । * ಲಕ್ಷ್ಮೀಪತಿ
ಆವಾಗಲೇ ಅವಧೂತಮಾರ್ಗದ ಶುಕ ।
ಭೂವರನಿಗೆ ಆಹ ತೋರಿದ ನೊರೆದ ॥ ೬ ॥
ದೇಹಾಭಿಮಾನವೆ ಮೃತಿಭಯಜನಕವು ।
* ಈಹೆಯು ನೀಡಾಡಿಯಿರುವುದೇ ಸುಖವು ।* ಆಸೆ
ಆ ಹರಿಸೇವೆಯೆ ಮುಕುತಿ ಪಂಥಾನವು ।
ಊಹಾಪೋಹವಲ್ಲ ಸತ್ಯ ಸತ್ಯವೆಂದ ॥ ೭ ॥
ಸತ್ಯಜಗತ್ತಿಗೆ ಮಿಥ್ಯೆಯ ಪೇಳೋವ ।
ಸತ್ತರು ಒಂದೆ ಇದ್ದರು ಕೂಡ ಒಂದೇ ।
ಅತ್ಯದುಭುತಮಹಿಮ ನಮ್ಮ ಶ್ರೀ ಹರಿಯೇ ।
ಕರ್ತನು ಸೃಷ್ಟ್ಯಾದಿಸರ್ವಕಾರ್ಯಂಗಳಿಗು ॥ ೮ ॥
ಸರ್ವೋತ್ತಮನಿಗೆ ಸರ್ವರೂಪಗಳುಂಟು ।
ಸರ್ವವ್ಯಾಪ್ತಿಯುಂಟು ಶಕ್ತಿಯುಂಟು ।
ಶರ್ವಾದಿಗೀರ್ವಾಣ ಜನಕನ ಜನಕನು ।
ಸರ್ವರೊಳು ಸಮನು ಅದ್ವೈತಗುಣನು ॥ ೯ ॥
ಶ್ರೀಲೋಲಗೊಲ್ಲದ ಕರ್ಮವೆ ಕುಕರ್ಮ ।
ಕಾಲೇಶ್ವರನಿಗೆ ಪ್ರಿಯವಾದ ಕರ್ಮ ।
ಆಲೋಚಿಸಿ ನೋಡು ಸಿದ್ಧರ್ಮ ಅದೆ ಕಣಾ ।
ಆಲಸ್ಯ ಮಾಡದೆ ಆಚರಿಸು ಕಂಡ್ಯ ॥ ೧೦ ॥

ಇಂತೆಂದ ತತ್ತ್ವವ ಕೇಳಿ ರಾಜನು ಹರಿ ।
ಚಿಂತೆಯ ಚಿಂತೆಯು ತನಗಾಗಲು ।
ಪಂಥದೆ ಹಸಿವು ನಿದ್ರೆಗಳನ್ನೆ ತೊರೆದ ।
ಶಾಂತಮೂರುತಿ ರೂಪಮಹಿಮೆಗಳ ಕೇಳ್ದ ॥ ೧೧ ॥
ಹರಿಮಹಿಮೆ ಪೇಳಲು ಕ್ಷರಪುರುಷರಿಗಳವೆ ।
ಕ್ಷರಳಲ್ಲ ಲಕ್ಷ್ಮೀಯು ಅವಳಿಗಸಾಧ್ಯ |
ನರಹರಿ ರೂಪಿ ಶ್ರೀಬಾದರಾಯಣದಯದೆ |
ಅರಿತಷ್ಟು ತಿಳಿಪೆನು ಕೇಳಯ್ಯ ಮಾನ್ಯ ॥ ೧೨ ॥
ಮೂಲನಾರಾಯಣ ಲೀಲೆಯಿಂದಲಿನಾಲ್ಕು |
ಮೂಲರೂಪಗಳನ್ನೆ ತಾ ತೋರಿದ |
ಶ್ರೀಲಕುಮಿ ತಾನು ನಾಲ್ಕು ರೂಪವ ತಾಳಿ |
ಕಾಲನಿಯಮಕ ಹರಿಸೇವೆಗೆಯ್ದಳು ॥ ೧೩ ॥
ಪುರುಷರೂಪಕ ಹರಿಯಾಗಲು ದೇವಿಯು |
ಪ್ರಕೃತಿಗೆ ಅಬಿಮಾನಿ ತಾನಾದಳು |
ಇರದೆ ಬ್ರಹ್ಮಾಂಡಾದಿ ಸೂಕ್ಷ್ಮ ಸ್ಥೂಲಸೃಷ್ಟಿ |
ವಿರಚನೆಯಾಯಿತು ತಾರತಮ್ಯದಿಂದ ॥ ೧೪ ॥
ಆನಿಸಿದ ಸರ್ವವಸ್ತುಗಳೊಳು ಶ್ರೀ ಸ್ವಾಮಿ |
ಅನಿತಾದರೂಪದೆ ಅವರೊಳಗೆ |
ಘನಕಾರ್ಯಕರ್ತನು ಜೀವರಂತರ್ಯಾಮಿ |
ಅನಘಪೂರ್ಣರೂಪ ನಿರ್ಲಿಪ್ತನೆನಿಸಿದ ॥ ೧೫ ॥
ನಿರ್ಗುಣ ಮೂರು ಗುಣಗಳಿಂದ ಜೀವರ |
ಯೋಗ್ಯತೆಗನುಸಾರ ದೇಹಂಗಳ ಕೊಟ್ಟ |
ಅಜ್ಞರು ಇದಪೇಳೆ ನಗುವರೆ ಹೊರತಯ್ಯೋ |
ಪ್ರಾಜ್ಞನ ತಿಳಿವಂಥಾ ಪುಣ್ಯ ಅವರಿಗುಂಟೇ ? ॥ ೧೬ ॥
ಅವನ ಮಹಿಮೆಗಳಿಗೆ ಮೊದಲುಂಟೆ ಕೊನೆಯುಂಟೆ |
ಅವನ ನಾಮಂಗಳಿಗು ರೂಪಂಗಳಿಗೂ |

ಭವದೊಳು ಬಳಲುವ ಜೀವರ ಗತಿಗಾಗಿ |
ಅವತರಿಸಿದ ಮುಖ್ಯ ರೂಪಂಗಳ ನೊರೆವೆ ‖ ೧೭ ‖
ಯಜ್ಞವರಾಹನು ವೃಷಭನು ಕಪಿಲನು |
ಪ್ರಾಜ್ಞದತ್ತನು ವರದ ಮೋಹಿನಿ ಹಯನು |
ಅಗ್ರ್ಯಮೀನ ಕೂರ್ಮ ನರಸಿಂಹ ವಾಮನ |
ಉಗ್ರಕ್ಷತ್ರಿಯ ಧ್ವಂಸಿ ಶ್ರೀರಾಮನೆನಿಸಿದ ‖ ೧೮ ‖
ಸತ್ತ್ವರೂಪಿಯಾಗಿ ಶಾಸ್ತ್ರಕರ್ತನಾದ |
*ಕ್ಷಾತ್ರರೂಪದಿಂದ ಕ್ಷಿತಿಯ ಪಾಲಿಸಿದ | *ರಾಜಸರೂಪಗಳು
*ಕತ್ತಲೆ ರೂಪಿಂದೆ ದೈತ್ಯರ ಕೊಂದವರ | * ತಾಮಸರೂಪಗಳು
ಹತ್ತಿಸಿ ನರಕಕ್ಕೆ ಭೃತ್ಯರ ಪೊರೆದ ‖ ೧೯ ‖
ಲೋಕದಿ ಸಾರವಸ್ತುಗಳೆಂಬೋದಷ್ಟು |
ಶ್ರೀಕಮಲೇಶನ ರೂಪಸಾನಿಧ್ಯ |
ಕಾಕುಜನರು ಇದ ತಿಳಿಯದೆ ತಾವೇ |
ಲೋಕೇಶನ ರೂಪವೆಂದು ಲಯವಾಗುವರು ‖ ೨೦ ‖
ಇಂತೆನೆ ಪರೀಕ್ಷಿತರಾಜನದ ಕೇಳಿ |
ಸ್ವಾಂತದೆ ಸ್ಮರಿಸಿದ ಕೃಷ್ಣ ಮೂರುತಿಯ |
ಸಂತರೊಡಯರೆ ಮುನಿವರ್ಯರೆ ರುಕ್ಮಿಣೀ |
ಕಾಂತನವತಾರದ ಕಥೆಯ ವಿಸ್ತರಿಸಿ ‖ ೨೧ ‖
ಎನಲದ ಕೇಳುತ್ತೆ ತಲೆಯನು ತೂಗುತ್ತೆ |
ಮನದಲ್ಲಿ ಹರಿರೂಪ ಕಂಡು ನಲಿಯುತ್ತೆ |
ಅಘನ ಕೇಳಯ್ಯ ಶ್ರೀಹರಿ ಯದುಕುಲದೊಳು |
ಆನಿಸಿದ ತೆರನಂತೆ ಲೋಕಕ್ಕೆ ಮೆರೆದ ‖ ೨೨ ‖
ದೇವಕಿವಸುದೇವ ಜನನಿಜನಕರಂತೆ |
ಕಾವರು ಗೋಪಯಶೋದೆಯರಂತೆ |
ಗೋವುಗಳನೆ ಕಾಯ್ವ ಗೋಪಾಲಕನಂತೆ |
ಅವವಿಚಿತ್ರವೋ ಶ್ರೀಕೃಷ್ಣ ಲೀಲೆ ‖ ೨೩ ‖

ನಂದಾದಿಗಳಿಗೆ ಕಂದನು ತಾನೆನಿಸಿ !
ಒಂದೊಂದು ನೆವದಿಂದ ಇವನೇಹರಿಯು |
ಎಂದೆಂಬ ಭಾವನೆಯವರಲ್ಲಿ ಮೂಡಿಸಿ |
ಸಂದೇಹಗಳ ಕಳೆದು ನಿಶ್ಚಲಮತಿಕೊಟ್ಟ ‖ ೨೪ ‖
ಗೋಪಿಕೆಯರು ಕೃಷ್ಣರೂಪವ ಕಾಣುತ್ತೆ |
ಪಾಪಹರಿತಕಾಮಕ್ಕೊಳಗಾದರು |
ಆ ಪುಣ್ಯವತಿಯರು ಭಕುತಿಪೂರಿತರಾಗಿ |
ಶ್ರೀಪತಿ ರೂಪವ ಸರ್ವತ್ರ ಕಂಡರು ‖ ೨೫ ‖
ದ್ವೇಷದ ನೆವದ ಭಕುತಿಯಿಂದ ಕೆಲವರು |
ದೋಷರಹಿತರಾಗಿ ಸೇರ್ದರು ಗತಿಯ |
ಕಾಷಾಯವಸ್ತು ಸುಧೋದಧಿ * ಸೇರೆ ನಿ | * ಕ್ಷೀರಸಮುದ್ರ
ರ್ದೋಷವಾಗುವಂತೆ ಹರಿ ಕರುಣಿಸಿದ ‖ ೨೬ ‖
ವರ್ಣಾಶ್ರಮಂಗಳ ಧರ್ಮವನಾಚರಿಸಿ |
ಮಾನ್ಯರಿಗೆಲ್ಲ ಮಾದರಿಯಾದನು |
ಇನ್ನೆಷ್ಟು ಪೇಳಲಿ ಗಾರ್ಹಸ್ಥ್ಯ ಧರ್ಮಕ್ಕೆ |
ಕಣ್ಣಾಗಿ ಭೂಭಾರಹರಣ ಕಾರ್ಯಗೈದ ‖ ೨೭ ‖
ಬುದ್ಧನೆನಿಸಿ ಅಪಶುದ್ಧ ದೈತ್ಯರಿಗೆಲ್ಲ |
ಬುದ್ಧಿ ಭ್ರಮಣೆಯನಾಗ ತೋರುವನು |
ಅದ್ಧುವನವರನು ಅಂಧತಾಮಿಸ್ರದಿ |
ಕ್ಷುದ್ರಜನರ ತರಿವ ಕಲ್ಕಿಯೆಂದೆನಿಸಿ ‖ ೨೮ ‖
ಜಯಜಯ ಶ್ರೀಕೃಷ್ಣ ಜಯ ಕೃಷ್ಣ ಜಯಕೃಷ್ಣ |
ಜಯಜಯ ಜಯಜಯ ಶ್ರೀಕೃಷ್ಣ ಜಯಭೋ:
ಜಯಕೃಷ್ಣ ಜಯ ವಿಷ್ಣೋ ಜಯಹರೇ ಜಯಶೌರೆ |
ಜಯ ಭಕ್ತರಂಜನ ಜಯಭವಭಂಜನ ‖ ೨೯ ‖
ಸರ್ವಜ್ಞ ಸರ್ವಸ್ಥ ಸರ್ವಶಕ್ತ ನಿತ್ಯ |
ಸರ್ವಭೋಕ್ತ ಸರ್ವಕಾರ್ಯಕರ್ತ

ಸರ್ವೇಶ್ವರ ಸರ್ವಶ್ರುತಿ ಸ್ಮೃತಿ ಪ್ರತಿಪಾದ್ಯ |
ಸರ್ವೋತ್ತಮ ಹರೇ ಸರ್ವೋತ್ತಮಹರೇ || ೩೦ ||
ಪೂರ್ಣಜ್ಞಾನಾನಂದ ಪೂರ್ಣೈಶ್ವರ್ಯನಮೋ |
ಪೂರ್ಣಪ್ರಭಾತ್ಮನೆ ಪೂರ್ಣತೇಜಾತ್ಮನೆ |
ಪೂರ್ಣಾವಶಿಷ್ಟನೆ ನಮೋ ನಮೋ || ೩೧ ||
ಈ ರೀತಿ ಶುಕಋಷಿ ಈಶಾನುಗ್ರಹಪಾತ್ರ |
ಚೀರುತ್ತೆ ಹಾರುತ್ತೆ ಪರವಶನಾಗಿ |
ಭೂರಮಣ ಕೇಳುಭಾಗವತೋತ್ತಮರ |
ಚಾರುಚರಣ ಭಕ್ತಿ ಮುಕುತಿಗೆ ಯುಕುತಿ || ೩೨ ||
ಮರೆಯಬೇಡ ಕಂಡ್ಯ ಭಾಗವತರನು |
ಹರಿತಾನು ಭಕ್ತರ ಮಾನರಕ್ಷಕನು |
ಸಿರಿಯನ್ನು ಬಿಟ್ಟರು ಭಕ್ತರ ಬಿಡೆನೆಂಬೊ |
ವರಸತ್ಯಸಮ್ಕಲ್ಪ ಸ್ವಭಾವಯುತನು || ೩೩ ||
ಶ್ರೀಮದ್ಭಾಗವತದೊಳಗುಳ್ಳ ಭಕ್ತರ |
ನಾಮವನೆನೆವರ ದುರಿತೌಘದೂರ |
ಆಮಹಾರಾಯರು ಗಜರಾಜ ಪ್ರಹ್ಲಾದ |
ಭೀಮಸೇನಾಕ್ರೂರ ಧ್ರುವ ಬಲಿ ಭರತ || ೩೪ ||
ಉದ್ಧವ ಕುಚೇಲ ಪ್ರದ್ಯುಮ್ನಾದಿಗಳು |
ಶುದ್ಧ ಚಿತ್ತರು ಗೋಪಕುಲದ ಜನಂಗಳು |
ಉದ್ಧಾರಗೊಂಡ ಪಾಂಡವ ಭೀಷ್ಮವಿದುರರು |
ಸಿದ್ಧಾನುಗ್ರಹಿಗಳು ಕೃಷ್ಣಮಹಿಷಿಯರು || ೩೫ ||
ಇವರನ್ನು ನೆನೆವರ ಭವಬಂಧ ಪರಿಹಾರ |
ಇವರ ಸೇವಾಶಕ್ತಿ ಶ್ರೀಹರಿತೃಪ್ತಿ |
ಇವರ ದರುಶನ ಹರಿದರುಶನಕೆ ದಾರಿ |
ಇವರ ಬಿಟವನೇ ಕೆಟ್ಟ ಭ್ರಷ್ಟ || ೩೬ ||
ಹರಿಭಕ್ತಸಂಗದೆ ಶೂದ್ರನು ಋಷಿಯಾದ |
ಹರಿಭಕ್ತಸಂಗದೆ ಚಂಡಾಲಾಮರನಾದ |
ಹರಿಭಕ್ತಸಂಗದೆ ತರಳ ಧ್ರುವನಾದ |
ಹರಿಭಕ್ತರ ಸಂಗ ಲಿಂಗಭಂಗ || ೩೭ ||
ಒಂದೆ ಪದ್ಯದೆ ಸಾರಾಂಶವ ಪೇಳುವೆ |
ಇಂದಿರೆಯರಸನ ಭಕುತಿಯೆ ಭವದ |
ಬಂಧವ ಬಿಡಿಸಲು ದಾರಿಯೆಂದರಿತು |
ಸಂದೇಹಬಿಟ್ಟರೆ ಸಾಕಿದೆಗುಟ್ಟು || ೩೮ ||
ಮಂಗಳ ಶ್ರೀಕಾಂತಕೃಷ್ಣಮೂರುತಿಗೆ |
ಮಂಗಳ ಶ್ರೀಶುಕವರ್ಯನಿಗೆ |
ಮಂಗಳ ಶ್ರೀಪರೀಕ್ಷಿತುರಾಜವರ್ಯಗೆ |
ಮಂಗಳ ಶ್ರೀ ಹರಿದಾಸವರ್ಗಕ್ಕೆ || ೩೯ ||
ಮನದೊಳು ಹರಿವಾಯುಗಳ ಪ್ರೇರಣೆಯಿಂದ |
ಜನಿಸಿದ ಮತಿಯಿಂದ ವಿರಚಿಸಿದ |
ಅನಘ ಅಳಗಿರಿ ದೊರೆಮಹಿಮೆಯೆಂದಿದ |
ಗುಣಿಗಳು ನೋಡಿ ಕೊಂಡಾಡಿ ಪಾಡಿ || ೪೦ ||

**ಸಂಗ್ರಹ**
**ಜಿ.ವಿ. ಪ್ರಭಾಕರ ರಾವ್**




**ಕೆ.ಎಸ್. ವಿಜಯಕುಮಾರ್** ಬಿ.ಎ., ಬಿ.ಎಡ್.

ಸಂಘಟನಾ ಕಾರ್ಯದರ್ಶಿ

ಕರ್ನಾಟಕ ಸರ್ಕಾರದ

ಪಠ್ಯಪುಸ್ತಕ ರಚನಾ ಸಮಿತಿ ಸದಸ್ಯರು

ಜ್ಞಾನ ಆಯೋಗ ಕಣಜ ಸದಸ್ಯರು


## ಶುಭಸಂದೇಶ

**ವ್ಯಾಸಾಯ ಭವನಾಶಾಯ ಶ್ರೀಶಾಯ ಗುಣರಾಶಯೇ ।**
**ಹೃದ್ಯಾಯ ಶುದ್ಧವಿದ್ಯಾಯ ಮಧ್ವಾಯ ಚ ನಮೋ ನಮಃ ॥**

ಶ್ರೀಮತಿ ಶಾಂತಾಮಣಿ ಮತ್ತು ಪ್ರಭಾಕರರಾಯರಿಗೆ ಅಭಿನಂದನೆ, ಸಾಷ್ಟಾಂಗ ನಮಸ್ಕಾರಗಳು.

ಶ್ರೀ ಪ್ರಭಾಕರ ರಾಯರು ಆಧ್ಯಾತ್ಮಿಕ ಜಿಜ್ಞಾಸು, ಚಿಂತಕರು, ಗಾಯಕರು, ವಾಗ್ಮಿಗಳು, ಜ್ಞಾನಸಾಗರವಾದ ಅವರು ದ್ವೈತ ಸಿದ್ಧಾಂತಕ್ಕೆ ಹಲವಾರು ಕೊಡುಗೆಗಳನ್ನು ನೀಡುತ್ತಾ ಬಂದಿರುತ್ತಾರೆ. ಅನೇಕ ಪತ್ರಿಕೆಗಳಲ್ಲಿ ವಿಚಾರಪೂರ್ಣ ಲೇಖನಗಳು ಅತ್ಯಂತ ಪರಿಣಾಮಕಾರಿಯಾಗಿ ಯುವಕರಲ್ಲಿ ಧರ್ಮ ಜಾಗೃತಿ ಮೂಡಿಸುತ್ತಿದೆ. ಈಗ ಶ್ರೀರಾಯರಿಂದ ಮಧ್ವ ಸಿದ್ಧಾಂತದ ಸ್ತೋತ್ರ ಸಂಗ್ರಹ ಹೊರಬರುತ್ತಿರುವುದು ಅತ್ಯಂತ ಸಂತೋಷಕರವಾದದ್ದು. ಹರಿವಾಯುಗಳು ಇನ್ನೂ ಹೆಚ್ಚು ಸತ್ಕಾರ್ಯಗಳನ್ನು ಇವರ ಮೂಲಕ ನಡೆಸಲಿ. ಮುಂದಿನ ಪೀಳಿಗೆಗೆ ಇವರ ಕಾಣಿಕೆ ಅನುಕರಣೀಯ ಆದರ್ಶವಾಗಿರುತ್ತದೆ.

**ಆಚಾರ್ಯಃ ಪವನೋಸ್ಮಾಕಂ ಆಚಾರ್ಯಣೀಚ ಭಾರತೀ।**
**ದೇವೋ ನಾರಾಯಣಃ ಶ್ರೀಶಃ ದೇವೀ ಮಂಗಲದೇವತಾ॥**

**ಇಂತಿ**

ಬೆಂಗಳೂರು
13-05-2012

**ಕೆ. ಎಸ್. ವಿಜಯಕುಮಾರ್**

## ಮಧ್ವಾಚಾರ್ಯ

ಪಯಸ್ವಿನೀ ನದಿಯ ತೀರದಿಂದ ಶುಕ್ತಿಮತಿ ನದಿಯ ತೀರದವರೆಗಿರುವ ಮೂವತ್ತೆರಡು ಗ್ರಾಮದಲ್ಲಿ ಶಿವಹಳ್ಳಿಯೂ ಒಂದು ಗ್ರಾಮ. ಅಲ್ಲಿನ ನೂರಿಪ್ಪತ್ತು ಕುಲಗಳಲ್ಲಿ ನಡು ಮನೆಯವರು ಮದ್ಯಗೇಹಭಟ್ಟರು. ಇವರು ಉಡುಪಿಯಿಂದ ಎಂಟು ಮೈಲಿ ದೂರದಲ್ಲಿರುವ ಪಾಜಕ ಕ್ಷೇತ್ರಕ್ಕೆ ಬಂದು ನೆಲೆಸಿದರು. ಅವರ ಪತ್ನಿ ವೇದಾವತಿ ಪಾಜಕದಲ್ಲಿದ್ದರೂ ಆಗಾಗ್ಗೆ ಉಡುಪಿಗೆ ಬಂದು ಅನಂತ ಪದ್ಮನಾಭದೇವರ ಸಂದರ್ಶನ ಮಾಡುತ್ತಿದ್ದರು. ಸಂತೃಪ್ತ ಜೀವನ ನಡೆಸುತ್ತಿದ್ದ ಇವರಿಗೆ ಗಂಡು ಮಕ್ಕಳಿಲ್ಲವೆಂಬ ಕೊರತೆಯೊಂದು ಭಾದಿಸುತ್ತಿತ್ತು. ಗುರುಹಿರಿಯರ ಸಲಹೆಯಂತೆ ಅನಂತ ಪದ್ಮನಾಭನನ್ನು ಆರಾಧಿಸಿದರು.

ಶಿವಳ್ಳಿ ಗ್ರಾಮದ ಅನಂತನ ದೇವಾಲಯದಲ್ಲಿ ಮಕರ ಸಂಕ್ರಮಣದ ಅಂಗವಾಗಿ ರಥೋತ್ಸವ ನಡೆಯುತ್ತಿತ್ತು. ಆಗ ಯಾರೋ ಒಬ್ಬ ದೇವಾಲಯದ ಮುಂದಿದ್ದ ದೊಡ್ಡ ಗರುಡ ಗಂಬವನ್ನು ಹತ್ತಿ ನಿಂತು ಅದರ ಮೇಲೆ ನರ್ತಿಸಲು ಶುರು ಮಾಡಿದ. ಎಲ್ಲರೂ ಆಶ್ಚರ್ಯದಿಂದಿದ್ದಾಗ ಭಕ್ತರೇ ಕೇಳಿ, ಸಧ್ಯದಲ್ಲೇ ಮಹಾನುಭಾವರೊಬ್ಬರು ಹುಟ್ಟುವರು. ಅವರಿಂದ ಲೋಕಕ್ಕೆ ಮಹದುಪಕಾರವಾಗುವುದು. ಉಡುಪಿಯ ಕೀರ್ತಿ ಹಬ್ಬುವುದು ಜೋರಾಗಿ ಹೇಳಿದ.

ಅವನ ಮಾತು ಸುಳ್ಳಾಗಲಿಲ್ಲ. ವೇದಾವತಿ ಗಂಡು ಮಗುವನ್ನು ಹೆತ್ತಳು. ಕ್ರಿಸ್ತಶಕ ೧೨೩೮ನೇ ಇಸವಿಯಲ್ಲಿ ವಿಜಯದಶಮಿಯಂದು ಮಧ್ಯಾಹ್ನ ಮಧ್ವಾಚಾರ್ಯರ ಜನನವಾಯಿತು. ಮಗುವಿಗೆ ವಾಸುದೇವನೆಂದು ಹೆಸರಿಟ್ಟರು.

### ಬಾಲ್ಯ

ವೇದಾವತಿ ಸಾಮಾನ್ಯವಾಗಿ ಮಗುವನ್ನು ಬಿಟ್ಟು ಎಲ್ಲಿಯೂ ಹೋಗುತ್ತಿರಲಿಲ್ಲ. ಒಂದು ದಿನ ಹೋಗಲೇಬೇಕಾದ ಸಂದರ್ಭ ಒದಗಿ

ಬಂತು. ಮಗುವಿಗೆ ಹಾಲು ಕುಡಿಸಿ ಮಗಳನ್ನು ಮಗುವಿನ ಜೊತೆಯಲ್ಲೇ ಇರಲು ಹೇಳಿ ಹೊರಟಳು. ತಾಯಿ ಹೋದ ಸ್ವಲ್ಪ ಹೊತ್ತಿನಲ್ಲಿಯೇ ಮಗು ಅಳಲು ಶುರು ಮಾಡಿತು. ಹುಡುಗಿ ಏನು ಮಾಡಿದರೂ ಅಳು ನಿಲ್ಲಿಸಲಿಲ್ಲ. ಒಂದೇ ಸಮನೆ ಹಠ ಮಾಡತೊಡಗಿತು. ಹೋದ ತಾಯಿಯೂ ಬರಲಿಲ್ಲ. ಮಗುವೂ ಅಳು ನಿಲ್ಲಿಸಲಿಲ್ಲ. ಮಗುವಿಗೆ ಹಸಿವೆಯೇನೋ ಎಂದುಕೊಂಡಳು. ಆದರೆ ಮಾಡುವುದೇನು. ಮನೆಯಲ್ಲಿ ಮಗುವಿಗೆ ತಿನ್ನಿಸಲೇನೂ ಇರಲಿಲ್ಲ. ಬೇರೆ ದಾರಿ ಕಾಣದೇ ಎತ್ತುಗಳಿಗೆಂದು ಬೇಯಿಸಿಟ್ಟಿದ್ದ ಹುರುಳಿಯನ್ನು ಕೊಂಚ ತಂದು ತಿನ್ನಿಸಿದಳು. ಮಗು ಸಂತೋಷದಿಂದ ತಿಂದಿತು. ತಿನ್ನಿಸುವುದನ್ನು ನಿಲ್ಲಿಸಿದಾಗ ಮತ್ತೆ ಜೋರಾಗಿ ಅಳಲು ಶುರುಮಾಡಿತು. ಹುಡುಗಿ ವಿಧಿಯಿಲ್ಲದೇ ತಿನ್ನಿಸುತ್ತಲೇ ಹೋದಳು. ಮಗು ತಿನ್ನುತ್ತಲೇ ಇತ್ತು. ದೊಡ್ಡವರೂ ತಿನ್ನಲಾಗದಷ್ಟು ಹುರುಳಿಯನ್ನು ತಿಂದು ಮುಗಿಸಿದರೂ ಇನ್ನೂ ಕೇಳುತ್ತಲೇ ಇತ್ತು.

ತುಂಬಾ ಹೊತ್ತಾದ್ದರಿಂದ ಮಗು ಅಳುತ್ತಿರಬಹುದೆಂದುಕೊಂಡು ಓಡೋಡಿ ಬಂದ ವೇದಾವತಿಗೆ ನಗುತ್ತಾ ಮಲಗಿರುವ ಮಗುವನ್ನು ಕಂಡು ಆಶ್ಚರ್ಯವಾಯಿತು. ಮಗು ಹುರುಳಿ ತಿಂದದ್ದನ್ನು ಕೇಳಿ ಗಾಬರಿಯಾಯಿತು. ಮಗುವಿಗೆ ಏನಾಗುವುದೋ ಎಂದು ಆತಂಕಪಟ್ಟಳು. ಓಡಿ ಹೋಗಿ ಮಧ್ಯಗೇಹ ಭಟ್ಟರಿಗೂ ವಿಷಯ ತಿಳಿಸಿದಳು. ಆದರೆ ಮಗುವಿಗೆ ಏನೂ ಆಗಲಿಲ್ಲ. ಹಾಲುಗಲ್ಲದ ಹಸುಳೆ ಹುರುಳಿಯನ್ನು ಅರಗಿಸಿಕೊಂಡಿತು. ಆಶ್ಚರ್ಯಗೊಂಡ ತಾಯಿ ಇದು ಸಾಮಾನ್ಯ ಮಗುವಲ್ಲ ಎಂದುಕೊಂಡಳು.

ವಾಸುದೇವ ಬೆಳೆದು ಹೆಜ್ಜೆಯಿಡಲು ಪ್ರಾರಂಭಿಸಿದ. ಒಂದು ದಿನ ದನಕಾಯುವವರು ದನಗಳನ್ನು ಅಟ್ಟಿಕೊಂಡು ಹೊರಟಾಗ ಇವನೂ ಜೊತೆಯಲ್ಲಿ ಹೊರಟು ಬಿಟ್ಟಿದ್ದಾನೆ. ಭಾರಿ ಗಾತ್ರದ ಎತ್ತಿನ ಬಾಲವನ್ನು ಬಿಗಿಯಾಗಿ ಹಿಡಿದುಕೊಂಡು ನೇತಾಡುತ್ತಾ ಇದ್ದಾನೆ. ಮಗು ಕಾಣಲಿಲ್ಲವೆಂದು ತಂದೆತಾಯಿಗಳು ಎಲ್ಲಾ ಕಡೆಯೂ ಹುಡುಕಿದರು. ಸಾಯಂಕಾಲವಾದರೂ ಮಗು ಸಿಕ್ಕದಿದ್ದಾಗ ಕಂಗಾಲಾದರು. ಒಬ್ಬ ದನಕಾಯುವವನು ಮಗು ಭಾರೀ ಗಾತ್ರದ ಎತ್ತೊಂದರ ಬಾಲ ಹಿಡಿದುಕೊಂಡು ನೇತಾಡುತ್ತಿದ್ದನೆಂದು ಹೇಳಿದಾಗ ಯಾರೂ ನಂಬಲಿಲ್ಲ. ಸಂಜೆ ದನಗಳು ಬಂದಾಗ ಇನ್ನೂ ಎತ್ತಿನ ಬಾಲ ಹಿಡಿದುಕೊಂಡೇ ನೇತಾಡುತ್ತಿದ್ದ ವಾಸುದೇವನನ್ನು ಕಂಡು ಸಂತೋಷವಾಯಿತು. ಬೆಳಗಿನಿಂದ ಸಂಜೆಯವರೆಗೆ ಎತ್ತಿನ ಬಾಲ ಹಿಡಿದು ನೇತಾಡುತ್ತಲೇ ಇದ್ದ ಮಗನನ್ನು ಕಂಡು ಆಶ್ಚರ್ಯವಾಯಿತು.

ಒಂದು ದಿನ ಪುಟ್ಟ ವಾಸುದೇವ ಆಟವಾಡುತ್ತಿದ್ದಾಗ ಮಧ್ಯಗೇಹಭಟ್ಟರ ಬಳಿ ಒಬ್ಬ ಸಾಲಗಾರ ಬಂದು ಎತ್ತುಕೊಂಡ ಹಣ ಕೊಡಲೇಬೇಕೆಂದು ಹಠ ಹಿಡಿದ. ಭಟ್ಟರು ಎಷ್ಟು ಸಮಾಧಾನ ಮಾಡಿದರೂ ಕೇಳಲಿಲ್ಲ. ಹಣವಿಲ್ಲದೆ ಹೊರಡುವುದಿಲ್ಲವೆಂದು ಪಟ್ಟು ಹಿಡಿದು ಕೂತ. ಆಗ ವಾಸುದೇವ ತಾನು ಆಟವಾಡುತ್ತಿದ್ದ ಹುಣಸೇ ಬೀಜಗಳನ್ನೇ ಅವನಿಗೆ ಎಣಿಸಿಕೊಟ್ಟ. ಅವನು ಎಣಿಸಿಕೊಂಡು ತೃಪ್ತನಾಗಿ ಹೋದ. ಭಟ್ಟರಿಗೆ ಆಶ್ಚರ್ಯವಾದರೂ ಸಧ್ಯ ಎನಿಸಿತು. ಮುಂದೆ ಹಣ ಒದಗಿದ ಕೂಡಲೇ ಭಟ್ಟರು ಸಾಲ ತೀರಿಸಲು ಹೋದರು. ಆದರೆ ಸಾಲಗಾರ ನಿಮ್ಮ ಮಗ ಅಂದೇ ಕೊಟ್ಟಾಯಿತಲ್ಲ ಎಂದು ಹಣ ಬೇಡವೆಂದ. ಕೊಟ್ಟಿದ್ದು ಹುಣಸೇ ಬೀಜ. ಸಾಲ ಹೇಗೆ ತೀರಿತು. ಭಟ್ಟರಿಗೆ ಅರ್ಥವಾಗಲಿಲ್ಲ. ವಾಸುದೇವ ಕೊಟ್ಟ ಹುಣಸೇಬೀಜ ಚಿನ್ನವಾದದ್ದು ಅವರಿಗೆ ತಿಳಿದಿರಲಿಲ್ಲ.

ಒಮ್ಮೆ ಭಟ್ಟರು ಸಂಸಾರ ಸಮೇತ ಮದುವೆ ಸಮಾರಂಭವೊಂದರಲ್ಲಿ ಭಾಗವಹಿಸಲು ಹೋಗಿದ್ದರು. ಆಟವಾಡುತ್ತಿದ್ದ ವಾಸುದೇವ ಹೊರಗೆ ಹೋದದ್ದು ಮದುವೆ ಗದ್ದಲದಲ್ಲಿ ಯಾರಿಗೂ ತಿಳಿಯಲಿಲ್ಲ. ಹೊರಟ ವಾಸುದೇವ ಮೊದಲು ಕೊಡವೂರಿನ ಶಂಕರನಾರಾಯಣ ದೇವಾಲಯಕ್ಕೆ ಹೋಗಿ ನಮಸ್ಕರಿಸಿ, ಅಲ್ಲಿಂದ ಬನ್ನಂಜೆಯಲ್ಲಿ ನಾರಾಯಣ ದೇವಾಲಯಕ್ಕೆ ಹೋಗಿ ನಮಸ್ಕರಿಸಿ, ನಂತರ ರಜತ ಪೀಠಕ್ಕೆ ಬಂದನು. ನಂತರ ಚಂದ್ರೇಶ್ವರ ಮತ್ತು ಅನಂತಾಸನ ದೇವರಿಗೆ ನಮಸ್ಕರಿಸಿದ. ಇತ್ತ ಮದುವೆ ಮನೆಯಲ್ಲಿ ಮಗುವನ್ನು ಕಾಣದೇ ತಂದೆ-ತಾಯಿ ಕಂಗಾಲಾದರು. ಕಂಡ ಕಂಡವರನ್ನೆಲ್ಲಾ ವಿಚಾರಿಸಿದ ಭಟ್ಟರು ಕಡೆಗೆ ವಾಸುದೇವನಿದ್ದ ಕಡೆ ಬಂದರು. ಮಗುವನ್ನು ಕಂಡೊಡನೆ ಅವರಿಗೆ ಹೋದ ಜೀವ ಬಂದಂತಾಯಿತು. ಮಗು ನೀನು ಒಬ್ಬನೇ ಹೇಗೆ ಬಂದೆ ದಾರಿಯಲ್ಲಿ ಭಯವಾಗಲಿಲ್ಲವೇ ಕೇಳಿದರು.

ಅಪ್ಪ, ನಾನು ಮದುವೆ ಮನೆಯಿಂದ ಕೊಡವೂರಿಗೆ ಬಂದೆ. ಅಲ್ಲಿಂದ ಬನ್ನಂಜೆಗೆ ಅಲ್ಲಿಯವರೆಗೆ ಶಂಕರನಾರಾಯಣ ರಕ್ಷಿಸಿದರು. ರಜತ ಪೀಠಕ್ಕೆ ಬರುವವರೆಗೆ ಬನ್ನಂಜೆ ದೇವರು ರಕ್ಷಿಸಿದರು. ಆಮೇಲೆ ಅನಂತಾಸನ ದೇವರು ರಕ್ಷಿಸಿದರು. ಇನ್ನು ಭಯವೇಕೆ, ಎಲ್ಲಿಗೆ ಹೋದರೂ ಏನು ಮಾಡಿದರೂ ಭಗವಂತ ಕಾಪಾಡುತ್ತಾನೆ ಅಲ್ಲವೇ ಹೇಳಿದ ವಾಸುದೇವ.

ಮಗನ ಮಾತು ಕೇಳಿ ಭಟ್ಟರು ಮೂಕರಾಗಿ ಹೋದರು.

## ಅಧ್ಯಯನ

ಒಳ್ಳೆಯ ಮುಹೂರ್ತ ನೋಡಿ ವಾಸುದೇವನಿಗೆ ಅಕ್ಷರಾಭ್ಯಾಸ ಮಾಡಿಸಿದರು. ಬಾಲಕ ಏಕಾಗ್ರಹಿ. ಅಂದರೆ ಒಂದು ಸಲ ಕೇಳಿದರೆ ಸಾಕು ಕಲಿತು ಬಿಡುತ್ತಿದ್ದ. ಹೇಳಿದ್ದನ್ನೇ ಮತ್ತೆ ಹೇಳಿ ಕೊಡುತ್ತಿದ್ದ ತಂದೆಯನ್ನು ಅಪ್ಪಾ ನಿನ್ನೆ ಕಲಿಸಿದುದನ್ನೇ ಮತ್ತೆ ಈ ದಿನವೂ ಏಕೆ ಕಲಿಸುತ್ತಿದ್ದೀಯೆ ಹೊಸದನ್ನು ಕಲಿಸು ಎಂದು ಕೇಳುತ್ತಿದ್ದನು. ಮಗನ ಪ್ರತಿಭೆಯನ್ನು ಕಂಡು ಭಟ್ಟರಿಗೆ ಸಂತೋಷವಾದರೂ ದೃಷ್ಟಿದೋಷವಾದೀತೆಂದು ರಹಸ್ಯವಾಗಿ ಪಾಠ ಹೇಳಿಕೊಡುತ್ತಿದ್ದರು.

ಐದನೇ ವರ್ಷದಲ್ಲೇ ಉಪನಯನ ಮಾಡಿದರು. ಆದರ್ಶ ಬ್ರಹ್ಮಚಾರಿ ಎನಿಸಿಕೊಂಡಿದ್ದ ವಾಸುದೇವ ಒಮ್ಮೆ ಸಂಗಡಿಗರೊಡನೆ ದುರ್ಗಬೆಟ್ಟದಿಂದಿಳಿದು ಬರುತ್ತಿದ್ದಾಗ ಘಟಸರ್ಪವೊಂದು ಎಲ್ಲರನ್ನೂ ಹೆದರಿಸುತ್ತಾ ಅಡ್ಡಗಟ್ಟಿತ್ತು. ಎಲ್ಲರೂ ಬೆದರಿದರು. ಆದರೆ ವಾಸುದೇವ ಅದನ್ನು ತನ್ನ ಕಾಲಿನಿಂದಲೇ ಮೆಟ್ಟಿ, ಕೊಂದುಬಿಟ್ಟ.

ತೋಟಂತಿಲ್ಲಾಯರೆಂಬ ಗುರುಗಳ ಬಳಿ ವೇದ, ಉಪನಿಷತ್ತುಗಳನ್ನು ಓದಿ ಕಲಿತುಕೊಂಡ. ಒಮ್ಮೆ ಗುರುಗಳು ಐತರೇಯೋಪನಿಷತ್ತಿನ ಪಾಠ ಮಾಡುತ್ತಿದ್ದಾಗ ವಾಸುದೇವ ತನಗೆ ಗೊತ್ತಿರುವಂತೆ ವಿವರಿಸಿದ. ಅದನ್ನು ಕೇಳಿದ ಗುರುಗಳಿಗೆ ಇವನಿಗೆ ಕಲಿಸುವುದಾದರೂ ಏನಿದೆ ಎನಿಸಿತು.

ಗುರುಗಳಿಗೆ ಒಮ್ಮೆ ನೀರಿನ ಅಭಾವ ಉಂಟಾಯಿತು. ಏನು ಮಾಡುವುದೆಂದು ಚಿಂತಿಸುತ್ತಿದ್ದಾಗ ವಾಸುದೇವ ತನ್ನ ದಂಡದಿಂದ ಕೊರೆದು ನೀರು ಬರಿಸಿದ. ಅದೇ ದೊಡ್ಡ ಜಲಾಶಯವಾಗಿ ದಂಡ ತೀರ್ಥವೆಂದು ಪ್ರಸಿದ್ಧವಾಗಿದೆ. ಪರ್ಯಾಯ ಪೀಠವನ್ನೇರುವ ಮುನ್ನ ಗುರುಗಳು ದಂಡ ತೀರ್ಥದಲ್ಲಿ ಸ್ನಾನ ಮಾಡಿಕೊಂಡು ಬರುವುದು ಪದ್ಧತಿಯಾಗಿದೆ.

## ಸನ್ಯಾಸ

ಹುಟ್ಟು, ಸಾವು, ರೋಗ, ರುಜಿನ ಬಡತನಗಳ ಮಧ್ಯೆ ಜನ ಭಗವಂತನನ್ನೇ ಮರೆಯುತ್ತಿದ್ದರು. ಇತರ ಮತಗಳ ಪ್ರಭಾವದಿಂದ ವೈದೀಕ ಧರ್ಮ ನಶಿಸಿ ಹೋಗುತ್ತಿತ್ತು. ವಾಸುದೇವನಿಗೆ ಇದನ್ನೆಲ್ಲ ಕಂಡು ಸುಮ್ಮನಿರಲು ಸಾಧ್ಯವಾಗಲಿಲ್ಲ. ವೈದೀಕ ಧರ್ಮದಲ್ಲಿ ಜನರಿಗೆ ಶ್ರದ್ಧೆ, ದೈವಭಕ್ತಿ ಮರಳಿ ಬರಲು ಏನಾದರೂ ಮಾಡಲೇಬೇಕೆಂದು ನಿಶ್ಚಯ ಮಾಡಿದ. ಆದರೆ ತಾನಿನ್ನೂ ಯುವಕ. ಯುವಕನೊಬ್ಬನ ಮಾತಿಗೆ ಜನ ಬೆಲೆ ಕೊಡುತ್ತಾರೆಯೇ. ಅದೇ ತಾನು ಗುರುಸ್ಥಾನದಲ್ಲಿದ್ದರೆ ತನ್ನ ಮಾತಿಗೆ ಬೆಲೆ ಬಂದೇ ಬರುತ್ತದೆ ಎನಿಸಿತು. ಅಲ್ಲದೇ ವಾಸುದೇವನಿಗೆ ಮದುವೆ, ಮಕ್ಕಳು ಮುಂತಾದ ಪ್ರಾಪಂಚಿಕ ವ್ಯವಹಾರದಲ್ಲಿ ಆಸಕ್ತಿಯಿರಲಿಲ್ಲ. ಆದ್ದರಿಂದ ಸನ್ಯಾಸ ಸ್ವೀಕರಿಸಲು ನಿರ್ಧರಿಸಿದ. ಎಲ್ಲೆಡೆಯೂ ಇರುವ ಭಗವಂತನ ಅಪ್ಪಣೆ ಪಡೆಯಲು ತನ್ನ ತಂಬಿಗೆ, ಕೊಡ, ಪೆಟ್ಟಿಗೆ, ಪುಸ್ತಕಗಳಿಗೆಲ್ಲ ನಮಸ್ಕರಿಸಿದ. ಇದನ್ನು ಕಂಡ ಭಟ್ಟರು ಬೆರಗಾಗಿ ಕಾರಣ ಕೇಳಿದರು.

ನನ್ನ ವಸ್ತುಗಳಿಗೆ ನಾನು ನಮಸ್ಕರಿಸುತ್ತಿದ್ದೇನೆ ಅಷ್ಟೇ ಹೇಳಿದ ವಾಸುದೇವ.

ಸನ್ಯಾಸ ಸ್ವೀಕರಿಸಲು ನಿರ್ಧರಿಸಿದ ಮೇಲೆ ಗುರುಗಳನ್ನು ಹುಡುಕಿಕೊಂಡು ಹೊರಟ. ಅಚ್ಯುತ ಪ್ರೇಕ್ಷಾಚಾರ್ಯರೆಂಬ ಯತಿಗಳ ಬಳಿ ಶಿಷ್ಯನಾಗಲು ನಿಶ್ಚಯಿಸಿ ಅವರ ಬಳಿ ಹೋದ. ನೋಡುತ್ತಲೇ ಶಿಷ್ಯನ ಬಗ್ಗೆ ಅಭಿಮಾನ ತಾಳಿದ ಅಚ್ಯುತರು ವಾಸುದೇವನನ್ನು ಆದರದಿಂದ

ಬರಮಾಡಿಕೊಂಡರು. ವಾಸುದೇವ ತನಗೆ ಸನ್ಯಾಸ ದೀಕ್ಷೆ ಕೊಡಬೇಕೆಂದು ಕೇಳಿಕೊಂಡರು.

ಇತ್ತ ಮನೆಯಲ್ಲಿ ವಾಸುದೇವನನ್ನು ಕಾಣದೇ ಚಿಂತೆಯಿಂದಿದ್ದ ಭಟ್ಟರಿಗೆ ಮಗ ಸನ್ಯಾಸಿಯಾಗುತ್ತಿದ್ದಾನೆಂದು ತಿಳಿದು, ಕಂಗಾಲಾಗಿ ಓಡಿಬಂದರು. ಮಗನ ಮನಸ್ಸು ಬದಲಾಯಿಸಲು ಸಾಧ್ಯವಾಗದಾದಾಗ ಇರುವವನು ನೀನು ಒಬ್ಬ ಮಗ, ನೀನೂ ಸನ್ಯಾಸ ಸ್ವೀಕರಿಸಿದರೆ ನಮ್ಮ ಗತಿಯೇನು. ನಮ್ಮ ಕೈಬಿಡಬೇಡ ಎಂದು ಕೇಳಿಕೊಂಡು ಅವನಿಗೆ ನಮಸ್ಕರಿಸಿದರು.

ಅಪ್ಪಾ, ಮಗನಿಗೆ ನಮಸ್ಕರಿಸುವುದೆಂದರೇನು. ನಾನು ಸನ್ಯಾಸಿಯಾದರೆ ಮಾತ್ರ ನಮ್ಮ ಸಂಬಂಧ ಕಡಿದು, ನಮಸ್ಕಾರಕ್ಕೆ ಅರ್ಹನಾಗುತ್ತೇನೆ. ನೀವು ನಮಸ್ಕರಿಸಿದುದನ್ನು ನೋಡಿದರೆ ನಾನು ಸನ್ಯಾಸಿಯಾಗಬೇಕೆಂಬುದು ದೈವೇಚ್ಛೆಯೆಂದು ಕಾಣುತ್ತದೆ. ಆದರೂ ಚಿಂತಿಸಬೇಡಿ. ನಿಮ್ಮನ್ನು ನೋಡಿಕೊಳ್ಳಲು ಇನ್ನೊಬ್ಬ ಮಗ ಹುಟ್ಟುತ್ತಾನೆ. ನಂತರ ನಾನು ಸನ್ಯಾಸ ಸ್ವೀಕರಿಸುತ್ತೇನೆ ಹೇಳಿದ.

ಕೆಲವು ಕಾಲದ ನಂತರ ಭಟ್ಟರ ಎರಡನೆಯ ಮಗ ಹುಟ್ಟಿದ. ಈಗ ವಾಸುದೇವನಿಗೆ ಸನ್ಯಾಸಕ್ಕೆ ಅನುಮತಿ ಕೊಡದಿರಲು ಸಾಧ್ಯವೇ ಇರಲಿಲ್ಲ. ಭಟ್ಟರು ಮತ್ತು ವೇದಾವತಿ ಮನಸ್ಸಿಲ್ಲದಿದ್ದರೂ ಬೇರೆ ದಾರಿಯಿಲ್ಲದೇ ವಾಸುದೇವನಿಗೆ ಸನ್ಯಾಸ ಸ್ವೀಕರಿಸಲು ಅನುಮತಿಯನ್ನಿತ್ತರು. ಅಚ್ಯುತ ಪ್ರೇಕ್ಷರು ವಾಸುದೇವನಿಗೆ ಸನ್ಯಾಸ ದೀಕ್ಷೆ ನೀಡಿ, ಪೂರ್ಣಪ್ರಜ್ಞನೆಂಬ ಹೆಸರಿಟ್ಟರು. ಅವರಿಗೆ ವೇದ ಪ್ರತಿಪಾದ್ಯವಾಗಿ ಮಧ್ವರೆಂಬ ಹೆಸರು ಬಂದಿತು. ಪೂರ್ಣಪ್ರಜ್ಞರು ಅಚ್ಯುತ ಪ್ರೇಕ್ಷಕ ಶಿಷ್ಯರಾದರು. ಅವರಿಗೆ ಗಂಗಾಸ್ನಾನ ಮಾಡಬೇಕೆಂದು ಆಸೆಯಾಯಿತು. ಆದರೆ ಅವರನ್ನು ಕೂಡಲೇ ಕಳುಹಿಸಲು ಗುರುಗಳು ಒಪ್ಪಲಿಲ್ಲ. ಪೂರ್ಣಪ್ರಜ್ಞರಿಗೆ ಏನು ಮಾಡುವುದೆಂದು ತೋಚಲಿಲ್ಲ. ದೇವರೇ ಪರಿಹರಿಸಿದ. ಗಂಗೆಯೇ ಹತ್ತಿರದ ಸರೋವರಕ್ಕೆ ಪ್ರತಿ ಹನ್ನೆರಡು ವರ್ಷಗಳಿಗೊಮ್ಮೆ ಗಂಗೆ ಬರುವಳೆಂದು ಪ್ರತೀತಿ.

## ಯಾತ್ರೆ

ಆಚಾರ್ಯರ ವ್ಯಾಸಂಗ ಕ್ರಮ ಅದ್ಭುತವಾಗಿತ್ತು. ಕೇವಲ ನಲವತ್ತೈದು ದಿನಗಳಲ್ಲಿ ತರ್ಕಶಾಸ್ತ್ರ ಕಲಿತು ನಿಪುಣರಾಗಿ ಮಹಾವಿದ್ವಾಂಸರಾದ ವಾಸುದೇವ ಪಂಡಿತರನ್ನು ಸೋಲಿಸಿದರು. ಸಂತೋಷಭರಿತರಾದ ಗುರು ಅನಂತ ಪ್ರೇಕ್ಷಚಾರ್ಯರು ಪೂರ್ಣಬೋಧರನ್ನು ತಮ್ಮ ಪಟ್ಟ ಶಿಷ್ಯರನ್ನಾಗಿ ಮಾಡಿಕೊಂಡರು. ಇವರು ಆನಂದಕರವಾದ ಸತ್ಸಂಪ್ರದಾಯ ಪಾಲಿಸುತ್ತಾ ಆನಂದ ಸ್ವರೂಪಿಯಾದ ಪರಮಾತ್ಮನನ್ನೇ ಸದಾ ಧ್ಯಾನಿಸುತ್ತಿದ್ದರಿಂದ ಗುರುಗಳು ಇವರನ್ನು ಆನಂದತೀರ್ಥ ಎಂದು ಕರೆದರು. ಮಧ್ವಾಚಾರ್ಯರು ವಾದಿಸಿಂಹ ಬುದ್ಧಿಸಾಗರ ಮೊದಲಾದ ವಿದ್ವಾಂಸರನ್ನು ಸೋಲಿಸಿದರು.

ಆಚಾರ್ಯರು ದಕ್ಷಿಣ ದೇಶಯಾತ್ರೆ ಕೈಕೊಂಡರು. ಶಿಷ್ಯ ಸಮೇತರಾಗಿ ವಿಷ್ಣು ಮಂಗಲ ದೇವಾಲಯದಲ್ಲಿ, ನಂತರ ಅನಂತಶಯನ ಕ್ಷೇತ್ರದಲ್ಲಿ ಉಪದೇಶ ನೀಡಿದರು. ನಂತರ ಕನ್ಯಾಕುಮಾರಿಯವರೆಗೂ ಹೋಗಿ ರಾಮೇಶ್ವರದಲ್ಲಿ ಮತ್ತು ಶ್ರೀರಂಗದಲ್ಲಿ ವಿದ್ವಾಂಸರೊಡನೆ ವಾದ ಮಾಡಿದರು. ಭಕ್ತರಿಗೆ ಉಪದೇಶ ನೀಡಿದರು. ವೇದಗಳಿಗೆ ಮೂರು ವಿಧ ಅರ್ಥ, ಮಹಾಭಾರತಕ್ಕೆ ಹತ್ತು ವಿಧ ಅರ್ಥ ಮತ್ತು ವಿಷ್ಣು ಸಹಸ್ರನಾಮಕ್ಕೆ ಹತ್ತು ವಿಧ ಅರ್ಥವಾಗುವಂತೆ ವಿವರಿಸಿದರು. ನಂತರ ಕೇರಳದ ವಿದ್ವತ್ ಸಭೆಗೆ ಹೋಗಿ ಮಹಾವಿದ್ವಾಂಸರನ್ನೆಲ್ಲ ಗೆದ್ದು, ದ್ವೈತ ಸಿದ್ಧಾಂತ ಬೋಧಿಸಿದರು.

ಮಹಾಭಾಷ್ಯಾದಿ ಗ್ರಂಥಗಳನ್ನು ರಚಿಸ ಬಯಸಿದ ಮಧ್ವಾಚಾರ್ಯರು ಪ್ರಾರಂಭಿಸುವ ಮುನ್ನ ಪೂಜ್ಯರಾದ ವೇದವ್ಯಾಸರನ್ನು ಸಂದರ್ಶಿಸಿ, ಅವರ ಆಶೀರ್ವಾದ ಪಡೆಯುವುದು ಉಚಿತವೆಂದುಕೊಂಡು ಬದರಿಗೆ ಪ್ರಯಾಣ ಮಾಡಲು ಉದ್ದೇಶಿದರು. ಹೊರಡುವ ಮುನ್ನ ಭಗವದೀತೆಗೆ ಭಾಷ್ಯ ಬರೆದು ಗುರುಗಳಿಗೆ ಅರ್ಪಿಸಿದರು. ಗುರುಗಳ ಅನುಮತಿ ಪಡೆದು ಬದರಿಗೆ ಪ್ರಯಾಣ ಬೆಳೆಸಿದರು. ಬದರಿಯಲ್ಲಿ ಶಿಷ್ಯರನ್ನು ಬಿಟ್ಟು ವೇದವ್ಯಾಸರ ಆಶ್ರಮವಿರುವ

ಬದರಿಕಾಶ್ರಮಕ್ಕೆ ಒಬ್ಬರೇ ಹೊರಟರು. ವೇದವ್ಯಾಸರನ್ನು ಭೇಟಿಯಾಗಿ ಅವರೊಡನೆ ಶ್ರೀ ನಾರಾಯಣ ದೇವರನ್ನು ಸಂದರ್ಶನ ಮಾಡಿದರು.

ಜನಗಳು ವೇದ, ಪುರಾಣ, ಸ್ಮೃತಿ, ಉಪನಿಷತ್ತುಗಳ ನಿಜವಾದ ಅರ್ಥ ಅರಿಯದವರಾಗಿದ್ದಾರೆ. ಇವುಗಳಿಗೆ ಒಂದಕ್ಕೊಂದು ಸರಿಯಾಗಿ ಹೋಲಿಕೆಯಿರುವಂತೆ ಉತ್ತಮವಾದ ಶಾಸ್ತ್ರ ರಚಿಸು ಎಂದು ನಾರಾಯಣ ದೇವರು ಮತ್ತು ವೇದವ್ಯಾಸರು ಆದೇಶಿಸಿದರು. ನಂತರ ಮಧ್ವಾಚಾರ್ಯರು ಬದರಿಯ ಅನಂತ ಮಠದಲ್ಲಿ ಬ್ರಹ್ಮ ಸೂತ್ರಗಳಿಗೆ ಭಾಷ್ಯವನ್ನು ಬರೆದರು.

ಮರಳಿ ಬರುತ್ತಾ ಗೋದಾವರಿ ನದಿ ತೀರದಲ್ಲಿ ನಡೆಯುತ್ತಿದ್ದ ಮಹಾತತ್ವಜ್ಞಾನ ಸಮ್ಮೇಳನದಲ್ಲಿ ಭಾಗವಹಿಸಿದರು. ಶಾಕ್ತ, ಗಾಣಪತ, ಸೌರ, ಶೈವ, ವೈಷ್ಣವ ಮತಗಳ ಮಹಾಪಂಡಿತರು ಮಧ್ವಾಚಾರ್ಯರೊಡನೆ ವಾದ ಮಾಡಿದರು. ಆಚಾರ್ಯರು ತಾವು ಪ್ರತಿಪಾದಿಸುತ್ತಿರುವ ಭಕ್ತಿಪ್ರಧಾನವಾದ ಮಾಧ್ವ ಭಾಷ್ಯವೇ ಉತ್ತಮವೆಂದು ದ್ವೈತ ಸಿದ್ಧಾಂತ ವಿವರಿಸಿ ಎಲ್ಲರನ್ನೂ ಗೆದ್ದರು. ಆಚಾರ್ಯರ ಪಾಂಡಿತ್ಯವನ್ನು ಮೆಚ್ಚಿದ ನ್ಯಾಯಶಾಸ್ತ್ರ ಪಾರಂಗತರಾದ ಶೋಭನಭಟ್ಟರು ಆಚಾರ್ಯರ ಶಿಷ್ಯರಾದರು. ನಂತರ ಆಚಾರ್ಯರು ತಮ್ಮ ಊರಾದ ರಜತಪೀಠಕ್ಕೆ ಬಂದರು. ಆಚಾರ್ಯರ ಗುರುಗಳಾದ ಅಚ್ಯುತ ಪ್ರೇಕ್ಷಕರು ಅದ್ವೈತ ಸಿದ್ಧಾಂತ ಅಭ್ಯಾಸ ಮಾಡಿದರು. ಮಧ್ವಾಚಾರ್ಯರು ತಮ್ಮ ದ್ವೈತ ಸಿದ್ಧಾಂತವನ್ನು ಅವರಿಗೆ ಮನಮುಟ್ಟುವಂತೆ ವಿವರಿಸಿದರು. ವಿವರಣೆ ಕೇಳಿದ ನಂತರ ಅಚ್ಯುತ ಪ್ರೇಕ್ಷರೂ ದ್ವೈತ ಸಿದ್ಧಾಂತದ ಅನುಯಾಯಿಗಳಾದರು.

## ಕೃಷ್ಣ

ಭಕ್ತಿ ಮಾರ್ಗಾವಲಂಬನೆಗೆ ಶಿಷ್ಯರಿಗೆ ಸಹಾಯಕವಾಗಲು ಕೃಷ್ಣಮಂದಿರವೊಂದನ್ನು ನಿರ್ಮಿಸಲು ಆಚಾರ್ಯರು ಬಯಸಿದರು. ಸರಿಯಾದ ಸ್ಥಳ ಯಾವುದು ಮತ್ತು ಸೂಕ್ತವಾದ ವಿಗ್ರಹ ಎಲ್ಲಿದೆ ಎಂದು ಚಿಂತಿಸುತ್ತಿದ್ದರು. ಆಗ ಭಗವಂತನು ಕನಸಿನಲ್ಲಿ ಕಾಣಿಸಿಕೊಂಡು ವಿಗ್ರಹವು ಬರುತ್ತಿರುವ ಹಡಗಿನಲ್ಲಿ ಗೋಪಿ ಚಂದನದಲ್ಲಿದೆಯೆಂದೂ, ಉಡುಪಿಯಲ್ಲಿ ಪ್ರತಿಷ್ಠಾಪಿಸಬೇಕೆಂದೂ ಹೇಳಿದ.

ಅಂತೆಯೇ ಆಚಾರ್ಯರು ಕಡಲ ತೀರದಲ್ಲಿ ಕಾದು ನಿಂತರು. ಆಗ ದೊಡ್ಡ ಬಿರುಗಾಳಿಯೆದ್ದಿತು. ಸಮುದ್ರದಲ್ಲಿ ಪ್ರಯಾಣ ಮಾಡುತ್ತಿದ್ದ ಹಡಗು ಬಿರುಗಾಳಿಗೆ ಸಿಕ್ಕಿ ಮುಳುಗುವಂತಾಯಿತು. ಆಚಾರ್ಯರ ಮಹಿಮೆ ತಿಳಿದಿದ್ದ ಹಡಗಿನ ಯಜಮಾನ ಬಿರುಗಾಳಿಯಿಂದ ಪಾರು ಮಾಡಲು ಆಚಾರ್ಯರನ್ನು ಬೇಡಿಕೊಂಡ. ಆಗ ಆಚಾರ್ಯರು ತಾವು ಹೊದ್ದಿದ್ದ ಬಟ್ಟೆಯಿಂದಲೇ ಬಿರುಗಾಳಿಯನ್ನು ತಡೆದರು. ನಿಮಿಷದಲ್ಲಿ ಬಿರುಗಾಳಿ ಮಾಯವಾಯಿತು. ಹಡಗು ಸುರಕ್ಷಿತವಾಗಿ ದಡ ಸೇರಿತು. ಸಂತೋಷಗೊಂಡ ಹಡಗಿನ ಯಜಮಾನ ಆಚಾರ್ಯರಿಗಾಗಿ ಅಮೂಲ್ಯ ಕಾಣಿಕೆಗಳನ್ನು ಹೊತ್ತು ತಂದ. ಆಗ ಆಚಾರ್ಯರು ಅದಾವುದೂ ಬೇಡವೆಂದು ಹೇಳಿ ಹಡಗಿನಲ್ಲಿದ್ದ ಮೂರು ಗೋಪಿ ಚಂದನದ ಹೆಂಟೆಗಳನ್ನು ಕೇಳಿದರು. ಅವನಿಂದ ಪಡೆದು, ಶಿಷ್ಯರು ಹೊತ್ತು ತರುತ್ತಿದ್ದಾಗ ಕಡಲ ತೀರದಿಂದ ಮೇಲೆ ಬರುವಷ್ಟರಲ್ಲಿ ಒಂದು ಹೆಂಟೆ ಒಡೆದು ಹೋಯಿತು. ಒಳಗೆ ಸುಂದರವಾದ ಬಲರಾಮಮೂರ್ತಿ ಇತ್ತು. ಆಚಾರ್ಯರು ಮೂರ್ತಿಯನ್ನು ಅಲ್ಲೇ, ಅಂದರೆ ವಡಭಾಂಡೇಶ್ವರಲ್ಲಿ ಪ್ರತಿಷ್ಠಾಪಿಸಿದರು.

ಉಳಿದೆರಡು ಗೋಪಿಚಂದನಗಳನ್ನು ಉಡುಪಿಗೆ ತಂದರು. ಒಂದರಲ್ಲಿದ್ದ ಕೃಷ್ಣನ ವಿಗ್ರಹವನ್ನು ಶಿಷ್ಯರಿಂದ ಮಧ್ವ ಸರೋವರದಲ್ಲಿ ಸ್ವಚ್ಛ ಮಾಡಿಸಿದರು. ಆದರೆ ವಿಗ್ರಹವನ್ನು ಹೊತ್ತು ತರಲು ಮೂವತ್ತು ಜನ ಶಿಷ್ಯರಿಂದಲೂ ಸಾಧ್ಯವಾಗಲಿಲ್ಲ. ಆಗ ಆಚಾರ್ಯರು ತಾವೊಬ್ಬರೇ ಹೂವು ಎತ್ತಿದಂತೆ ಎತ್ತಿ ತಂದರು. ಅದನ್ನು ಉಡುಪಿಯಲ್ಲಿ ಪ್ರತಿಷ್ಠಾಪಿಸಿದರು.

ಎರಡು ಗೋಪಿಚಂದನಗಳಲ್ಲೂ ಸುಂದರ ವಿಗ್ರಹಗಳಿರುವುದನ್ನು ಕಂಡ ಹಡಗಿನ ಯಜಮಾನ ತನಗೆ ಒಂದಾದರೂ ಕೊಡಬೇಕೆಂದು ಕೇಳಿಕೊಂಡ. ಅಂತೆಯೇ ಆಚಾರ್ಯರು ಮೂರನೆಯ ಗೋಪಿ ಚಂದನವನ್ನು ಅವನಿಗೆ ಕೊಟ್ಟರು. ಅವನು ಅದರಲ್ಲಿದ್ದ ಜನಾರ್ಧನ ವಿಗ್ರಹವನ್ನು ಯರ್ಮಾಳು ಎಂಬ ಗ್ರಾಮದಲ್ಲಿ ಪ್ರತಿಷ್ಠಾಪಿಸಿದನು.

## ಎರಡನೆಯ ಬದರಿಯಾತ್ರೆ

ತಮ್ಮ ಕೆಲವು ಪ್ರಮುಖ ಶಿಷ್ಯರೊಡಗೂಡಿ ಆಚಾರ್ಯರು ಮತ್ತೊಮ್ಮೆ ಬದರಿ ಯಾತ್ರೆ ಕೈಗೊಂಡರು. ಈಶ್ವರ ದೇವನೆಂಬ ರಾಜನು ತನ್ನ ರಾಜ್ಯದ ಮೂಲಕ ಹಾದು ಹೋಗುವ ಪ್ರಯಾಣಿಕರಿಂದ ಬಿಟ್ಟಿ ಕೆಲಸ ಮಾಡಿಸಿಕೊಳ್ಳುತ್ತಿದ್ದ. ಆಚಾರ್ಯರು ಮತ್ತು ಅವರ ಶಿಷ್ಯರನ್ನು ಕಂಡು ಅವರಿಗೂ ಹಾರೆ, ಪಿಕಾಸಿಗಳನ್ನು ಕೊಟ್ಟು, ನೆಲ ಅಗೆಯಲು ಹೇಳಿದ. ಆಗ ಆಚಾರ್ಯರು ರಾಜ ನಾವು ಸನ್ಯಾಸಿಗಳು. ಈ ರೀತಿಯ ಕೆಲಸ ಮಾಡಿ ಅನುಭವವಿಲ್ಲ. ಆದ್ದರಿಂದ ಹೇಗೆ ಮಾಡಬೇಕೆಂಬುದನ್ನು ನೀನು ಮಾಡಿ ತೋರಿಸು ಎಂದರು.

ರಾಜ ಸರಿ ಎಂದವನೇ ಅಗೆಯಲು ಪ್ರಾರಂಭಿಸಿದ. ರಾಜ ಕೆಲಸ ಮಾಡುತ್ತಿರುವಾಗ ಉಳಿದವರು ಸುಮ್ಮನಿರಲಾದೀತೇ. ಮಂತ್ರಿ ಮತ್ತಿತರರೂ ಪ್ರಾರಂಭಿಸಿದರು. ಸಾಯಂಕಾಲವಾದರೂ ರಾಜ ಕೆಲಸ ಮಾಡುವುದನ್ನು ನಿಲ್ಲಿಸಲೇ ಇಲ್ಲ. ವಿಷಯ ತಿಳಿದ ರಾಣಿ ಓಡಿ ಬಂದು ಆಚಾರ್ಯರ ಕ್ಷಮೆ ಕೇಳಿಕೊಂಡಳು.

ಆಗ ಆಚಾರ್ಯರು ರಾಜ, ಕೆಲಸ ಸಾಕು ಮಾಡು ಹೇಳಿದರು. ತಕ್ಷಣ ರಾಜ ಕೆಲಸ ನಿಲ್ಲಿಸಿದ. ಆದರೆ ಆಯಾಸದಿಂದ ಕುಸಿದು ಬಿದ್ದ. ಶೈತ್ಯೋಪಚಾರದ ನಂತರ ಎಚ್ಚರವಾಗಿ ಆಚಾರ್ಯರ ಕ್ಷಮೆ ಕೋರಿದ. ಇನ್ನು ಮುಂದೆ ಪ್ರಯಾಣಿಕರಿಗೆ ತೊಂದರೆ ಕೊಡಬಾರದೆಂದು ಹೇಳಿ ಆಚಾರ್ಯರು ಹೊರಟರು.

ಗಂಗಾನದಿಯ ದಡಕ್ಕೆ ಬಂದಾಗ ದೋಣಿಯಲ್ಲಾಗಲೀ, ತೆಪ್ಪವಾಗಲೀ, ಇರಲಿಲ್ಲ. ನದಿಯನ್ನು ದಾಟುವ ಬಗೆ ಹೇಗೆ? ಆಗ ಆಚಾರ್ಯರು ಶಿಷ್ಯರನ್ನು ತಮ್ಮ ಕೈ ಹಿಡಿದುಕೊಳ್ಳಲು ಹೇಳಿ, ನದಿಯ ಮೇಲೆ ಶಿಷ್ಯರೊಡನೆ ನಡೆದುಕೊಂಡೇ ಹೊರಟರು. ನದಿ ದಾಟಿ ಬಂದ ಇವರುಗಳನ್ನು ಕಂಡು ಶತೃಗಳ ಕಡೆಯವರಿರಬಹುದೆಂದುಕೊಂಡ ಸೈನಿಕರು ತಮ್ಮ ರಾಜನ ಬಳಿ ಕರೆದುಕೊಂಡು ಹೋದರು. ಆಚಾರ್ಯರು ತಾವು ಬದರಿಗೆ ಪ್ರಯಾಣ ಮಾಡುತ್ತಿರುವ ವಿಷಯವನ್ನು ರಾಜನಿಗೆ ಅವನ ಭಾಷೆಯಲ್ಲಿಯೇ ಹೇಳಿದರು. ನೀರ ಮೇಲೆ ನಡೆದು ಬಂದರೆಂದು ತಿಳಿದೇ ಆಶ್ಚರ್ಯಗೊಂಡಿದ್ದ ರಾಜ ಈಗ ದಿಗ್ಭ್ರಮೆಗೊಂಡ. ಇಂತಹ ಮಹಾನುಭಾವರನ್ನು ಬಿಡಬಾರದೆಂದುಕೊಂಡು ಅರ್ಧ ರಾಜ್ಯ ಕೊಡುತ್ತೇನೆ, ನನ್ನ ಸ್ನೇಹಿತರಾಗಿರಿ ಎಂದು ಹೇಳಿಕೊಂಡ. ಸನ್ಯಾಸಿಗೇಕೆ ರಾಜ್ಯ ಎಂದ ಆಚಾರ್ಯರು ಅವನನ್ನು ಆಶೀರ್ವದಿಸಿ ಮುಂದೆ ಹೊರಟರು.

ಒಮ್ಮೆ ಕಳ್ಳರ ಗುಂಪೊಂದು ಇವರುಗಳನ್ನು ಅಟ್ಟಿಸಿಕೊಂಡು ಬಂದಿತು. ಆದರೆ ಹತ್ತಿರ ಬಂದಾಗ ಆಚಾರ್ಯರು ಅವರ ಶಿಷ್ಯರೂ ಕಳ್ಳರಿಗೆ ಬಂಡೆಕಲ್ಲುಗಳಂತೆ ಕಂಡರು. ಸ್ವಲ್ಪ ದೂರ ಹೋಗಿ ಹಿಂದೆ ತಿರುಗಿ ನೋಡಿದಾಗ ಆಚಾರ್ಯರು, ಶಿಷ್ಯರೊಡನೆ ನಡೆದು ಬರುತ್ತಿರುವುದು ಕಂಡಿತು. ಹತ್ತಿರ ಬಂದು ನೋಡಿದರೆ ಮತ್ತೆ ಬಂಡೆಕಲ್ಲು ಇದೇ ರೀತಿ ಎರಡು ಮೂರು ಬಾರಿ ಆದಾಗ ಕಳ್ಳರಿಗೆ ಇವರು ಮಹಾಪುರುಷರೆಂದು ತಿಳಿದು ಓಡಿ ಬಂದು ಕಾಲಿಗೆ ಬಿದ್ದು ಕ್ಷಮೆ ಕೇಳಿಕೊಂಡರು. ಆಚಾರ್ಯರು ಕಳ್ಳತನ ಬಿಡಲು ಹೇಳಿ ಅವರುಗಳನ್ನು ಆಶೀರ್ವದಿಸಿದರು.

ಆಚಾರ್ಯರು ಬದರಿಕಾಶ್ರಮ ಸೇರಿ ವೇದವ್ಯಾಸರನ್ನು ಸಂದರ್ಶಿಸಿ, ತಾವು ರಚಿಸಿದ್ದ ಬ್ರಹ್ಮಸೂತ್ರ ಭಾಷ್ಯ, ಗೀತಾಭ್ಯಾಷ್ಯ ಮೊದಲಾದ ಗ್ರಂಥಗಳನ್ನು ಅರ್ಪಿಸಿದರು. ವೇದವ್ಯಾಸರ ಆದೇಶದಂತೆ ಧರ್ಮ ಪ್ರಚಾರಕ್ಕಾಗಿ ಮರಳಿ ಊರಿಗೆ ಹೋದರು.

ದಾರಿಯಲ್ಲಿ ಮಠವೊಂದರಲ್ಲಿ ತಂಗಿದ್ದಾಗ ಆಚಾರ್ಯರು ಕೊಠಡಿಯೊಂದರಲ್ಲಿ ಬಾಗಿಲು ಮುಚ್ಚಿ ಧ್ಯಾನಮಗ್ನರಾಗಿದ್ದರು. ಆಗ ಅಲ್ಲಿಗೆ ಗೋವೆಯ ರಾಜ ಬಂದನು. ಆಚಾರ್ಯರು ಧ್ಯಾನ ಮಗ್ನರಾಗಿಯೇ ಇದ್ದರು. ತಾನು ಬಂದರೂ ಎದ್ದು ಬಂದು ಗೌರವಿಸದೇ, ಧ್ಯಾನದಲ್ಲಿ ತಲ್ಲೀನರಾಗಿರುವುದನ್ನು ಕಂಡ ರಾಜನು ಕೋಪಗೊಂಡು, ಅಹಂಕಾರ ಮತ್ತು ದರ್ಪದಿಂದ ಬಾಗಿಲು ತೆಗೆಯಲು ಹೇಳಿದ. ಮೊದಲು ಶಿಷ್ಯರು ಬಾಗಿಲು ತೆಗೆಯದಿದ್ದರೂ ಕಡೆಗೆ ಬೇರೆ ದಾರಿಯಿಲ್ಲದೇ ತೆಗೆಯಲೇಬೇಕಾಯಿತು.

ಧ್ಯಾನ ಭಂಗವಾಗಿ ಎಚ್ಚೆತ್ತ ಆಚಾರ್ಯರಿಗೆ ಮಹಾಕೋಪ ಬಂದು ರಾಜನನ್ನು ಶಪಿಸಿದರು. ಹೆದರಿದ ರಾಜ ತನ್ನ ಪುರೋಹಿತರನ್ನು ಕಳಿಸಿ, ಅವರ ಮೂಲಕ ಕ್ಷಮೆ ಕೋರಿದ. ಆಚಾರ್ಯರು ಅವನಿಗೆ ಆರು ತಿಂಗಳ ಆಯಸ್ಸು ನೀಡಿದರು. ಆಗ ರಾಜನು ಆರು ತಿಂಗಳು ಅವರು ಅಲ್ಲಿಯೇ ಇರಬೇಕೆಂದು ನಿರ್ಬಂಧಿಸಿ, ಸೈನಿಕರನ್ನು ಕಾವಲು ಹಾಕಿದ. ಆಚಾರ್ಯರಿಗೆ ತಮ್ಮ ಬಗ್ಗೆ ಚಿಂತೆಯಿರಲಿಲ್ಲ. ಆದರೆ ಶಿಷ್ಯರ ಗತಿ? ಸ್ನಾನ ಸಂಧ್ಯಾವಂದನೆ ನೆಪದಿಂದ ಶಿಷ್ಯರೆಲ್ಲ ಒಬ್ಬೊಬ್ಬರಾಗಿ ಹೊರಗೆ ಹೋದವರು ಮತ್ತೆ ಬರಲೇ ಇಲ್ಲ. ಅವರು ಹೋದರೇನು ಆಚಾರ್ಯರಿದ್ದಾರಲ್ಲ ಎಂದುಕೊಂಡ ರಾಜ ಪಹರೆ ಬಿಗಿಗೊಳಿಸಿದ. ಆದರೆ ಗಾಳಿಯಲ್ಲೇ ಮರೆಯಾಗಿ ಹೋದರು. ಆರನೇ ತಿಂಗಳು ಗೋವೆಯ ರಾಜನನ್ನು ಅವನ ಶತ್ರುಗಳು ಕೊಂದು ಹಾಕಿದರು.

ಆಚಾರ್ಯರ ಉತ್ಕರ್ಷವನ್ನು ಕಂಡು ಸಹಿಸದ ಕೆಲವರು ಅವರ ಮೇಲೆ ದ್ವೇಷ ಕಾರಿದರು. ಆಚಾರ್ಯರ ದ್ವೈತ ಭಾಷ್ಯಾದಿ ಗ್ರಂಥಗಳನ್ನು ತಮ್ಮ ಆಪ್ತರಾದ ಶಂಕರಾಚಾರ್ಯರ ಬಳಿ ಇಟ್ಟಿದ್ದರು. ಆಚಾರ್ಯರ ದ್ವೇಷಿಗಳು ಅವುಗಳನ್ನು ಅಪಹರಿಸಿ ಸೌರಮ್ಯವೆಂಬ ಗ್ರಮದಲ್ಲಿ ಅಡಗಿಕೊಂಡರು. ಆದರೆ ಆಚಾರ್ಯರು ತಮ್ಮ ಯಾತ್ರೆಯ ದಾರಿಯಲ್ಲಿದ್ದ ಆ ಗ್ರಾಮಕ್ಕೂ ಹೋದರು.

ಆಚಾರ್ಯರು ಬರುತ್ತಿರುವರೆಂಬ ವಿಷಯ ತಿಳಿದ ದ್ವೇಷಿಗಳು ಗ್ರಂಥಗಳನ್ನು ಅಲ್ಲೇ ಬಿಟ್ಟು ಓಡಿಹೋದರು. ಆಗ ರಾಜನಾದ ಜಯಸಿಂಹನು ಆಚಾರ್ಯರನ್ನು ಆಸ್ಥಾನಕ್ಕೆ ಕರೆಯಿಸಿ ಸನ್ಮಾನಿಸಿ ಅವರ ಗ್ರಂಥಗಳನ್ನು ಅವರಿಗೆ ಒಪ್ಪಿಸಿದನು. ರಾಜನ ಆಸ್ಥಾನದಲ್ಲಿ ತ್ರಿವಿಕ್ರಮ ಪಂಡಿತರೆಂಬ ಮಹಾ ಮೇಧಾವಿಗಳಿದ್ದರು. ವೇದ ವೇದಾಂಗ, ಸಾಹಿತ್ಯಗಳಲ್ಲದೇ ಅದ್ವೈತದಲ್ಲೂ ಅವರು ಪರಿಣಿತರು. ಆಚಾರ್ಯರು ಅವರೊಡನೆ ಹದಿನೈದು ದಿನ ವಾದ ಮಾಡಿ ಗೆದ್ದರು. ತ್ರಿವಿಕ್ರಮ ಪಂಡಿತರು ಆಚಾರ್ಯರ ಶಿಷ್ಯರಾದುದಲ್ಲದೆ ಮಾಧ್ವಭಾಷ್ಯಕ್ಕೆ ಸರಳವಾದ ತತ್ವಪ್ರದೀಪವೆಂಬ ಟೀಕೆಯನ್ನೂ ಬರೆದರು.

ಒಮ್ಮೆ ವೇದ ದ್ವೇಷಿಯೊಬ್ಬನು ಆಚಾರ್ಯರ ಬಳಿ ಬಂದು ವೇದ ಮಂತ್ರಗಳು ಪ್ರಮಾಣವಾಗಲಾರವು. ಉದಾಹರಣೆಗೆ ಓಷಧೀ: ಪೂರ್ವ ಜಾತಾದೇವೇಭ್ಯ: ಎಂಬ ಮಂತ್ರದಿಂದ ಬೀಜಬಿತ್ತಿದೊಡನೆ ಪುಷ್ಪಫಲಾದಿಗಳು ಹುಟ್ಟುವುವು ಎಂದು ಹೇಳುತ್ತಾರೆ. ಆದರೆ ಈ ರೀತಿ ಆಗುವುದು ಉಂಟೆ ಎಂದು ಹೀಯಾಳಿಸಿದನು. ಸಹನೆ ಕಳೆದುಕೊಳ್ಳದೆ ಆಚಾರ್ಯರು ಅವನಿಗೆ ವಿವರಿಸಿ ವೇದ ಮಂತ್ರವನ್ನು ಸಿದ್ಧಿಮಾಡಿಕೊಂಡ ಯೋಗ್ಯತೆ ಇದ್ದವರಿಗೆ ವೇದದಲ್ಲಿ ಹೇಳಿದ ಫಲ ದೊರೆಯುವುದೆಂದು ಹೇಳಿದರು. ಆದರೆ ಅವನು ಅಂತಹವರು ಇರಲು ಸಾಧ್ಯವೇ ಇಲ್ಲವೆಂದು ಹೇಳುವುದಲ್ಲದೇ ವೇದಗಳ ಬಗ್ಗೆ ಕೆಟ್ಟದಾಗಿ ಮಾತಾಡಿದರು. ಕೋಪಗೊಂಡ ಆಚಾರ್ಯರು ಕೂಡಲೇ ಹೆಸರು ಬೀಜ ತರಿಸಿ ಯಾಓಷಧೀ: ಪೂರ್ವಾಜಾತಾ: ಮಂತ್ರ ಹೇಳಿ ಬಿತ್ತಿದರು. ತಕ್ಷಣ ಬೀಜ ಮೊಳೆತು ಸಸಿಯಾಗಿ ಹೂವಾಗಿ ಫಲಬಿಟ್ಟಿತು. ವೇದ ದ್ವೇಷಿ ಆಚಾರ್ಯರ ಕಾಲಿಗೆ ಬಿದ್ದು ಕ್ಷಮೆ ಕೇಳಿಕೊಂಡ.

ಮೂವತ್ತೇಳು ಗ್ರಂಥಗಳನ್ನು ಬರೆದ ಆಚಾರ್ಯರು ದ್ವೈತಮತ ಪ್ರಚಾರಕ್ಕಾಗಿ ಅಷ್ಟಮಠಗಳನ್ನು ಸ್ಥಾಪಿಸಿ, ಅಲ್ಲಿ ತಮ್ಮ ಎಂಟು ಜನ ಶಿಷ್ಯರನ್ನು ಮಠಾಧಿಪತಿಗಳಾಗಿ ನೇಮಿಸಿದರು. ಎಂಬತ್ತು ವರ್ಷಗಳ ಕಾಲ ದ್ವೈತಮತ ಪ್ರಚಾರವನ್ನು ಭಾರತಾದ್ಯಂತ ಯಶಸ್ವಿಯಾಗಿ ನಡೆಸಿದ ಮಧ್ವಾಚಾರ್ಯರು ಕ್ರಿಸ್ತಶಕ ೧೩೧೮ನೇ ಜನವರಿ ಹನ್ನೊಂದನೆಯ ತಾರೀಖು ಉಡುಪಿಯ ಅನಂತಾಸನ ದೇವರ ಮುಂದೆ ಶಿಷ್ಯರಿಗೆ ಉಪದೇಶಿಸುತ್ತಾ ಅವರೆಲ್ಲ ನೋಡುತ್ತಿರುವಂತೆಯೇ ಅದೃಶ್ಯರಾಗಿ ಹೋದರು. ಅಂದಿನ ದಿನವನ್ನು ಮಧ್ವನವಮಿ ಎಂದು ಕರೆಯುತ್ತಾರೆ.

**ಯುಗಯಾತ್ರಿ ಭಾರತೀಯ ಸಂಸ್ಕೃತಿಯಿಂದ ಸಂಗ್ರಹ**

**ಜಿ.ವಿ. ಪ್ರಭಾಕರ ರಾವ್**
**ಅಧ್ಯಕ್ಷರು : ಶ್ರೀ ಗುರುರಾಜ ಸೇವಾ ಸಮಿತಿ (ರಿ)**
**ಯಲಹಂಕ ಉಪನಗರ,**
**ಬೆಂಗಳೂರು ೫೬೦ ೧೦೬.**

****************

# ಭೀಮರಥ ಶಾಂತಿ ಹೋಮ – ಒಂದು ಅವಲೋಕನ

**ಲೇಖಕರು: ಜಿ. ಶ್ರೀಧರ್,** ಸರ್ಕಾರದ ಉಪ ಕಾರ್ಯದರ್ಶಿ, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ, ವಿಧಾನಸೌಧ, ಬೆಂಗಳೂರು. ಮೊಬೈಲ್ ದೂರವಾಣಿ ಸಂಖ್ಯೆ– 9448012278

ಧರ್ಮೋ ವಿಶ್ವಸ್ಯ ಜಗತಃ ಪ್ರತಿಷ್ಠಾ – ಜಗತ್ತಿನ ಸರ್ವೋನ್ನತಿಗೆ ಧರ್ಮವೇ ಕಾರಣ ಎಂದು ತೈತ್ತರಿಯ ಉಪನಿಷತ್ತಿನಲ್ಲಿ ಹೇಳಲಾಗಿದೆ. ಆದುದರಿಂದ ಪ್ರತಿಯೊಬ್ಬ ಮನುಷ್ಯ ಜೀವಿಯು ಧರ್ಮದಿಂದ ನಡೆಯಬೇಕು. ಧರ್ಮವನ್ನು ನಾವು ರಕ್ಷಿಸಿದರೇ, ಧರ್ಮವು ನಮ್ಮನ್ನು ಕಾಪಾಡುತ್ತದೆ – ಧರ್ಮೋ ರಕ್ಷತಿ ರಕ್ಷಿತಃ ಎಂದು ಮನುಸ್ಮೃತಿಯಲ್ಲಿ ಹೇಳಲಾಗಿದೆ. ಆದುದರಿಂದ ಧರ್ಮದ ಸ್ವರೂಪವನ್ನು ಐದು ವಿಧದಲ್ಲಿ ಕಾಣಬಹುದು. ೧) ವರ್ಣ ಧರ್ಮ ೨) ಆಶ್ರಮ ಧರ್ಮ ೩) ವರ್ಣಾಶ್ರಮ ಧರ್ಮ ೪) ಗುಣಧರ್ಮ ೫) ನಿಮಿತ್ತ ಧರ್ಮ – ಇವುಗಳು ಧರ್ಮ ಸ್ವರೂಪಗಳು.

ಅಹಿಂಸಾ ಸತ್ಯ ಮಸ್ತೇಯಂ ಶೌಚಮಿಂದ್ರಿಯ ನಿಗ್ರಹ: । ದಾನಂ ದಮೋ ದಯಾಶಾಂತಿ: ಸರ್ವೇಷಾಂ ಧರ್ಮ ಸಂಗ್ರಹ ॥ – ಎಂದೂ ಹಿಂಸೆಯನ್ನು ಮಾಡಬಾರದು, ಕಳ್ಳತನವನ್ನು ಮಾಡಬಾರದು, ಅಸತ್ಯವನ್ನು ನುಡಿಯಬಾರದು, ಅಪರಿಶುಭ್ರವಾಗಿ ಇರಕೂಡದು, ಮನಸ್ಸನ್ನು ಹತೋಟಿಯಲ್ಲಿಡಬೇಕು, ದಾನ ಧರ್ಮಾದಿಗಳನ್ನು ಮಾಡುತ್ತಿರಬೇಕು, ಇಂದ್ರಿಯಗಳನ್ನು ನಿಗ್ರಹಿಸಬೇಕು, ಸರ್ವ ಪ್ರಾಣಿಗಳಲ್ಲಿಯೂ ದಯೆ ಇರಬೇಕು, ತಪ್ಪು ಮಾಡಿದವರನ್ನು ಕ್ಷಮಿಸುವಂತ ಸದ್ಗುಣವಿರಬೇಕು ಎಂದು ಯಾಜ್ಞವಲ್ಕ್ಯಸ್ಮೃತಿಯಲ್ಲಿ ಹೇಳಲಾಗಿದೆ.

ಇದಲ್ಲದೆ ಮನುಷ್ಯ ಜೀವಿಯು ವರ್ಯೋಧರ್ಮ,ಕುಲಧರ್ಮ, ಗುಣಧರ್ಮ, ಜಾತಿಧರ್ಮ, ದೇಶ ಧರ್ಮ, ಸಮಯ ಧರ್ಮ, ಶರೀರಧರ್ಮ, ಋತುಧರ್ಮ, ಸಾಮಾಜಿಕ ಧರ್ಮ ವಂಶ ಧರ್ಮ ಮುಂತಾದ ಧರ್ಮಗಳನ್ನು ಆಚರಿಸಿಕೊಂಡು ಬರಲು ಶರೀರ ಅವಶ್ಯವಾಗಿರುತ್ತದೆ. ಶರೀರ ಮಾದ್ಯಂ ಖಲು ಧರ್ಮ ಸಾಧನಂ ಎಂದು ಪರಾಶರ ಸ್ಮೃತಿಯಲ್ಲಿ ತಿಳಿಸಲಾಗಿದೆ.

ಪ್ರಭವ ಸಂವತ್ಸರದಿಂದ ಪ್ರಾರಂಭವಾಗುವ ಸಂವತ್ಸರಗಳು ಆಕ್ಷಯ ಸಂವತ್ಸರದೊಂದಿಗೆ ೬೦ ಸಂವತ್ಸರಗಳನ್ನು ನಮ್ಮ ಮನೋಧರ್ಮಗಳ ಜೊತೆಗೆ ಜಾತಕ ಚಕ್ರದ ಪ್ರಭಾವದೊಂದಿಗೆ ಬದಲಾಗುತ್ತದೆ. ಬಾಲ್ಯ, ಯೌವ್ವನ, ಗೃಹಸ್ಥ ಹಾಗೂ ವಾನಪ್ರಸ್ಥ ಆಶ್ರಮಗಳ ಜೊತೆಗೆ ವೇಷಭೂಷಣ ಹಾಗೂ ಭಾಷೆ, ಜ್ಞಾನ, ಪ್ರಭುದ್ಧತೆ, ಪಕ್ವತೆ ಮೊದಲಾದ ಏರುಪೇರುಗಳನ್ನು ಕಾಣಲಾಗುತ್ತದೆ. ನರಗಳು ಬಲಹೀನವಾಗಿ, ಎಲುಬುಗಳು ನಿಸ್ತೇಜವಾಗಿ ದೇಹ ಶಕ್ತಿಯು ಕುಗ್ಗುತ್ತದೆ. ಆದುದರಿಂದ ಮನುಷ್ಯನ ಜೀವನದಲ್ಲಿ ಧರ್ಮ ಸಾಧನೆಗೆ ಸಾಧನವಾದ ಶರೀರ ಮತ್ತು ಸಂಸಾರವನ್ನು ಒಂದು ವ್ರತವಾಗಿ ಆಚರಿಸಿ ತನ್ನ ಬಂದುಮಿತ್ರರೊಂದಿಗೆ ಹಾಗೂ ವಂಶಜರೊಂದಿಗೆ ಹೋಮ,ಹವನಾದಿಗಳ ಮೂಲಕ ಶಾಂತಿ ಆಚರಿಸಿಕೊಳ್ಳುವುದು ವಂಶಧರ್ಮವಾಗಿರುತ್ತದೆ.

ಧಾರ್ಮಿಕವಾಗಿ ಇಂತಹ ಹೋಮ ಹವನಾದಿಗಳನ್ನು ಆಚರಿಸಿಕೊಳ್ಳುವಾಗ ಡಾಂಬಿಕ ತನವನ್ನು ಪ್ರದರ್ಶಿಸದೆ ಸ್ನೇಹ ಸೌಹಾರ್ದವನ್ನು ಬಂದುಮಿತ್ರರಲ್ಲಿ ಪ್ರದರ್ಶಿಸಿಕೊಳ್ಳಬೇಕು. ಇದರಿಂದ ಗಟ್ಟಿತನದ ಬಾಂದವ್ಯ ಬೆಸದುಕೊಂಡು ವಂಶ ಜಾಗೃತಿಯಾಗುತ್ತದೆ. ಸಮಾಜವು ಬಲಗೊಳ್ಳುತ್ತದೆ. ಆದುದರಿಂದ ಹಿರಿಯರು ಆಯಾ ವಯೋಮಾನಗಳಿಗೆ ತಕ್ಕಂತೆ ಇಂತಹ ಹೋಮಗಳನ್ನು ಆಚರಿಸುವಂತೆ ನಿರ್ಧಿಷ್ಟ ಪಡಿಸಿರುತ್ತಾರೆ. ಆದರೆ, ಇದನ್ನು ಕಡ್ಡಾಯವಾಗಿ ಆಚರಿಸುವ ನಿರ್ಬಂಧವನ್ನು ಹೇರಿರುವುದಿಲ್ಲ. ಅವರ ಧರ್ಮಸಂಪಾದಿತ ವಿತ್ತದಿಂದ ಇಂತಹ ಹೋಮಗಳನ್ನು ಆಚರಿಸಬೇಕೆಂದು ಕಲ್ಪಿಸಿರುತ್ತಾರೆ.

೧) ೫೦ನೇ ವರ್ಷದ ಪ್ರಾರಂಭದಲ್ಲಿ ವೈಷ್ಣವೀ ಶಾಂತಿ ಹೋಮ
೨) ೫೫ನೇ ವರ್ಷದ ಪ್ರಾರಂಭದಲ್ಲಿ ವಾರುಣಿ ಶಾಂತಿ ಹೋಮ
೩) ೬೦ನೇ ವರ್ಷದ ಪ್ರಾರಂಭದಲ್ಲಿ ಉಗ್ರ ಋತ ಶಾಂತಿ ಹೋಮ
೪) ೬೧ನೇ ವರ್ಷದ ಪ್ರಾರಂಭದಲ್ಲಿ ಷಷ್ಠಿಪೂರ್ತಿ ಶಾಂತಿ ಹೋಮ
೫) ೬೫ನೇ ವರ್ಷದ ಪ್ರಾರಂಭದಲ್ಲಿ ಮೃತ್ಯುಂಜಯ ಹೋಮ
೬) ೭೦ನೇ ವರ್ಷದ ಪ್ರಾರಂಭದಲ್ಲಿ ಭೀಮ ರಥ ಶಾಂತಿ ಹೋಮ
೭) ೭೫ನೇ ವರ್ಷದ ಪ್ರಾರಂಭದಲ್ಲಿ ಜಾಂದ್ರಿ ಶಾಂತಿ ಹೋಮ
೮) ೮೦–೮೧ನೇ ವರ್ಷದ ಪ್ರಾರಂಭದಲ್ಲಿ ಸಹಸ್ರ ಚಂದ್ರ ದರ್ಶನ ಹೋಮ
೯) ೮೫ನೇ ವರ್ಷದ ಪ್ರಾರಂಭದಲ್ಲಿ ರೌದ್ರಿ ಶಾಂತಿ ಹೋಮ
೧೦) ೯೦ನೇ ವರ್ಷದ ಪ್ರಾರಂಭದಲ್ಲಿ ಕಲಾಸ್ವರೂಪ ಶೌರ್ಯ ಹೋಮ
೧೧) ೯೫ನೇ ವರ್ಷದ ಪ್ರಾರಂಭದಲ್ಲಿ ತ್ರ್ಯೈಯಂಬಕ ಮಹಾರಥ ಶಾಂತಿ ಹೋಮ
೧೨) ೧೦೦ನೇ ವರ್ಷದ ಪ್ರಾರಂಭದಲ್ಲಿ ಮಹಾಮೃತ್ಯುಂಜಯ ಶಾಂತಿ ಹೋಮ

ಮೇಲ್ಕಂಡ ಹೋಮ ಹವನಾದಿಗಳನ್ನು ಆಚರಿಸುವಾಗ ಮಾರ್ಕಂಡೇಯ ಆರಾಧಿತ ರುದ್ರ ದೇವರ ಶ್ಲೋಕಗಳನ್ನು, ಸ್ತೋತ್ರಗಳನ್ನು ಆಚರಿಸುವ ಪದ್ಧತಿ ಜಾರಿಯಲ್ಲಿರುತ್ತದೆ. ಮಾರ್ಕಂಡೇಯನು ಯಮನಿಂದ ಪಾಶವನ್ನು ತಪ್ಪಿಸಿಕೊಳ್ಳಲು ರುದ್ರ ದೇವರ ಮುಖಾಂತರ ಶ್ರೀಹರಿಯನ್ನು ಆಶ್ರಯಿಸಿದ ಕಥೆ ನಾವೆಲ್ಲರೂ ತಿಳಿದಿರುತ್ತೇವೆ.

ಗತಕಾಲದ ಮಾನವ ಜೀವನದಲ್ಲಿ ಬಾಲ್ಯದಲ್ಲಿ ಮಾಡಿದ ಅಪರಾಧಗಳು ಆಕಸ್ಮಿಕವೆಂದು, ಅವುಗಳಿಗೆ ಧಾರ್ಮಿಕ ವಿನಾಯಿತಿ ಕ್ಷಮೆ ಇರುತ್ತದೆ. ಆದರೆ, ಬಾಲ್ಯದ ನಂತರ ಉದ್ದೇಶ ಪೂರ್ವಕವಾಗಿ ಮಾಡುವ ಅಪರಾಧಗಳನ್ನು ದೈವವು ಕ್ಷಮಿಸುವುದಿಲ್ಲ ವೆನ್ನುವ ನಂಬಿಕೆ ಸಾಕಷ್ಟು ಇರುವುದರಿಂದಲೇ ಮನುಷ್ಯನು ಪಶ್ಚಾತಾಪದಿಂದ ಬೇಯುತ್ತಾನೆ. ಈರೀತಿ ಬೆಂದು ಪಕ್ವವಾಗಿ ಶ್ರೀಹರಿಯ ಕೃಪಾಕಟಾಕ್ಷವನ್ನು ಪಡೆಯಲು ಗೃಹಸ್ಥರಿಗೆ ಇರುವ ಅವಕಾಶಗಳೇ ಹೋಮ ಹವನಾದಿಗಳು ಮಾಡುವ ಕ್ರಿಯೆ. ಜೀವನದಲ್ಲಿ ಹಲವಾರು ಕಷ್ಟಗಳನ್ನು, ನೋವುಗಳನ್ನು ಅನುಭವಿಸಿ ಬಂಧುಮಿತ್ರರಿಂದಲೂ ಅನುಭವಿಸಿದ ಅವಮಾನಗಳಿಂದ, ತನ್ನ ಕುಟುಂಬದ ಪತ್ನಿ ಮಕ್ಕಳನ್ನು ತನ್ನ ಧರ್ಮಾಚರಣೆಗಾಗಿ ನೋಯಿಸಿದ ಎಲ್ಲಾ ಘಟನೆಗಳ ಉಪಶಮನ ಪಡೆಯುವುದು ಸಹ ಇದರ ಉದ್ದೇಶವಾಗಿದೆ.

ಸಾಮಾನ್ಯವಾಗಿ ಈ ಎಲ್ಲಾ ಹೋಮ ಹವನಾದಿಗಳನ್ನು ಆಚರಿಸುವಾಗ ಧರ್ಮಪತ್ನಿ ಯೊಂದಿಗೆ ಆಚರಿಸಬೇಕು. ಹಿಂದೂ ವಿವಾಹ ಪದ್ದತಿಯಲ್ಲಿ ಪುರುಷನು ತನ್ನ ಪತ್ನಿಗಿಂತ ವಯಸ್ಸಿನಲ್ಲಿ ಹಿರಿಯನಾಗಿರುತ್ತಾನೆ. ಇದೂ ಸಹ ಸಾಮಾಜಿಕ ವಿಜ್ಞಾನದ ರೀತಿಯಲ್ಲಿ ನಮ್ಮ ಹಿರಿಯರು ಸ್ತ್ರೀಯರ ಋತುಮತಿ ಸಾಮರ್ಥ್ಯದ ಹಿನ್ನೆಲೆಯಲ್ಲಿ ಈ ಅಂತರವನ್ನು ಕಾಯ್ದುಕೊಂಡು ಬಂದಿರುತ್ತಾರೆ. ಪುರುಷನು ೬೦ ವರ್ಷದವನಾದಾಗ ಆತನ ಪತ್ನಿಯು ಋತುಮತಿ ಸಾಮರ್ಥ್ಯದಿಂದ ನಿವೃತ್ತಳಾಗಿರುತ್ತಾಳೆ. ಈ ವಿಷಯವನ್ನು ಧಾರ್ಮಿಕವಾಗಿ ಆ ಪುರುಷನಿಗೆ ತಿಳಿಸಿ, ಧರ್ಮಮಾರ್ಗದಿಂದ ನಾತಿಚರಾಮಿ ಎಂಬ ವಿಷಯವನ್ನು ಪ್ರಜ್ಞಗೊಳಿಸುವುದು ಸಹ ಇದರ ಉದ್ದೇಶವಾಗಿದೆ. ಇಂತಹ ಕಾರ್ಯಕ್ರಮ ನಡೆದಾಗ ಹಿರಿಯ ಬಂಧುಗಳು ಮತ್ತು ಮಿತ್ರರು ಪುರುಷನನ್ನು ಆತನ ಕುಟುಂಬದಿಂದ ಭೌತಿಕ ವ್ಯವಹಾರದಿಂದ ಮುಕ್ತನಾಗುವಂತೆ ಸಹ ಸಲಹೆಗಳನ್ನು ನೀಡುತ್ತಾರೆ. ಪ್ರಭುದ್ದತೆಗೆ ಬಂದ ಮಕ್ಕಳು ಮುಂದಿನ ಸಂಸಾರ ಜವಾಬ್ದಾರಿಯನ್ನು ವಹಿಸಿಕೊಂಡು ಅವಿಭಕ್ತಕುಟುಂಬವನ್ನು ಚಿರಸ್ಥಾಯಿಯಾಗಿ ಉಳಿಸುತ್ತಾರೆ. ಇದು ವಂಶ ಧರ್ಮವಾಗಿರುತ್ತದೆ.

೭೦ನೇ ವರ್ಷದಲ್ಲಿ ಭೀಮರಥ ಶಾಂತಿ ಎಂಬುದನ್ನು ಆಚರಿಸಿಕೊಳ್ಳುವ ವಿಧಾನವು ಸಹ ಪವಿತ್ರವಾದದ್ದು. ನವಗ್ರಹಗಳ ಬಾದೆಯಿಂದ ಜಾತಕ ಮುಕ್ತನಾಗಿ ತನ್ನ ಕುಟುಂಬದ ಕಿರಿಯರಿಗೆ ಗುರು ಮತ್ತು ಶುಕ್ರ ಬಲವನ್ನು ಒದಗಿಸಲು ೭೦ನೇ ವರ್ಷದ ಗೃಹಸ್ಥಧರ್ಮದ ಪುರುಷನ ಸಿದ್ದನಾಗಿರುತ್ತಾನೆ. ತನ್ನ ೬೦ನೇ ವರ್ಷದಲ್ಲಿ ಭೌತಿಕ ಜವಾಬ್ದಾರಿಯಿಂದ ಮುಕ್ತನಾಗುವ ಪುರುಷನು ೭೦ನೇ ವರ್ಷದಲ್ಲಿ ತನ್ನದೇ ವಂಶದ ಕಿರಿಯ ಮೊಮ್ಮಕ್ಕಳಿಗೆ ಧರ್ಮ ಸೂಕ್ಷ್ಮಗಳನ್ನು ವಿವರಿಸಬೇಕಾಗುತ್ತದೆ. ಆದುದರಿಂದ ಆತನ ಶರೀರವು ಆತನ ಜ್ಞಾನದಷ್ಟೇ ಭೀಮಕಾಯವಾಗಿರಬೇಕು. ಈ ಹಿನ್ನೆಲೆಯಲ್ಲಿ ಭೀಮರಥ ಎಂಬ ಪದ ಜ್ಞಾನ ಸಂಚಾರದ ನಡೆದಾಡುವ ಹಿರಿಯನೆಂದೇ ಬಂಧುಗಳು ಭಾವಿಸುತ್ತಾರೆ. ತನ್ನ ವಂಶದಲ್ಲಿನ ಎಲ್ಲಾ ಕಿರಿಯರಿಗೆ, ಮೊಮ್ಮಕ್ಕಳಿಗೆ ಧರ್ಮ ಸೂಕ್ಷ್ಮಗಳೊಂದಿಗೆ ಧಾರ್ಮಿಕ ವಿಧಿವಿಧಾನಗಳನ್ನು ಹೇಳಿಕೊಡುವ ನೈತಿಕ ಜವಾಬ್ದಾರಿ ಪ್ರದರ್ಶಿತವಾಗಬೇಕು.

೭೦ನೇ ವರ್ಷದ ಭೀಮರಥ ಶಾಂತಿ ಹೋಮ ಗಣಪತಿ ಹೋಮದ ಹಾಗೂ ನವಗ್ರಹ ಹೋಮದ ಎಲ್ಲಾ ಶಾಂತಿಗಳು ನೆರವೇರುವಾಗ ರುದ್ರ ದೇವರು ಸಂಪ್ರೀತರಾಗಿ ಶ್ರೀಹರಿಯ ಕೃಪಾಕಟಾಕ್ಷವನ್ನು ಕಲ್ಪಿಸುವಲ್ಲಿ ಒಂದು ವೃತ್ತವನ್ನು ದಾಟಿರುತ್ತಾರೆ. ಇಂತಹ ಅವಸ್ಥೆಯಲ್ಲಿ ಜೀವನಾನುಭವದಿಂದ ಆ ವಂಶದ ಮಾರ್ಗಸೂಚಕದಲ್ಲಿ ಈ ಪುರುಷ ನಕ್ಷತ್ರ ಪ್ರಾಯನಾಗುತ್ತಾನೆ. ಆತನಿಂದ ಲಭ್ಯವಾಗುವ ಎಲ್ಲಾ ಜಾತಕದ ಪ್ರಭಾವಗಳು ಆ ವಂಶವನ್ನು ರಕ್ಷಣೆ ಮಾಡಲೆಂದು ಶಾಂತಿ ಮಂತ್ರವನ್ನು ಜಪಿಸಲಾಗುತ್ತುದೆ.

ಭಾರತೀಯ ಸಂಪ್ರದಾಯದಲ್ಲಿ ೭೦ ವರ್ಷದ ಭೀಮರಥ ಶಾಂತಿಯನ್ನು ಆಚರಿಸಿಕೊಳ್ಳುವ ಪ್ರತಿ ಪುರುಷನ ೩ ತಲೆಮಾರು ಅಸ್ತಿತ್ವದಲ್ಲಿರುತ್ತದೆ. ಅಂತಹ ಪುರುಷನ ಸೌಭಾಗ್ಯದಿಂದ ಮಕ್ಕಳು, ಮೊಮ್ಮಕ್ಕಳು ಮತ್ತು ಮರಿ ಮೊಮ್ಮಕ್ಕಳು ಪಾವನರಾಗುತ್ತಾರೆ, ಧನ್ಯರಾಗುತ್ತಾರೆ ಎಂದು ಹೇಳಲಾಗುತ್ತದೆ.

೬೦ ವರ್ಷದ, ೭೦ ವರ್ಷದ ಹಾಗೂ ಇತರ ವರ್ಷಗಳ ಶಾಂತಿ ಹೋಮಗಳನ್ನು ಸದರಿ ಗೃಹಸ್ಥನು ಆಚರಿಸಿಕೊಳ್ಳುತ್ತಾನೆ ಎನ್ನುವುದಕ್ಕಿಂತ ಮಕ್ಕಳು, ಮೊಮ್ಮಕ್ಕಳು, ಮರಿ ಮೊಮ್ಮಕ್ಕಳು ಹಾಗೂ ಬಂಧುಮಿತ್ರರೇ ಈ ಸಮಾರಂಭವನ್ನು ಆಚರಿಸಿ ಆನಂದಿಸಿ ವಿಜೃಂಭಿಸುತ್ತಾರೆ ಎನ್ನುವುದೇ ಸತ್ಯ.

ದಾನಧರ್ಮಗಳಿಂದ ನಿಜವಾಗಿಯೂ ಮನುಷ್ಯನ ಆತ್ಮಕ್ಕೆ ಶಾಂತಿ ಸಿಗುತ್ತದೆ. ಅನ್ನದಾನವನ್ನು ಸದಾಕಾಲ ಆಚರಿಸುವ ವ್ಯಕ್ತಿಯನ್ನು ವಾಜಸನಿ ಎಂದು ಕರೆಯುತ್ತಾರೆ. ಅನ್ನದಾನವೆಂಬುದು ಒಂದು ಅನ್ನಯಜ್ಞ. ಇಂತಹ ವಾಜಸನಿ ಯಜ್ಞವನ್ನು ಸದಾಕಾಲ ಆಚರಿಸುವ ವಾಜಸನೇಯ – ಶುಕ್ಲ್ಲ ಯಜುರ್ವೇದ ಕಾಣ್ವ ಶಾಖೆಯಲ್ಲಿ ಕಾಣಬಹುದು. ಶುಕ್ಲ್ಲ ಯಜುರ್ವೇದ ಒಂದು ಮಹಾ ವೃಕ್ಷವಾಗಿದ್ದು, ಶ್ರೀ ಸೂರ್ಯನಾರಾಯಣನ ಆರಾಧನೆಯನ್ನು ಪ್ರಜ್ವಲಿಸುವಂತೆ ಮಾಡುತ್ತದೆ. ಆದುದರಿಂದ ದೇಹಧರ್ಮಕ್ಕೆ ಆಧ್ಯಾತ್ಮಿಕ ಧರ್ಮವನ್ನು ೭೦ನೇ ವರ್ಷದಲ್ಲಿ ಭೀಮರಥ ಶಾಂತಿಯ ಮೂಲಕ ಆಚರಿಸುವ ಪ್ರತಿ ಪುರುಷನಿಗೂ ಶ್ರೀ ಸೂರ್ಯನಾರಾಯಣನ ಆರಾಧನೆ ಸಾಕಷ್ಟು ಅವಕಾಶಗಳನ್ನು ಕಲ್ಪಿಸುತ್ತದೆ. ಶ್ರೀ ಅಗಸ್ತ್ಯ ಮಹಾ ಋಷಿಗಳಿಂದ ಶ್ರೀಮನ್ ನಾರಾಯಣ ಅವತಾರವಾದ ಶ್ರೀರಾಮನಿಗೆ ಆದಿತ್ಯ ಹೃದಯ ಎಂಬ ಸ್ತೋತ್ರಮಾಲೆಯನ್ನು ಉಪದೇಶವಾಗುತ್ತದೆ. ಉತ್ತರ ಭಾಗದಲ್ಲಿದ್ದ ಆರ್ಯ ಸಂತತಿಯು ಅಂದರೆ ದಕ್ಷಿಣ ಭಾಗಕ್ಕೆ ವಲಸೆ ಬಂದ ಮೊದಲ ಪಂಗಡವೇ ಶುಕ್ಲ ಯಜುರ್ವೇದಿಗಳು. ಪ್ರಖ್ಯಾತ ಸಂಶೋಧಕರಾದ ಶ್ರೀ ಶಂಭಾ ಜೋಷಿಯವರು ತಮ್ಮ ಪುಸ್ತಕದಲ್ಲಿ ಈ ವಿಷಯವನ್ನು ಪ್ರಸ್ತಾಪಿಸುತ್ತಾ ಶ್ರೀ ಆಗಸ್ತ್ಯರು ೬೦ ಗೋತ್ರಗಳ ಪ್ರಮುಖರ ಜೊತೆಯಲ್ಲಿ ವಿಂಧ್ಯಾ ಪರ್ವತವನ್ನು ದಾಟಿ ದಕ್ಷಿಣ ದಿಕ್ಕಿಗೆ ಬಂದರು ಎಂಬ ವಿಷಯವನ್ನು ಪ್ರಸ್ತಾಪಿಸಿ ಈ ಅಂಶವನ್ನು ಹೊರಗೆಡೆವಿರುತ್ತಾರೆ. ಮೊದಲ ಪಂಗಡವಾಗಿ ಅಥವಾ ಶಾಖೆಯಾಗಿ ಶುಕ್ಲ ಯಜರ್ವೇದಿಗಳು ಉತ್ತರ ಭಾಗದಿಂದ ದಕ್ಷಿಣ ಭಾಗಕ್ಕೆ ೬೦ ಗೋತ್ರಗಳ ಕುಟುಂಬದೊಂದಿಗೆ ಬಂದು ನೆಲೆಸಿದ ಈ ವಿಷಯದಿಂದಲೇ ನಾವೆಲ್ಲರೂ ಅರಿಯಬೇಕಾದ ಅಂಶವೆನೆಂದರೆ ಶುಕ್ಲ ಯಜರ್ವೇದಿಗಳನ್ನು ಪ್ರಥಮ ಶಾಖೆಯೆಂದು ಕರೆಯುವ ಪದ್ಧತಿ ಇಲ್ಲಿಂದ ಪ್ರಾರಂಭವಾಗಿರಬಹುದು. ಈ ರೀತಿ ವಲಸೆ ಬಂದ ಶುಕ್ಲ ಯಜರ್ವೇದಿಗಳು ತಮಿಳುನಾಡಿನಲ್ಲಿ ತರುವಾಯ ಆಂದ್ರ ಮತ್ತು ಕರ್ನಾಟಕಗಳಲ್ಲಿ ನೆಲೆಸಿ ಸಂಘಟಿತರಾಗಿರುತ್ತಾರೆ.

ಶ್ರೀ ಶಂಕರಚಾರ್ಯರು ದಕ್ಷಿಣ ಭಾಗದಲ್ಲಿ ಮೊದಲು ತಮ್ಮ ಶಂಕರ ಮಠದ ಶಾಖೆಯನ್ನು ಶೃಂಗೇರಿಯಲ್ಲಿ ಪ್ರಾರಂಭಿಸುವಾಗ ತಮ್ಮ ಶಿಷ್ಯರಾದ ಮಂಡನ ಮಿಶ್ರರಿಗೆ ಶ್ರೀ ಸುರೇಶ್ವರಚಾರ್ಯ ಎಂಬ ಬಿರುದಾಂಕಿತವನ್ನು ನೀಡಿ ಶೃಂಗೇರಿ ಮಠದ ಆದ್ಯ ಗುರುಗಳಾಗಿ ನೇಮಿಸುತ್ತಾರೆ. ಈ ಶ್ರೀ ಸುರೇಶ್ವರಚಾರ್ಯರು ಶುಕ್ಲ ಯಜರ್ವೇದ ಕಾಣ್ವ ಶಾಖಾದವರು ಆಗಿರುತ್ತಾರೆ. ಶ್ರೀ ಶಂಕರಚಾರ್ಯರಿಂದ ಮೊಟ್ಟ ಮೊದಲಿಗೆ ಗೌರವಕ್ಕೆ ಅರ್ಹರಾದ ಈ ಶುಕ್ಲ ಯಜರ್ ವೇದ ಕಾಣ್ವ ಶಾಖೆಯವರನ್ನು ಪ್ರಥಮ ಶಾಖಾ ಬ್ರಾಹ್ಮಣರು ಎಂದು ಕರೆಯುವುದು ಇಲ್ಲಿಂದ ಜಾರಿಗೆ ಬಂದಿರುತ್ತದೆ ಎಂದು ಶ್ರೀ ಹಯವದನ ಚಾರ್ಯರು ಸಂಪಾದಿಸಿದ ಮೈಸೂರು ಗೆಜೆಟಿಯರ್ ಮೂಲಗಳಿಂದ ತಿಳಿದು ಬರುತ್ತದೆ. ವೇದ , ಸಂಸ್ಕೃತಿ ಅಚಾರಗಳಿಗೆ ಪ್ರಸಿದ್ಧರಾದ ಶುಕ್ಲ ಯಜರ್ ವೇದಿಗಳು ಸದಾ ಕಾಲ ಶುದ್ಧರಾಗಿ ಸೂರ್ಯನಷ್ಟೆ ಪ್ರಕಾಶ ಮಾನವಾಗಿರುವುದು ಇಂದಿಗೆ ಕಂಡು ಬರುತ್ತಿರುವ ಸತ್ಯವಾಗಿರುತ್ತದೆ.

ಶ್ರೀ ಯಜ್ಞವಲ್ಕ್ಯರ ಸ್ಮೃತಿಯ ಮೇಲೆ ನಮ್ಮ ಕರ್ನಾಟಕದವರೇ ಆದ ಸಂತ ಶ್ರೀ ವಿಜ್ಞಾನೇಶ್ವರ ರವರು ಬರೆದಿರುವ ಟೀಕೆ ಟಿಪ್ಪಣಿ ಶ್ರೀ ಮಿತಾಕ್ಷರ ಕಾನೂನು ಪದ್ಧತಿಯೆಂದು ಪ್ರಸಿದ್ಧವಾಗಿದೆ. ಕಾನೂನು ವಿಷಯಗಳಲ್ಲಿ Mitakshara School of Law ಎಂದೇ ಬಳಸಲಾಗುತ್ತಿದೆ. ಮಾನ್ಯ ಸುಪ್ರಿಂ ಕೋರ್ಟ್ ಮತ್ತು ಇತರೆ ರಾಜ್ಯಗಳ ಉಚ್ಚ ನ್ಯಾಯಾಲಯವು ತನ್ನ ಹಲವಾರು ತೀರ್ಪುಗಳಲ್ಲಿ ಶ್ರೀ ಯಜ್ಞವಲ್ಕ್ಯ ಸ್ಮೃತಿಯು ಉಲ್ಲೇಖಗಳನ್ನು ಉದಾಹರಿಸಿರುತ್ತದೆ. ಇದರಿಂದ ಶ್ರೀ ಯಜ್ಞವಲ್ಕ್ಯ ಸ್ಮೃತಿಯು ಸಮಾಜದ ಎಲ್ಲಾ ರಂಗಗಳಲ್ಲೂ ತನ್ನ ಪ್ರಾಭಲ್ಯವನ್ನು ಹರಡಿರುವುದಕ್ಕೆ ಕಾರಣವಾಗಿದೆ. ಶ್ರೀ ಯಜ್ಞವಲ್ಕ್ಯರಿಂದ ರಚಿತವಾದ ಶತಪಥ ಬ್ರಾಹ್ಮಣ ಈ ದಿನ ಜಗತ್ತಿನಲ್ಲಿ ಒಬ್ಬ ವ್ಯಕ್ತಿ ದೂರದೃಷ್ಟಿಯನ್ನು ಹೇಗೆ ಹೊಂದಿರಬೇಕೆಂದು ಹಾಗೂ ತನ್ನ ಸಮಾಜದ ಅಂಕು ಡೊಂಕುಗಳಿಗೆ ತನ್ನ ಹೆಜ್ಜೆಯನ್ನು ಹೇಗಿಡಬೇಕೆಂದು ತಿಳಿಸಿರುತ್ತಾರೆ. ಅದಲ್ಲದೇ ಬೃಹಾದಾರಣ್ಯಕ್ಕೆ ಉಪನಿಷತ್ ಜಗತ್ತಿನಲ್ಲಿ ಅಪಾರ ಜ್ಞಾನವನ್ನು ಸೂಕ್ತ ಪರಿಹಾರದೊಂದಿಗೆ ಪಸರಿಸಿದ ಉಪನಿಷತ್ತು ಆಗಿರುತ್ತದೆ.

ಶತಪಥ ಬ್ರಾಹ್ಮಣ ಎಂಬುದು ಪ್ರತಿ ವಯೋಮಾನದಲ್ಲೂ ಮನುಷ್ಯ ಜೀವಿಯು ಅನುಸರಿಸಬೇಕಾದ ಜೀವನದ ನಡಿಗೆಯನ್ನು ವಿಸ್ತಾರವಾದ ರೂಪದಲ್ಲಿ

ಹೇಳಿದೆ.  ಮಹಾ ರಾಜನಾದರೂ ಮತ್ತು ಸಾಮಾನ್ಯ ಮನುಷ್ಯನಾದರೂ ಮಮತೆ ಅನುರಾಗಗಳಲ್ಲಿ ಸಮಾನರಾಗಿರುತ್ತಾರೆ.  ಆದ್ಯಾತ್ಮಿಕತೆಯ ಬೇರು ಮನುಷ್ಯನಲ್ಲಿ ಹಾಸುಹೊಕ್ಕಿದರು ಭೋಗ ಭಾಗ್ಯಗಳನ್ನು ಹೊರಗೆಡುವಷ್ಟು ಪ್ರಭಲವಾಗಿರುವುದಿಲ್ಲ.  ದಾಂಪತ್ಯದ ಸಂಬಂಧಗಳು ಮೋಹಾನುಬಂಧಗಳನ್ನು ಗಟ್ಟಿಮಾಡಿದಷ್ಟು ಆಧ್ಯಾತ್ಮಿಕ ಬೇರುಗಳು ನೀರಿಲ್ಲದ ಒಣಗುವಿಕೆಯಿಂದ ಕೃಷವಾಗಿರುತ್ತದೆ.  ೬೦ನೇ ವರ್ಷದ ಶಾಂತಿಯಿಂದ ಈ ಬೇರುಗಳು ಮನುಷ್ಯ ಜೀವನದಲ್ಲಿ ಆಧ್ಯತ್ಮಿಕತೆಯ ಬೇರುಗಳಾಗಿ ಪರಿವರ್ತಿತವಾಗಿರುತ್ತದೆ.  ಅಂತಹ ಸಂದರ್ಭದಲ್ಲಿ ೭೦ನೇ ವರ್ಷದ ಭೀಮರಥ ಶಾಂತಿಯಿಂದ ಆಧ್ಯಾತ್ಮಿಕ ಬೇರುಗಳಿಗೆ ನೀರುಣಿಸುವ ಕಾರ್ಯ ಉಂಟಾಗುತ್ತದೆ.  ದಾನಧರ್ಮಗಳಿಂದ, ತ್ಯಾಗ ಮನೋಧರ್ಮದಿಂದ ಭೋಗಜೀವನವನ್ನು ಬದಿಗಿರಿಸಿ ಗೃಹಸ್ಥಾಶ್ರಮದಲ್ಲಿಯೇ ವಾನಪ್ರಸ್ಥವನ್ನು ಆಚರಿಸುವ ವೇದಿಕೆಯಾಗುತ್ತದೆ.

ತನ್ನ ವಂಶದ ಮತ್ತು ಕೌಟಂಬಿಕ ಸರಪಳಿಗೆ ತಾನೇ ಮೊದಲಾಗುವ ಆತ್ಮಾಹುತಿಗೆ ಸಿದ್ಧವಾಗುವ ಈ ೭೦ನೇ ವರ್ಷದ ಭೀಮರಥ ಶಾಂತಿ ಶ್ರೀಹರಿಯಲ್ಲಿ ನಂಬಿಕೆಯನ್ನು ದೃಡವಾಗಿಸುತ್ತದೆ.  ಗುಣಧರ್ಮವನ್ನು ಜನ್ಮಕರ್ಮಗಳನ್ನು ಸ್ವಯಂ ಶಕ್ತಿಯಿಂದ ಮೆಟ್ಟಿನಿಂತು ಆತ್ಮಜ್ಞಾನದಿಂದ ಧರ್ಮ ಪ್ರಭುದ್ಧತೆಗೆ ಹಾದಿ ಸುಗಮಗೊಳಿಸಲು ಯಶಸ್ಸನ್ನು ಸಾರುತ್ತದೆ.  ಕಿರಿಯರಾದ ನಾವು ಎಷ್ಟು ಇಂತಹ ಶಾಂತಿಯ ಹೋಮಗಳಲ್ಲಿ ಭಾಗವಹಿಸುತ್ತೇವೆ ಎನ್ನುವುದರ ಆಧಾರದ ಮೇಲೆ ನಮ್ಮ ಪಕ್ವತೆಯು ಹೆಚ್ಚುತ್ತದೆ ಎಂಬುದೇ ಆತ್ಮವಿಶ್ವಾಸದ ಪ್ರತೀಕ.